ದೆಹಲಿ ಕರ್ನಾಟಕ ಸಂಘದ

# ಅಭಿಮತ

ಫೆಬ್ರವರಿ 2012 ಬೆಲೆ ರೂ. 1.




ರಾಜಪಥದಲ್ಲಿ ಮೆರೆದ ಕರ್ನಾಟಕದ ಸಂಸ್ಕೃತಿ "ಭೂತಾರಾಧನೆ"

# ಪದ್ಮ ಪುರಸ್ಕೃತರು



**ಪದ್ಮಭೂಷಣ ಡಾ. ದೇವಿಪ್ರಸಾದ್ ಶೆಟ್ಟಿ**–ದಕ್ಷಿಣ ಕನ್ನಡದ ಕಿನ್ನಿಗೋಳಿ ಮೂಲದ ಡಾ. ದೇವಿಪ್ರಸಾದ್ ಶೆಟ್ಟಿಯವರಿಗೆ ಈ ಬಾರಿಯ ಪದ್ಮಭೂಷಣ ಪ್ರಶಸ್ತಿ ದೊರೆತಿದೆ. ಮಂಗಳೂರಿನ ಕಸ್ತೂರ್‌ಬಾ ವೈದ್ಯಕೀಯ ಕಾಲೇಜಿನಲ್ಲಿ ವೈದ್ಯಕೀಯ ಪದವಿ ಹಾಗೂ ಜನರಲ್ ಸರ್ಜರಿಯಲ್ಲಿ ಸ್ನಾತಕೋತ್ತರ ಪದವಿ ಪಡೆದ ಇವರು ಹೃದಯ ಚಿಕಿತ್ಸೆಗೆ ಸಂಬಂಧಿಸಿದ ಹೆಚ್ಚಿನ ತರಬೇತಿಯನ್ನು ಇಂಗ್ಲೆಂಡಿನ ವೆಸ್ಟ್ ಮಿಡ್‌ಲ್ಯಾಂಡ್ಸ್ ಕಾರ್ಡಿಯೋ ಥೊರಾಸಿಕ್ ರೊಟೇಶನ್ ಕಾರ್ಯಕ್ರಮದಡಿ ವಾಲ್ಸ್‌ಗ್ರೇವ್ ಆಸ್ಪತ್ರೆ ಹಾಗೂ ಬರ್ಮಿಂಗ್ ಹ್ಯಾಂ ಆಸ್ಪತ್ರೆಯಲ್ಲಿ ಕಾರ್ಡಿಯಾಕ್ ಸರ್ಜನ್ ಆಗಿ ಪಡೆದರು. ಅನಂತರ ಲಂಡನ್‌ನ ಗೈಸ್ ಹಾಸ್ಪಿಟಲ್‌ನ ಕಾರ್ಡಿಯೋ ಥೊರಾಸಿಕ್ ವಿಭಾಗದಲ್ಲಿ ಸೇರಿಕೊಂಡು (1983–89) ಹೃದಯದ ಪದರಗಳ ಬಿಡಿಸತೊಡಗಿದರು. ಗೈಸ್ ಹಾಸ್ಪಿಟಲ್‌ನಲ್ಲಿ ದೇವಿ ಶೆಟ್ಟಿ ಅವರ ಕಾರ್ಯಕ್ಷಮತೆಯನ್ನು ಮೆಚ್ಚಿದ ಅವರ ಸಹೋದ್ಯೋಗಿಗಳು ಅವರನ್ನು ಪ್ರೀತಿಯಿಂದ "ಆಪರೇಟಿಂಗ್ ಮೆನ್" ಎಂದು ಕರೆಯುತ್ತಿದ್ದರು. ಮನಸ್ಸು ಮಾಡಿದ್ದರೆ ದೇವಿ ಶೆಟ್ಟಿ ಅವರು ವಿದೇಶದಲ್ಲೇ ಉಳಿಯಬಹುದಿತ್ತು, ಆದರೆ 'ತಾನು ಭಾರತೀಯ, ಸಮಾಜದ ಕಟ್ಟ ಕಡೆಯ ಮನುಷ್ಯ ಕೂಡ ಅತ್ಯುತ್ತಮ ಆರೋಗ್ಯ ಸೇವೆಗಳಿಂದ ವಂಚಿತರಾಗಬಾರದು' ಎಂಬ ಸಾಮಾಜಿಕ ಪ್ರಜ್ಞೆ ಸದಾ ಅವರಲ್ಲಿ ಜಾಗೃತವಾಗಿದ್ದ ಕಾರಣ ಭಾರತಕ್ಕೆ ಹಿಂದಿರುಗಿ ಆಪರೇಟಿಂಗ್ ಮ್ಯಾನ್‌ನಂತೆ ಕಾರ್ಯಮಾಡತೊಡಗಿದರು. ಕೊಲ್ಕತ್ತಾದಿಂದ ವೃತ್ತಿಯನ್ನು ಆರಂಭಿಸಿದ ಶ್ರೀ ಶೆಟ್ಟಿಯವರಿಗೆ ಕಾಣಿಸಿದ್ದು ದಾರುಣ ಬಡತನ ಹಾಗೂ ಜನಸಾಮಾನ್ಯರ ಕಷ್ಟ ಅವರ ಮೇಲೆ ಬಹಳವಾಗಿ ಪ್ರಭಾವಬೀರಿತು. ಅಲ್ಲಿಯೇ ಅವರಿಗೆ ಮದರ್ ಥೆರೆಸಾರಿಗೆ ಚಿಕಿತ್ಸೆ ನೀಡುವ ಅವಕಾಶ ದೊರೆಯಿತು. ಬಡ ಜನರಿಗಾಗಿ ಹೃದ್ರೋಗ ಆಸ್ಪತ್ರೆಯನ್ನು ತೆರೆಯುವ ದೇವಿಪ್ರಸಾದ ಶೆಟ್ಟಿಯವರ ಕನಸು ಬೆಂಗಳೂರಿಗೆ ಬಂದ ಮೇಲೆ ನನಸಾಯಿತು. ಅಲ್ಲಿಯೇ ನಾರಾಯಣ ಹೃದಯಾಲಯವನ್ನು ತೆರೆದರು. ಪ್ರಸ್ತುತ ಇದು ವಿಶ್ವದ ಅತ್ಯುತ್ತಮ ಹೃದಯ ಚಿಕಿತ್ಸಾ ಕೇಂದ್ರಗಳಲ್ಲೊಂದಾಗಿ ಪ್ರಸಿದ್ಧಿ ಹೊಂದಿದೆ.



**ಪದ್ಮಶ್ರೀ ಉಲ್ಲಾಸ್ ಕಾರಂತ**–ಹೆಸರಾಂತ ಕನ್ನಡ ಲೇಖಕ, ಕಡಲತಡಿಯ ಭಾರ್ಗವ ಡಾ. ಕೆ. ಶಿವರಾಮ ಕಾರಂತರ ಪುತ್ರ, ನಿಸರ್ಗ ತಜ್ಞ, ಪರಿಸರವಾದಿ, ಅಳಿಯುತ್ತಿರುವ ಹುಲಿಗಳನ್ನು ಕಾಪಾಡುವಲ್ಲಿ ಗಣನೀಯವಾಗಿ ಸಂಶೋಧನೆ ನಡೆಸುತ್ತಿರುವ ಕೋಟ ಉಲ್ಲಾಸ್ ಕಾರಂತರಿಗೆ ಈ ಬಾರಿಯ ಪದ್ಮಶ್ರೀ ಪ್ರಶಸ್ತಿ ಅರಸಿ ಬಂದಿದೆ. ಭಾರತದಲ್ಲಿನ ಸಸ್ತನಿ ವನ್ಯಜೀವಿಗಳ ಗಣತಿಯನ್ನು ಕ್ಯಾಮೆರಾದ ಮೂಲಕ ಸೆರೆಹಿಡಿಯುವ ತಂತ್ರಜ್ಞಾನದಲ್ಲಿ ಇವರ ಮುಂಚೂಣಿಯ ಪ್ರಯತ್ನಗಳು ಗಮನಾರ್ಹವಾಗಿವೆ. ಇವರು ನ್ಯೂಯಾರ್ಕ್ ಮೂಲದ ವನ್ಯಜೀವಿ ಸಂರಕ್ಷಣಾ ಸೊಸೈಟಿ (WCS) ಮತ್ತು WCS ಹುಲಿ ಸಂರಕ್ಷಣಾ ಕಾರ್ಯಕ್ರಮದ ತಾಂತ್ರಿಕ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾರೆ. ಬಂಗಾಲದ ಹುಲಿಗಳನ್ನು ಉಳಿಸುವಲ್ಲಿ WCS-I ದ ಪ್ರಯತ್ನಗಳಿಗೆ ಕಾರಂತರು ನಿರ್ದೇಶಕರಾಗಿದ್ದಾರೆ. ನಾಗರಹೊಳೆ ರಾಷ್ಟ್ರೀಯ ಉದ್ಯಾನದಲ್ಲಿ ಪ್ರಾಣಿ ಸಂಖ್ಯೆಯನ್ನು ಉಳಿಸುವುದರಿಂದ ಹುಲಿಗಳ ಸಂಖ್ಯೆ ಹೇಗೆ ವೃದ್ಧಿಸುತ್ತದೆ ಎಂಬ ಇವರ ಪ್ರಾತ್ಯಕ್ಷಿಕೆ ವನ್ಯಜೀವಿ ಸಂರಕ್ಷಣೆಯ ಕ್ಷೇತ್ರದಲ್ಲಿ ಮಹತ್ವದ ಸುಳಿವಾಗಿದ್ದು ಅವರ ಈ ವನ್ಯಜೀವಿ ಸಂರಕ್ಷಣೆ ಮತ್ತು ಪರಿಸರ ಉಳಿಸುವ ಕಾರ್ಯಕ್ಕಾಗಿ ಪ್ರತಿಷ್ಠಿತ ಪದ್ಮಶ್ರೀ ದೊರೆತಿದೆ.



**ಪದ್ಮಶ್ರೀ ಚಿಟ್ಟಾಣಿ ರಾಮಚಂದ್ರ ಹೆಗಡೆ**–ಕಳೆದ ಸುಮಾರು 60 ವರ್ಷಗಳಿಂದ ಯಕ್ಷಗಾನ ರಂಗಭೂಮಿಯಲ್ಲಿ ದಿಗ್ವಿಜಯ ಸಾಧಿಸಿದ ಅಪ್ರತಿಮ ಕಲಾವಿದ ಚಿಟ್ಟಾಣಿ ರಾಮಚಂದ್ರ ಹೆಗಡೆ ಅವರಿಗೆ ಇದೀಗ ಪದ್ಮಶ್ರೀ ಪ್ರಶಸ್ತಿಯ ಗೌರವ ಲಭಿಸಿದೆ. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಹೊಸಾಕುಳಿ ಬಳಿಯ ಚಿಟ್ಟಾಣಿ ಎಂಬ ಪುಟ್ಟ ಊರಿನಲ್ಲಿ 18.09.1935ರಲ್ಲಿ ಜನಿಸಿದ ಈ ಕಲಾವಿದನಿಂದಾಗಿ ಇಂದು ಅವರ ಹುಟ್ಟಿದೂರು 'ಚಿಟ್ಟಾಣಿ' ರಾಷ್ಟ್ರವ್ಯಾಪಿ ಪ್ರಸಿದ್ಧಿಯನ್ನು ಪಡೆಯಿತು. ರಾಮಚಂದ್ರ ಹೆಗಡೆ ಅವರ ತಂದೆಯ ಹೆಸರು ಸುಬ್ರಾಯ ಹೆಗಡೆ ಯಕ್ಷಗಾನದ ದೊಡ್ಡ ಕಲಾವಿದರ್‍ಯಾರೂ ಯಕ್ಷಗಾನವನ್ನು ಶಾಸ್ತ್ರೋಕ್ತವಾಗಿ ಕಲಿತವರಲ್ಲ. ಚಿಟ್ಟಾಣಿಯವರಾದರೂ ಅಷ್ಟೆ. ಅಲ್ಲಿ ಇಲ್ಲಿ ಆಟ ನೋಡಿ ಭಜನೆ ಮಾಡುವವರೊಡನೆ ಹೆಜ್ಜೆ ಹಾಕಿದ ಇವರು ಶಾಲೆಯಲ್ಲಿ ಕಲಿತದ್ದು ಅಷ್ಟಕಷ್ಟೆ. ಗುರುಗಳಾದ ಬಾಳೆಗದ್ದೆ ರಾಮಕೃಷ್ಣ ಭಟ್ ಅವರಿಂದ ಬಹಳಷ್ಟು ಕಲಿತೆ ಎಂದು ಅವರು ಹೇಳುತ್ತಾರೆ. ಆದರೆ ಮುಂದೆ ಸ್ವತಂತ್ರ ಪರಿಶ್ರಮದಿಂದ ಹೆಜ್ಜೆ ಕಲಿತು ಹವ್ಯಾಸಿ ಕಲಾವಿದರೊಡನೆ ಕಲೆತು, ಕುಣಿದು ವೃತ್ತಿ ಮೇಳ ಸೇರಿ ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಅತೀವ ಪ್ರಖ್ಯಾತಿ ಗಳಿಸಿದ ಕಲಾವಿದರಾಗಿ ಬೆಳೆದರು. ಚಿಟ್ಟಾಣಿಯವರು ಪ್ರತಿನಾಯಕ ವೇಷದಲ್ಲಿಯೇ ಪ್ರಸಿದ್ಧರು. ಅವರ ಗದಾಯುದ್ಧದ ಕೌರವ, ಮೋಹಿನಿ ಭಸ್ಮಾಸುರರ ಭಸ್ಮಾಸುರ, ವಿರಾಟ ಪರ್ವದ ಕೀಚಕ, ವಲಲ ಭೀಮ, ಚಂದ್ರಹಾಸದ ದುಷ್ಟಬುದ್ಧಿ ಪಾತ್ರಗಳನ್ನು ಯಕ್ಷಗಾನ ಪ್ರೇಮಿಗಳು ಎಂದೂ ಮರೆಯಲಾರರು. ಯಕ್ಷಗಾನದ ಪರಂಪರೆ ಮತ್ತು ಜನಪ್ರಿಯತೆಗಳ ನಡುವಣ ತುಯ್ದಾಟದಲ್ಲಿ ಚಿಟ್ಟಾಣಿಯವರು ಜನಪ್ರಿಯ ಹಾದಿಯನ್ನು ಹಿಡಿದರು. ಯಕ್ಷಗಾನದ ತೆಂಕು–ಬಡಗು ತಿಟ್ಟುಗಳಲ್ಲಿ ಚಿಟ್ಟಾಣಿಯವರು ಬಡಗುತಿಟ್ಟನ್ನು ಪ್ರತಿನಿಧಿಸುವ ಕಲಾವಿದ. ಆದರೆ ಅವರ ಪ್ರಭಾವದಿಂದ ಎರಡು ತಿಟ್ಟಿನ ಕಲಾವಿದರಿಗೆ ಹೊರ ಬರಲಾಗಲಿಲ್ಲ ಎಂಬ ಅಂಶ ಚಿಟ್ಟಾಣಿಯವರ ಪ್ರಭಾವವನ್ನು ವಿವರಿಸುತ್ತದೆ.



**ಪದ್ಮಶ್ರೀ ನಾಗರತ್ನಮ್ಮ**–ಪುರುಷರಿಗೆ ಸರಿಸಮಾನರಾಗಿ ನಾಟಕ ಸಂಸ್ಥೆ ಕಟ್ಟಿ, ಮಹಿಳೆಯರಿಂದಲೇ ನಾಟಕ ಮಾಡಿಸಿ ಪುರುಷ ಪಾತ್ರಗಳನ್ನು ನಿರ್ವಹಿಸಿ ಸೈ ಎನ್ನಿಸಿಕೊಂಡ ನಾಗರತ್ನಮ್ಮನವರು ಹುಟ್ಟಿದ್ದು ಮೈಸೂರು. ತಂದೆ ಕೃಷ್ಣಭಟ್ಟರು, ತಾಯಿ ರುಕ್ಮಿಣಮ್ಮ. ಎಳೆ ವಯಸ್ಸಿನಿಂದಲೇ ಓದಿಗಿಂತ ರಂಗಭೂಮಿಯತ್ತಲೇ ಅವರಿಗೆ ಹೆಚ್ಚು ಒಲವು. ಕಲಾ ಸೇವಾ ಮಂಡಲಿಯ ಮೂಲಕ ರಂಗಭೂಮಿ ಪ್ರವೇಶಿಸಿದ ನಾಗರತ್ನಮ್ಮ ರಾಜಕುಮಾರ್ ಮುಂತಾದ ದಿಗ್ಗಜರೊಡನೆಯೂ ಅಭಿನಯಿಸಿದ್ದಾರೆ. ಮಂಜುನಾಥ್ ಕೃಪಾ ಪೋಷಿತ ನಾಟಕ ಸಂಸ್ಥೆ, ಚಾಮುಂಡೇಶ್ವರಿ ನಾಟಕ ಸಂಸ್ಥೆ, ಹಿರಣ್ಣಯ್ಯ ಮಿತ್ರ ಮಂಡಲಿ, ಎಂ.ವಿ. ಸುಬ್ಬಯ್ಯನಾಯ್ಡು ಅವರ ಕಂಪನಿ, ಹೀಗೆ ಹಲವಾರು ಕಂಪನಿಗಳನ್ನು ರಾಜ್ಯಾದ್ಯಂತ ತಿರುಗಾಡಿ ಅಭಿನಯಿಸಿದ ನಾಟಕಗಳು, ಪ್ರದರ್ಶನಗಳಿಗೆ ಲೆಕ್ಕವಿಲ್ಲ. ಪುರುಷ ಪಾತ್ರಗಳಿಗೂ ಜೀವ ತುಂಬಿದ ಅಭಿನಯ ಅವರದು. ಕೃಷ್ಣಲೀಲಾ–ಕೃಷ್ಣ, ಕೃಷ್ಣಗಾರುಡಿ–ಭೀಮ, ಸುಭದ್ರಾಪರಿಣಯದ– ಬಲರಾಮ, ಬೇಡರ ಕಣ್ಣಪ್ಪ –ಕಣ್ಣಪ್ಪ, ಸದಾರಮೆಯ – ಕಳ್ಳ, ಸಂಸಾರ ನೌಕೆ– ಸುಂದರ, ಹೀಗೆ ಹಲವಾರು ನಾಟಕಗಳಲ್ಲಿ ಅಭಿನಯಿಸಿ ಖ್ಯಾತಿ ಗಳಿಸಿದ್ದಾರೆ. 1958 ರಲ್ಲಿ 'ಶ್ರೀ ಸ್ತ್ರೀ ನಾಟಕ ಮಂಡಲಿ' ಸ್ಥಾಪಿಸಿ ಮಹಿಳೆಯರೇ ಪುರುಷ ಪಾತ್ರಗಳನ್ನು ನಿರ್ವಹಿಸಿದ್ದು ಒಂದು ಐತಿಹಾಸಿಕ ದಾಖಲೆ. ಇಪ್ಪತ್ತು ವರ್ಷ ಕಾಲ ಕಂಪನಿಯನ್ನು ನಿಭಾಯಿಸಿದ ಖ್ಯಾತಿ. ಹೋದೆಡೆಯಲ್ಲೆಲ್ಲಾ 50–100 ಪ್ರದರ್ಶನಗಳು. ರಾಜ್ಯಾದ್ಯಂತ ಪಡೆದ ಜನ ಮೆಚ್ಚುಗೆ. ವಿಜಾಪುರ, ಸಾಲಿಗ್ರಾಮ, ಚಿಕ್ಕಮಗಳೂರು, ಹಾಸನದಲ್ಲಿ ಮಳೆ ಬಂದರೂ ನಿಲ್ಲದೆ ಕೊಡೆ ಹಿಡಿದು ನಾಟಕ ಪ್ರದರ್ಶನ ನೀಡಿದ್ದರಂತೆ. ಸುಭದ್ರಾ ಪರಿಣಯದ ಅರ್ಜುನ, ಕೃಷ್ಣ ಗಾರುಡಿಯ ಭೀಮನಾಗಿ ನಾಗರತ್ನಮ್ಮ ಅಪಾರ ಜನಪ್ರಿಯತೆಯನ್ನು ಗಳಿಸಿದ್ದಾರೆ. ಕರ್ನಾಟಕ ನಾಟಕ ಅಕಾಡಮಿ ಸದಸ್ಯೆಯಾದ ಆರ್ ನಾಗರತ್ನಮ್ಮ ಗುಬ್ಬಿ ವೀರಣ್ಣ ಪ್ರಶಸ್ತಿ ಅಲ್ಲದೇ ಕೇಂದ್ರ ಸಂಗೀತ ನಾಟಕ ಅಕಾಡಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಪಡೆದಿದ್ದಾರೆ. ಇದೀಗ ಪದ್ಮಶ್ರೀ ತುಂಬ ತಡವಾಗಿ ಬಂದರೂ ಕನ್ನಡಿಗರಿಗೆ ಹೆಮ್ಮೆ ತಂದಿದೆ.



**ಪದ್ಮಶ್ರೀ ಯಜ್ಞಸ್ವಾಮಿ ಸುಂದರ ರಾಜನ್** – ಬಾಹ್ಯಾಕಾಶ ಸಂಶೋಧನೆ ಮತ್ತು ತಂತ್ರಜ್ಞಾನದ ಕ್ಷೇತ್ರದಲ್ಲಿ ನೀಡಿದ ಗಣನೀಯ ಕೊಡುಗೆಗಾಗಿ ಈ ಬಾರಿಯ ಪದ್ಮಶ್ರೀ ಪ್ರಶಸ್ತಿ ನೀಡಲಾಗಿದೆ. ಇಸ್ರೋವನ್ನು ಆರಂಭಿಕ ಹಂತಗಳಿಂದ ಅದು ಪ್ರಮುಖ ಸೇವೆಗಳನ್ನು ಒದಗಿಸುವಷ್ಟರ ಮಟ್ಟದಲ್ಲಿ ಎತ್ತಿ ಕಟ್ಟುವಲ್ಲಿ ಇವರ ಪಾತ್ರ ಗಮನಾರ್ಹವಾಗಿದೆ. ಶ್ರೀಯುತ ವೈ.ಎಸ್. ರಾಜನ್ ಅವರು ಅಮೇರಿಕಾದ ಪ್ರತಿಷ್ಠಿತ ಮೆಸೆಚ್ಯುಸೆಟ್ಸ್ ತಾಂತ್ರಿಕ ಸಂಸ್ಥೆ (MIT) ದಲ್ಲಿ 3ವರ್ಷ ಸೇವೆ ಸಲ್ಲಿದ್ದಾರೆ. ಉತ್ತಮ ತಂತ್ರಜ್ಞಾನಿ, ವಿಜ್ಞಾನಿ, ಆಡಳಿತಾಧಿಕಾರಿ, ಸಂಘಟಿತ, ಲೇಖಕ ಹಾಗೂ ಕವಿಯಾಗಿರುವ ಈ ಬಹುಮುಖಿ ವ್ಯಕ್ತಿತ್ವಕ್ಕೆ ಈ ಬಾರಿಯ ಪದ್ಮಪ್ರಶಸ್ತಿ ದೊರಕಿದೆ.

**ಪದ್ಮ ಪುರಸ್ಕೃತರಾದ ಈ ಎಲ್ಲ ಗಣ್ಯರಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು**

ಪ್ರಧಾನ ಸಂಪಾದಕರು
ಉಷಾ ಭರತಾದ್ರಿ

ಸಂಪಾದಕ ಮಂಡಳಿ
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಖಜಾಂಚಿ
ಕೆ.ಆರ್. ರಾಮಮೂರ್ತಿ

ಜಂಟಿ ಕಾರ್ಯದರ್ಶಿಗಳು
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

ಸಮಿತಿ ಸದಸ್ಯರು
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಜಿ. ಹೆಗಡಿ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

ಮುಖಪುಟ ಚಿತ್ರ
ಎಂ.ಎಂ. ಜೋಷಿ

**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

ಅಭಿಮತ
ಸಂಪುಟ 22 ಸಂಚಿಕೆ 5
ಫೆಬ್ರವರಿ 2012, ಬೆಲೆ ರೂ. 1

# ಮನದ ಮಾತು

ಜನವರಿ ತಿಂಗಳು ನಮ್ಮೆಲ್ಲರಲ್ಲಿ ದೇಶದ ಬಗೆಗಿನ ಒಲುಮೆಯನ್ನು ಮತ್ತಷ್ಟು ಉದ್ದೀಪಿಸುವ ತಿಂಗಳು. ಜನವರಿ 26ರಂದು ನಾವು 63ನೇ ಗಣರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಿದೆವು. ಆಳದಾಳದಿಂದ ಯೋಚಿಸಿದರೆ ಒಂದೆಡೆ ನೆಮ್ಮದಿ, ಇನ್ನೊಂದೆಡೆ ಹತಾಶೆ. ಹಾಗೆ ನೋಡಿದರೆ ನಾಲ್ಕು ಸಹಸ್ರ ವರ್ಷಗಳ ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಇತಿಹಾಸ ಹೊಂದಿದ ನಮ್ಮ ದೇಶ ಆಧುನಿಕ ಸಂದರ್ಭದಲ್ಲೂ ಅನೇಕ ಹೆಗ್ಗಳಿಕೆಗಳನ್ನು ಪಡೆದಿದೆ. ಪರಮಾಣು ಸಾಮರ್ಥ್ಯ, ವಿಶ್ವದಲ್ಲಿಯೇ ಮೂರನೇ ಅತಿ ದೊಡ್ಡ ಸೈನ್ಯ ಶಕ್ತಿ, ಉಪಗ್ರಹಗಳನ್ನು ಆಕಾಶದತ್ತ ಚಿಮ್ಮಿಸುವ ಚೈತನ್ಯ, ಕ್ಯಾಲಿಫೋರ್ನಿಯಾದ ಸಿಲಿಕಾನ್ ವ್ಯಾಲಿಯ ಏಕಸ್ವಾಮ್ಯತೆಯನ್ನು ತಪ್ಪಿಸಿ ಮಾಹಿತಿ ತಂತ್ರಜ್ಞಾನದಲ್ಲಿ ಮುನ್ನುಗ್ಗಿದ ಶ್ರೇಯಸ್ಸು–ಹೀಗೆ ಹತ್ತು ಹಲವು. ಆದರೆ ಇನ್ನೊಂದು ಮುಖವನ್ನು ನೋಡಿ. ಇತ್ತೀಚಿನ ಜಾಗತಿಕ ಮಾಪನದ ಪ್ರಕಾರ ಭಾರತ ಅತ್ಯಂತ ಹಸಿದ ಹೊಟ್ಟೆಗಳನ್ನು ಹೊಂದಿರುವ ದೇಶಗಳಲ್ಲಿ ಒಂದು. ಹಸಿವಿನ ಮಾಪನದ ಪ್ರಕಾರ 80 'ಹಸಿದ' ರಾಷ್ಟ್ರಗಳಲ್ಲಿ ನಮ್ಮ ದೇಶಕ್ಕೆ ಕೇವಲ 67ನೇ ಸ್ಥಾನ !! ಒಟ್ಟು ಜನಸಂಖ್ಯೆಯಲ್ಲಿ 230 ಮಿಲಿಯನ್ ಭಾರತೀಯರು ಪ್ರತಿದಿನ ಅಗುಳು ಅನ್ನವನ್ನೂ ಕಾಣಲಾರದೆ ಪರಿತಪಿಸುತ್ತಿದ್ದಾರೆ ಎಂದರೆ ಈ ದುರಂತದ ಪ್ರಗಾಢತೆ ವೇದ್ಯವಾಗುತ್ತದೆ. ಅಪೌಷ್ಟಿಕತೆಯ ವಿಚಾರ ಬಂದಾಗಲಂತೂ ಭಾರತ ನೇಪಾಳ, ಪಾಕಿಸ್ತಾನ, ಸೂಡಾನ್ ಹಾಗೂ ಉತ್ತರ ಕೊರಿಯಾಗಳಿಗಿಂತಲೂ ಕೆಳಮಟ್ಟದಲ್ಲಿದೆ. ಶೇಕಡ 21ರಷ್ಟು ಜನಸಂಖ್ಯೆ ಅಪೌಷ್ಟಿಕತೆಯಿಂದ ನರಳುತ್ತಿದೆ. ಶೇಕಡಾ 44ರಷ್ಟು ಐದು ವರ್ಷಗಳಿಗಿಂತ ಕೆಳಗಿನ ಮಕ್ಕಳು ಕಡಿಮೆ ತೂಕದಿಂದ ಬಳಲುತ್ತಿದ್ದಾರೆ. ಅಷ್ಟೇ ಅಲ್ಲ ಹುಟ್ಟುವ ಮಕ್ಕಳಲ್ಲಿ ಶೇಕಡಾ 7ರಷ್ಟು ಐದು ವರ್ಷ ವಯೋಮಾನದ ಒಳಗೇ ಸಾಯುತ್ತಿದ್ದಾರೆ. ಇದು ನಿಜಕ್ಕೂ ನಾಚಿ ತಲೆ ತಗ್ಗಿಸುವ ಸಂಗತಿ. ಅತ್ಯಂತ ಶ್ರೀಮಂತಿಕೆ ಹಾಗೂ ಅತ್ಯಂತ ಬಡತನಗಳೆಂಬ ವೈಪರೀತ್ಯದ ಗೆರೆ ಅಳಿಯಲಿ; ಸರ್ಕಾರದ ಸೂಕ್ತ ಹೊಣೆಗಾರಿಕೆಯಿಂದ ದೇಶ ಅಭಿವೃದ್ಧಿಯತ್ತ ಸಾಗಲಿ ಎಂಬುದು ನಮ್ಮ ಆಶಯ.

ನಮ್ಮೆಲ್ಲರಿಗೂ ನೆನಪಿದೆ, ನಮ್ಮ ಜಾನಪದ ಕ್ರೀಡೆಗಳಾದ ಪಗಡೆ, ಚೌಕಾಭಾರ, ಅಳಿಗುಳಿ ಮನೆ ಆಟ ಇತ್ಯಾದಿ ಗಣಿತಾಧಾರಿತ ಆಟಗಳು ರಂಜನೆಯ ಜತೆ ಕೂಡಿ–ಕಳೆಯುವ ಲೆಕ್ಕದಿಂದ ನಮ್ಮ ಮಿದುಳು ಚುರುಕುಗೊಳ್ಳುತ್ತಿತ್ತು. ಹಾಗೇ ಗಣಿತದ ಬಗೆಗಿನ ಪ್ರೀತಿಯೂ ಅಧಿಕಗೊಳ್ಳುತ್ತಿತ್ತು. ಆದರೆ ಈಗ ಟಿವಿಯ ಮಾಧ್ಯಮ ಇವೆಲ್ಲವನ್ನೂ ಕಸಿದುಕೊಂಡಿದೆ. ಮಕ್ಕಳು ಕಾರ್ಟೂನ್, ಸಿನೆಮಾ ಸಂಗೀತದಲ್ಲಿ ಮುಳುಗಿ ನಿತ್ಯ ಜೀವನದಲ್ಲಿ ಗಣಿತದ ಮೂಲಕ ಲಭಿಸುತ್ತಿದ್ದ ರಂಜನೆಯನ್ನೇ ಕಳೆದುಕೊಳ್ಳುತ್ತಿದ್ದಾರೆ. ನಮ್ಮ ಜನಪದರಲ್ಲಿದ್ದ ವಿನೋದ ಗಣಿತ ಗತಕಾಲದಲ್ಲಿ ಹೂತು ಹೋಗಿದೆ. ಆರ್ಯಭಟ, ಭಾಸ್ಕರರಂತಹ ಗಣಿತ ತಜ್ಞರನ್ನು ಹೊಂದಿದ್ದ ನೆಲ, ಕೇವಲ ನೂರು ವರ್ಷಗಳ ಕೆಳಗೆ ತನ್ನ ಪ್ರೌಢಿಮೆಯ ವಿಶ್ಲೇಷಣಾ ಸಾಮರ್ಥ್ಯದಿಂದ ಜಗತ್ತಿನ ಜಡ್ಡು ಹಿಡಿದಿದ್ದ ಗಣಿತಕ್ಕೆ ಹೊಸ ಜೀವನವನ್ನು ನೀಡಿದ ಶ್ರೀನಿವಾಸ ರಾಮಾನುಜಂ ಬದುಕಿದ್ದ ದೇಶ–ಇತ್ತೀಚಿನ Math-Olympiad ನಲ್ಲಿ ನೂರು ರಾಷ್ಟ್ರಗಳ ಪೈಕಿ ಶೋಚನೀಯ 23ನೇ ಸ್ಥಾನಕ್ಕೆ ಕುಸಿದಿದೆ ಎಂಬುದು ಬೆಚ್ಚಿ ಬೀಳಿಸುವ ಸಂಗತಿ. ಅಷ್ಟೇ ಅಲ್ಲ, ಗಣಿತ ಹಾಗೂ ವಿಜ್ಞಾನ ಶಿಕ್ಷಣದಲ್ಲಿ ನಮ್ಮ ದೇಶ ಆಧುನಿಕ ಸಂದರ್ಭದಲ್ಲಿ ಅವಮಾನಕರ ಅನ್ನಿಸುವಂತಹ 32ನೇ ಸ್ಥಾನದಲ್ಲಿದೆ. ಅರ್ಥತಜ್ಞ ಹಾಗೂ ಪ್ರಧಾನಿ ಮನಮೋಹನ್‌ಸಿಂಗ್ ಅವರು ಎಚ್ಚೆತ್ತುಕೊಂಡು 2012ನ್ನು ಗಣಿತದ ರಾಷ್ಟ್ರೀಯ ವರ್ಷ ಎಂದು ಘೋಷಿಸಿದ್ದಾರೆ. ನಮ್ಮ ಶಿಕ್ಷಣ ತಜ್ಞರು ಈಗಲಾದರೂ ಶಿಕ್ಷಣ ಕ್ಷೇತ್ರದಲ್ಲಿ ಗಣಿತಕ್ಕಾಗಿರುವ ಅನ್ಯಾಯವನ್ನು ಮನಗಂಡು ಆಮೂಲಾಗ್ರ ಬದಲಾವಣೆ ಮಾಡಬೇಕಿದೆ. ನಮ್ಮ ಜಾನಪದ ವಿದ್ವಾಂಸರು 'ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತ ಮತಿ'ಗಳಾದ ನಮ್ಮ ಹಿರಿಯರು ಬಾಹ್ಯ ಪರಂಪರೆಯಲ್ಲಿ ಕಂಡುಕೊಂಡಿದ್ದ 'ಗಣಿತ ದರ್ಶನ'ಗಳನ್ನು ದಾಖಲಿಸಬೇಕು. ಮನೆಯಲ್ಲಿ ತಂದೆ ತಾಯಂದಿರು ಮಕ್ಕಳೊಡನೆ 'ಲೆಕ್ಕದಾಟ' ಆಡುವುದನ್ನು ಶುರು ಹಚ್ಚಬೇಕು. ಅದಕ್ಕೂ ಮುನ್ನ ಅವರೂ ಲೆಕ್ಕ ಕಲಿಯುವಲ್ಲಿ (ಇಲ್ಲಿಯವರೆಗೆ ಕಲಿಯದಿದ್ದರೆ) ಆಸಕ್ತಿ ತೋರಬೇಕು. ಯಾರಾದರೂ ಜೀವನದಲ್ಲಿ ಎಡವಿದರೆ ನಮ್ಮ ಬಾಯಲ್ಲಿ ಬರುವ ಮೊದಲ ಮಾತೇ 'ಎಲ್ಲೋ ಲೆಕ್ಕಾಚಾರ ತಪ್ಪಿದ್ದಾರೆ' ಎಂಬುದು! ಜೀವನಕ್ಕೂ ಲೆಕ್ಕಕ್ಕೂ ನಂಟು ಅಪಾರ, ಅನಿವಾರ್ಯ ಹಾಗೂ ಅತ್ಯಂತ ಆವಶ್ಯಕ. ಭಾಸ್ಕರ, ಆರ್ಯಭಟ, ರಾಮಾನುಜಂರಂತಹ ದಿಗ್ಗಜರಿಗೆ ಜನ್ಮವಿತ್ತ ಭಾರತ ಮಾತೆ ಮತ್ತೊಮ್ಮೆ ಗಣಿತ ಕ್ಷೇತ್ರದಲ್ಲಿ ವಿಸ್ಮಯಗಳನ್ನು ಸೃಷ್ಟಿಸಲಿ, ಗಣಿತದ ಮೇಲಿನ ಭಾರತದ ಪಾರಮ್ಯವನ್ನು ಉಳಿಸಿಕೊಳ್ಳಲಿ ಎಂಬುದು ನಮ್ಮ ಅಭಿಲಾಷೆ.

ಗಣರಾಜ್ಯೋತ್ಸವದ ಸಂದರ್ಭದಲ್ಲಿ ಕರ್ನಾಟಕದ ಐವರು ಗಣ್ಯರಿಗೆ ಪದ್ಮ ಪ್ರಶಸ್ತಿಗಳು ಲಭಿಸಿವೆ. ಹೃದಯ ಶಸ್ತ್ರ ಚಿಕಿತ್ಸೆಯಲ್ಲಿ ಅಪರಿಮಿತ ಸಾಧನೆ ಮಾಡಿ, ಜನಪರ ಧೋರಣೆಗಳಿಂದ ಅತ್ಯಂತ ಬಡವರಿಗೂ ಈ ಚಿಕಿತ್ಸೆ ಲಭ್ಯ ಎಂದು ತೋರಿಸಿಕೊಟ್ಟ ನಮ್ಮ ಹೆಮ್ಮೆಯ ಡಾ. ದೇವಿಶೆಟ್ಟಿ ಅವರಿಗೆ ಪದ್ಮಭೂಷಣ ಪ್ರಶಸ್ತಿ ಬಂದದ್ದು ನಮಗೆಲ್ಲ ಸಂತಸದ ಸಂಗತಿ. ಸ್ತ್ರೀ ನಾಟಕ ಮಂಡಳಿ ಸ್ಥಾಪಿಸಿ ದಶಕಗಟ್ಟಲೆ ಪುರುಷ ಪಾತ್ರಗಳಲ್ಲಿ ತಮ್ಮ ಅಪೂರ್ವ ಪ್ರತಿಭೆ ಪ್ರದರ್ಶಿಸಿದ್ದ ನಾಗರತ್ನಮ್ಮನವರಿಗೆ ಪದ್ಮಶ್ರೀ ಎಂದೋ ಬರಬೇಕಿತ್ತು, ಈಗ ಬಂದಿದೆ. ಪರಿಸರದ ಬಗ್ಗೆ ಅಪೂರ್ವ ಕಾಳಜಿ ತೋರಿ ಅಳಿಯುತ್ತಿರುವ ವನ್ಯಜೀವಿಗಳ ರಕ್ಷಣೆ ಬಗ್ಗೆ ಎಲ್ಲರ ಗಮನ ಸೆಳೆದ ಡಾ. ಉಲ್ಲಾಸ ಕಾರಂತ, ಯಕ್ಷಗಾನದಲ್ಲಿ ಅಪರಿಮಿತ ಸಾಧನೆ ಮಾಡಿರುವ ಚಿಟ್ಟಾಣಿ ರಾಮಚಂದ್ರ ಹೆಗಡೆ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಡಾ. ಯಜ್ಞಸ್ವಾಮಿ ಸುಂದರ ರಾಜನ್ ಅವರುಗಳಿಗೆ ಪದ್ಮಶ್ರೀ ಪ್ರಶಸ್ತಿ ಸಂದಿದೆ. ನಾಡಿನ ಕೀರ್ತಿಯನ್ನು ರಾಷ್ಟ್ರಮಟ್ಟದಲ್ಲಿ ಪ್ರತಿಷ್ಠಾಪಿಸಿದ ಈ ಮಹನೀಯರಿಗೆ ಅಭಿನಂದನೆಗಳು ಹಾಗೂ ಅಭಿವಂದನೆಗಳು. ಅಷ್ಟೇ ಅಲ್ಲ, ಸಾಂದರ್ಭಿಕ ಧೈರ್ಯ, ಸಮಯಪ್ರಜ್ಞೆ, ಸಾಹಸಗಳನ್ನು ಪ್ರದರ್ಶಿಸಿದ ಕನ್ನಡದ ಇಬ್ಬರು ಕಂದಮ್ಮಗಳಿಗೆ ರಾಷ್ಟ್ರೀಯ ಶೌರ್ಯ ಪ್ರಶಸ್ತಿ ಲಭಿಸಿದೆ. ಈ ಪುಟಾಣಿಗಳಿಗೆ ಶುಭ ಹಾರೈಸುತ್ತೇವೆ. ಗಣರಾಜ್ಯೋತ್ಸವ ಪರೇಡ್‌ನಲ್ಲಿ ಕರ್ನಾಟಕದ ಸಂಸ್ಕೃತಿಯನ್ನು ಪ್ರತಿಬಿಂಬಿಸಿದ 'ಭೂತಾರಾಧನೆ' ಸ್ತಬ್ಧ ಚಿತ್ರಕ್ಕೆ ಮೂರನೇ ಬಹುಮಾನ ದೊರೆತದ್ದು ಮತ್ತೊಂದು ಸಂತಸದ ಸಂಗತಿ. ವಾರ್ತಾ ಇಲಾಖೆಯ ನಿರ್ದೇಶಕ ಕೆ.ಎಸ್. ಬೇವಿನಮರದ, ಜಂಟಿ ನಿರ್ದೇಶಕ ಎಸ್.ವಿ. ಲಕ್ಷ್ಮೀನಾರಾಯಣ್, ದೆಹಲಿಯ ಸಹ ನಿರ್ದೇಶಕ ಗಿರೀಶ್ ಮತ್ತು ತಂಡದವರಿಗೆ ಅಭಿನಂದನೆಗಳು.

❑ ಉಷಾ ಭರತಾದ್ರಿ

ಅಂತರಾಳದಿಂದ...

ಈ ವರುಷ ದೆಹಲಿಗೆ ತುಂಬಾ ಸಂಭ್ರಮದ ವರುಷವೆಂದುಕೊಂಡು ನಾವೆಲ್ಲ ಹೇಳಿಕೊಳ್ಳುತ್ತಿದ್ದೇವೆ. ದೆಹಲಿಗೆ ರಾಜಧಾನಿಯ ಪಟ್ಟ ದೊರೆತು ಇವತ್ತಿಗೆ ನೂರು ವರ್ಷಗಳಾಯಿತು. ಕಲ್ಕತ್ತಾದಿಂದ ದೆಹಲಿಗೆ ಬ್ರಿಟಿಷ್ ವಸಾಹತುಶಾಹಿ ದೊರೆಗಳು ಯಾವುದೋ ಕಾರಣಕ್ಕಾಗಿ ಈ ರಾಜಧಾನಿಯ ಸ್ಥಳಾಂತರವನ್ನು ಮಾಡಿದರು. ಚಾರಿತ್ರಿಕವಾಗಿ ಇದು ನಮಗೆ ಅಷ್ಟೊಂದು ಪ್ರಮುಖವಾದ ಘಟನೆಯಾಗಬಾರದು. ಆದರೆ, ಹಲವಾರು ಪತ್ರಿಕೆಗಳು ಈ ಕುರಿತಾಗಿ ವಿಸ್ತೃತವಾದ ಲೇಖನಗಳನ್ನು ಪ್ರಕಟಿಸಿವೆ. ಅಭಿಮತದ ಕಳೆದ ಸಂಚಿಕೆಯು ಈ ನಮ್ಮ ದೆಹಲಿಯ ಕುರಿತಾದ ಸಂಭ್ರಮದ ಸಂಚಿಕೆಯಾಗಿದೆ. ದೆಹಲಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಮೊಗಲರ ಆಳ್ವಿಕೆಯ ಕಾಲದಲ್ಲಿ ಅದು ಪ್ರವರ್ಧಮಾನಕ್ಕೆ ಬಂದಿತು. ಅದಕ್ಕೂ ಮೊದಲು ದೆಹಲಿಯೊಂದು ಪುಟ್ಟ ಹಳ್ಳಿಯಾಗಿತ್ತು. ಹತ್ತಾರು ಹಳ್ಳಿಗಳು ಹರಡಿಕೊಂಡು, ಈಗ ಈ ಹಳ್ಳಿಗಳೆಲ್ಲ ದೆಹಲಿಯೆಂಬ ಮಹಾನಗರಿಯ ಉದರದಲ್ಲಿ ಸೇರಿ ಹೋಗಿವೆ. ಮೊಗಲರು ದೆಹಲಿಯಿಂದ, ಇಲ್ಲಾ ಆಗ್ರಾದಿಂದ ಭಾರತದ ಬಹುತೇಕ ಭಾಗವನ್ನು ಆಳಿದರು. ಒಂದು ದೃಷ್ಟಿಯಿಂದ ರಾಜಕೀಯವಾಗಿ ಮೊಗಲರು ಭಾರತಕ್ಕೆ ಬಂದು ಇಡೀ ರೂಪವನ್ನುಕೊಟ್ಟರು ಎಂದರೆ ತಪ್ಪಾಗಲಾರದು. ದೇಶದ ತುಂಬ ತುಂಬಿ ಹೋಗಿದ್ದ ಸುಮಾರು ಆರುನೂರು ರಾಜಮನೆತನಗಳು ಬ್ರಿಟಿಷರ ಅಡಿಯಲ್ಲಿ ಬಂದಿದ್ದವು. ಬ್ರಿಟಿಷರ 'ಒಡೆದು ಆಳುವ' ನೀತಿಯಿಂದಾಗಿ ಭಾರತ ಒಂದು ಇಡೀ ದೇಶವಾಗಿ ಉಳಿಯುವುದೇ ಕಷ್ಟವಿತ್ತು. ನಂತರದಲ್ಲಿ ನಮ್ಮ ದೇಶದ ಸ್ವಾತಂತ್ರ್ಯಕ್ಕೆ ಹೋರಾಡಿದ ಧುರೀಣರು ಇಡೀ ಭಾರತದ ಪರಿಕಲ್ಪನೆಯನ್ನು ಕಂಡುಕೊಂಡು, ನಂತರದಲ್ಲಿ ಅದನ್ನು ಸಮರ್ಥವಾಗಿ ಸಾಕಾರಗೊಳಿಸಿದರು. 1911ರಲ್ಲಿ ಬ್ರಿಟಿಷರು ತಮ್ಮ ಆಡಳಿತವನ್ನು ದೆಹಲಿಗೆ ಸ್ಥಳಾಂತರಿಸಿದ್ದು ಅವರ ಆಳ್ವಿಕೆಯ ಅನುಕೂಲಕ್ಕಾಗಿ. ಅಫಘಾನಿಸ್ತಾನದಿಂದ ಬರ್ಮಾದವರೆಗೆ ಹಬ್ಬಿದ ಈ ವಸಹಾತುಶಾಹಿ ಆಳ್ವಿಕೆಯ ಮೂಲದಲ್ಲಿ ಅಡಗಿದ ವಿಚಾರವೆಂದರೆ–ದೆಹಲಿಗೆ ಬಂದರೆ ಇಡೀ ದಕ್ಷಿಣ ಏಶಿಯಾವನ್ನು ಸಮರ್ಥವಾಗಿ ಹಾಗೂ ಸಮರ್ಪಕವಾಗಿ ನಿಯಂತ್ರಿಸಬಹುದೆಂಬುದು. 1911ರಲ್ಲಿ ಇಂಗ್ಲೆಂಡಿನ ರಾಜ ದೆಹಲಿಗೆ ಬಂದಿದ್ದು ಇದೇ ಕಾರಣಕ್ಕಾಗಿ. ಭಾರತದ ಉದ್ದಗಲಕ್ಕೂ ಹರಡಿದ್ದ ಬಡಜನತೆಯ ಮೇಲೆ ಇವರಾರಿಗೂ ಪ್ರೇಮವೇನು ಇದ್ದಂತೆ ತೋರುವುದಿಲ್ಲ.

ದೆಹಲಿ ರಾಜಧಾನಿಯಾದ ಮೇಲೆ ಅದನ್ನು ಕಟ್ಟುವ ಕೆಲಸವೂ ಪ್ರಾರಂಭವಾಯಿತು. ರಾಜಧಾನಿಯೆಂದ ಮೇಲೆ ರಾಜಧಾನಿಯ ಹಾಗೆಯೇ ಇರಬೇಕಲ್ಲವೇ? ನೋಡುವವರಿಗೆ, ಜನಸಾಮಾನ್ಯರಿಗೆ ಈ ಸರಕಾರಿ ಕಟ್ಟಡಗಳನ್ನು ನೋಡಿದರೆ ಒಂದು ಬಗೆಯ ಭಯ ಹಾಗೂ ಗೌರವ ಹುಟ್ಟಬೇಕು. ಆ ಕಾರಣಕ್ಕಾಗಿ, ರಾಷ್ಟ್ರಪತಿ ನಿವಾಸ ಹಾಗೂ ಇತರ ಸರಕಾರಿ ಆವಾಸಗಳನ್ನು ಅದ್ಭುತವೆನಿಸುವ ರೀತಿಯಲ್ಲಿ ಹಾಗೂ ಎತ್ತರದಲ್ಲಿ ಕಟ್ಟಲಾಯಿತು. ಈ ರೈಸಿನಾ ಬೆಟ್ಟದ ತುದಿಯಲ್ಲಿರುವ ದೆಹಲಿಯ ರಾಜಸತ್ತೆಯ ಕಟ್ಟಡಗಳು ತುಂಬಾ ವಿಶಾಲವಾಗಿವೆ. ನೋಡುವವರಿಗೆ ಒಂದು ಬಗೆಯ ಭಯ ಹಾಗೂ ಗೌರವವೂ ಹುಟ್ಟುವಂತೆ ನೋಡಿಕೊಳ್ಳುತ್ತದೆ. ಹಿಂದಿನ ರಾಜರು ದೊಡ್ಡ ದೊಡ್ಡ ಕೋಟೆಗಳನ್ನು ಕಟ್ಟಿದರು. ನೂರಾರು–ಸಾವಿರಾರು ಜನ ಸಂದರ್ಭ ಬಂದಾಗ ಈ ಕೋಟೆಗಳಲ್ಲಿ ತಂಗಿಕೊಂಡು ರಕ್ಷಣೆ ಪಡೆಯಬಹುದಾಗಿತ್ತು. ದೆಹಲಿಯ ಈ ವಸಹಾತುಶಾಹಿ ಕಟ್ಟಡಗಳಲ್ಲಿ ಇಡೀ ದೇಶವನ್ನು ಶಕ್ತಿಯಿಂದ ಆಳುವ ರಾಜಕೀಯ ಪತ್ತೆಗಾರರು ಇರುತ್ತಾರೆ. ಈ ಕಟ್ಟಡಗಳನ್ನು ಎಲ್ಲರಿಗೂ ಸುಲಭವಾಗಿ ಎಟಕುವಂತೆ ಕಟ್ಟಬಹುದಾಗಿತ್ತು. ಈ ಅಭ್ಯಾಸ ನಮ್ಮನ್ನು ತೊರೆದು ಹೋಗಿಲ್ಲ. ಈಗಲೂ ನಮ್ಮ ದೇಶದ ಹಲವಾರು ಸತ್ತೆಯನ್ನು ಇರಿಸಿಕೊಂಡ ಕಟ್ಟಡಗಳು ಈ ಸತ್ತೆಯ ಶಕ್ತಿಯನ್ನು ಅರಿವು ಮಾಡಿಕೊಡುವ ರೀತಿಯಲ್ಲೇ ಕಟ್ಟಲ್ಪಡುತ್ತವೆ. ತುಂಬಾ ಸರಳವಾಗಿ, ಜನರಿಗೆ ಪ್ರಿಯವಾಗುವ ಮನೆಗಳಂತಹ ಕಟ್ಟಡಗಳನ್ನು ನಾವು ದೆಹಲಿಯಲ್ಲಿ ಕಾಣುವಂತಿಲ್ಲ. ಹೀಗಾಗಿ ದೆಹಲಿಯ ತುಂಬ ಒಂದು ಬಗೆಯ ಒಂಟಿತನ ಆವರಿಸಿದೆ. ಒಂದು ಕಟ್ಟಡದಿಂದ ಇನ್ನೊಂದು ಕಟ್ಟಡದ ನಡುವೆ ಇರುವ ಜಾಗೆಯಲ್ಲಿ ಸತ್ತೆಯ ಶಕ್ತಿ ಅಡಗಿದೆ. ಈ ಬಗೆಯ ರಾಜಧಾನಿಯ ರೂಪ ದೆಹಲಿಗೆ 1911ರಿಂದಲೇ ಬರಲು ಪ್ರಾರಂಭವಾಯಿತು. ಅದು ಈಗಲೂ ಒಂದಲ್ಲ ಒಂದು ಬಗೆಯಲ್ಲಿ ಮುಂದುವರಿದಿದೆ.

ಇಷ್ಟೆಲ್ಲಾ ಕಟ್ಟಿಕೊಂಡು, ರಾಜಕೀಯ ಶಕ್ತಿ ಹಾಗೂ ಸತ್ತೆಯನ್ನು ಅರಗಿಸಿಕೊಂಡು ಕುಳಿತ ಬ್ರಿಟಿಷರು ಸುಮ್ಮನೆ ಬಿಟ್ಟು ಹೋಗುವವರೇ? ಎರಡನೇಯ ಮಹಾಯುದ್ಧದ ನಂತರ ಬ್ರಿಟನ್ ಅನುಭವಿಸಿದ ಸಾವು–ನೋವು ಹಾಗೂ ತಲೆಯ ಮೇಲೇರಿದ ಸಾಲ ಭಾರತದಂತಹ ದೇಶವನ್ನು ಕೈ ಮುಷ್ಟಿಯಲ್ಲಿ ಇರಿಸಿಕೊಂಡು ಆಳುವುದ ಕಷ್ಟಸಾಧ್ಯವಾಗಿ ಮಾಡಿತು. ಗಾಂಧಿ ಹಾಗೂ ಕಾಂಗ್ರೆಸಿನವರ ಚಳುವಳಿ ಬೇರೆ. ಬ್ರಿಟಿಷರು ಸುಮ್ಮಗೆ ಮನೆಗೆ ಮರಳಿದರು. ಬ್ರಿಟಿಷರು ಮೊದಲು ವ್ಯಾಪಾರಕ್ಕೆಂದು ಬಂದು ತಳವೂರಿದ್ದು ಕೊಲಕತ್ತಾಗೆ ಎಂಬುದನ್ನು ನಾವು ಮರೆಯಬಾರದು. ಹೀಗೆ ವ್ಯಾಪಾರಕ್ಕೆಂದು ಬಂದವರು, ಸತ್ತೆಯನ್ನು ಕಟ್ಟಿಕೊಂಡರು. ಈ ಸತ್ತೆಯ ಶಕ್ತಿ ಅವರ ವ್ಯಾಪಾರಕ್ಕೆ ಅನುಕೂಲವಾಯಿತು. ಕಲ್ಕತ್ತಾದಲ್ಲೇ ತಳವೂರಿದರು. ಅಲ್ಲೇ ತಳವೂರಿ ಸುಮಾರು ನೂರಾಐವತ್ತು ವರ್ಷಗಳ ಕಾಲ ಆಳ್ವಿಕೆಯನ್ನು ಮಾಡಿದರು. ತಮಗೆ ಬೇಕಾದ ಹಾಗೆ ಒಡೆದು ಹೋದ ಭಾರತ ಹಾಗೂ ಭಾರತೀಯರನ್ನು ಬಳಸಿಕೊಂಡರು. 1930ರ ದುಂಡು ಮೇಜಿನ ಪರಿಷತ್ತಿನ ಸಭೆಯಿಂದ ನಿರಾಶರಾಗಿ ಗಾಂಧೀಜಿ ಮರಳಿ ಬಂದದ್ದೇ ಹೀಗೆ. ಭಾರತಕ್ಕೆ ಸ್ವಾತಂತ್ರ್ಯವೆಂದರೆ ನೂರಾರು ಪುಟ್ಟಪುಟ್ಟ ರಾಜ್ಯಗಳಿಗೂ ಸ್ವಾತಂತ್ರ್ಯ ಬಂದಿತು ಎಂದುಕೊಳ್ಳಬಹುದು. ನಮ್ಮ ಸುದೈವದಿಂದ ಹಾಗಾಗಲಿಲ್ಲ. ಭಾರತವನ್ನು ಕಟ್ಟುವವರ ಮನದಲ್ಲಿ ಇಡೀ ಭಾರತದ ರೂಪವೇ ಇತ್ತು. ಹೀಗಾಗಿ ನಾವೆಲ್ಲರೂ ಈ ಇಡೀಯ ಸ್ವತಂತ್ರ ಭಾರತದಲ್ಲಿದ್ದೇವೆ.

ಈ ದೃಷ್ಟಿಯಿಂದ 1911ರ ಸಂಭ್ರಮ ನಮಗೆ ಎಚ್ಚರದ ಗಂಟೆಯಾಗಬೇಕು.

❑ ಡಾ. ವೆಂಕಟಾಚಲ ಹೆಗಡೆ

## ಉಚಿತ ವೈದ್ಯಕೀಯ ತಪಾಸಣೆ

ಫೆಬ್ರವರಿ 26ರ ಭಾನುವಾರದಂದು ಡಾ. ಭೀಮಭಟ್ ಅವರಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಲಿದೆ. ದೆಹಲಿ ಕನ್ನಡಿಗರು ಈ ವೈದ್ಯಕೀಯ ಸೇವೆಯನ್ನು ಸದುಪಯೋಗಪಡಿಸಿ ಕೊಳ್ಳಬೇಕಾಗಿ ವಿನಂತಿ.

## ದೆಹಲಿ ಕರ್ನಾಟಕ ಸಂಘ

## ವಾರ್ಷಿಕೋತ್ಸವದ ಆಟೋಟ ಸ್ಪರ್ಧೆಗಳು

**ಫೆಬ್ರವರಿ 12, ವಾಲಿಬಾಲ್, ತ್ರೋಬಾಲ್, ಕಬಡ್ಡಿ**

ಸ್ಥಳ : ಡಿ.ಪಿ.ಎಸ್., ಸೆಕ್ಟರ್–12, ಆರ್.ಕೆ.ಪುರಂ, ನವದೆಹಲಿ

**ಫೆಬ್ರವರಿ 18, ಟೇಬಲ್ ಟೆನ್ನಿಸ್ ಮತ್ತು ಶಟಲ್ ಬ್ಯಾಡ್ಮಿಂಟನ್**

ಸಮಯ : 1.00 ರಿಂದ 5.30

ಸ್ಥಳ : ಸ್ಪೋರ್ಟ್ಸ್ ಯುನಿಟ್, ಆರ್.ಸಿ.ಎ. ಕಾಂಪ್ಲೆಕ್ಸ್, ಐ.ಐ.ಟಿ. ನವದೆಹಲಿ

**ಫೆಬ್ರವರಿ 19, ಕೇರಂ ಮತ್ತು ಚೆಸ್**

ಸ್ಥಳ : ಸಂಘದ ಆವರಣ

**ಫೆಬ್ರವರಿ 26, ಆಟೋಟ ಸ್ಪರ್ಧೆಗಳು**

ಸ್ಥಳ: ದೆಹಲಿ ಕನ್ನಡ ಶಾಲೆ

**ಮಾರ್ಚ್ 4, ಸಾಂಸ್ಕೃತಿಕ ಸ್ಪರ್ಧೆಗಳು, ರಕ್ತದಾನ ಶಿಬಿರ, ಬಹುಮಾನ ವಿತರಣೆ**

ಸ್ಥಳ : ಸಂಘದ ಆವರಣ

## ಮುನ್ನೋಟ

ಪ್ರಸ್ತುತ ಕಾರ್ಯಕಾರಿ ಸಮಿತಿ ಸಂಘದ ಆಡಳಿತವನ್ನು ವಹಿಸಿಕೊಂಡು ಈ ಜನವರಿಗೆ ಒಂದು ವರ್ಷವಾಗಿದೆ. ಈ ಒಂದು ವರ್ಷದ ಅವಧಿಯಲ್ಲಿ ಅನೇಕ ಉತ್ತಮ ಸಾಂಸ್ಕೃತಿಕ, ಸಾಹಿತ್ಯಿಕ ಮತ್ತು ಉಚಿತ ಆರೋಗ್ಯ ಶಿಬಿರದಂತಹ ಕಾರ್ಯಕ್ರಮಗಳು ನಡೆದಿವೆ. ಈ ಕಾರ್ಯಕ್ರಮಗಳಲ್ಲಿ ಕರ್ನಾಟಕದ ಅನೇಕ ಗಣ್ಯ ವ್ಯಕ್ತಿಗಳು, ಸಾಹಿತಿಗಳು ಭಾಗವಹಿಸಿದ್ದಾರೆ. ಇದರಿಂದ ಸಂಘದ ಘನತೆ ಹೆಚ್ಚಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಸಂತೋಷದ ವಿಷಯವೆಂದರೆ ಈ ಕಾರ್ಯಕ್ರಮಗಳಲ್ಲಿ ಸಂಘದ ಕಲಾವಿದರುಗಳ ಜೊತೆಯಲ್ಲಿ ಕಲಾಭಿಮಾನಿಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿರುವುದು. ಕನ್ನಡವನ್ನು ಕಲಿಸುವ ಒಂದು ಮುಖ್ಯ ಉದ್ದೇಶಕ್ಕೆ ಈಗಾಗಲೇ ಚಾಲನೆ ದೊರತಿದ್ದು ಮಕ್ಕಳು ಕನ್ನಡವನ್ನು ಕಲಿಯುತ್ತಿದ್ದಾರೆ.  ಮುಂದಿನ ಪೀಳಿಗೆಗೆ ಕನ್ನಡವನ್ನು ಉಳಿಸಿ ಬೆಳಸಿಕೊಂಡು ಹೋಗುವಲ್ಲಿ ಕನ್ನಡ ಕಲಿಕಾ ಕೇಂದ್ರದ ಪಾತ್ರ ಬಹಳ ದೊಡ್ಡದು. ಆದ್ದರಿಂದ ಪೋಷಕರು ತಮ್ಮ ಮಕ್ಕಳನ್ನು ಕನ್ನಡ ಕಲಿಯಲು ಕಡ್ಡಾಯವಾಗಿ ಪ್ರೋತ್ಸಾಹಿಸಬೇಕು.

ಸಂಘ ಆರ್ಥಿಕವಾಗಿಯೂ ಕೂಡ ಬಲಿಷ್ಠವಾಗುತ್ತಾ ಬರುತ್ತಿದೆ. ಇನ್ನು ನಾವು ಈಗಾಗಲೇ ಕೈಗೊಂಡಿರುವ ಸಂಘದ ಸಂವಿಧಾನ ತಿದ್ದುಪಡಿಯಂತಹ ಮಹತ್ತರವಾದ ಕೆಲಸಗಳನ್ನು ಪೂರ್ಣಗೊಳಿಸಬೇಕಾಗಿದೆ. ಇದರ ಜೊತೆಗೆ ಹೊಸ ಆಯೋಜನೆಗಳು, ಆಲೋಚನೆಗಳತ್ತ ನಾವು ದಿಟ್ಟ ಹೆಜ್ಜೆ ಇಡಬೇಕಾಗಿದೆ. ಕರ್ನಾಟಕ ಸರ್ಕಾರ ನೀಡಿರುವ ದೇಣಿಗೆಯಿಂದ ಸಂಘದ ಉಳಿದ ಕೆಲಸ ಕಾರ್ಯಗಳು ಈಗಾಗಲೇ ಪ್ರಾರಂಭವಾಗಿವೆ.

ಫೆಬ್ರವರಿ ತಿಂಗಳಿನಲ್ಲಿ ಸಂಘದ ವಾರ್ಷಿಕ ಆಟೋಟ ಸ್ಪರ್ಧೆಗಳು, ಕ್ರಿಕೆಟ್ ಪಂದ್ಯಾವಳಿ, ರಕ್ತದಾನ ಶಿಬಿರ ಕಾರ್ಯಕ್ರಮಗಳು ನಡೆಯಲಿವೆ. ಸಂಘದ ಸದಸ್ಯರು ಸಕ್ರಿಯವಾಗಿ ಭಾಗವಹಿಸಬೇಕೆಂದು ವಿನಂತಿ.

❑ **ಸಿ.ಎಂ.ನಾಗರಾಜ**

**ದೆಹಲಿ ಕರ್ನಾಟಕ ಸಂಘ** ಹಾಗೂ **ನೃಪತುಂಗ ಕಲಾನಿಕೇತನ (ರಿ) ಬೆಂಗಳೂರು**

**ಇವರ ಸಹಯೋಗದಲ್ಲಿ**

## ಸಾಹಿತ್ಯ-ಸಂಸ್ಕೃತಿ ಸಮ್ಮೇಳನ-2012

**19 ಫೆಬ್ರವರಿ 2012ರ ಭಾನುವಾರ, ಮಧ್ಯಾಹ್ನ 1.00ಗಂಟೆಗೆ**
**ಸಂಘದ ಸಭಾಂಗಣ**

### ಉದ್ಘಾಟನಾ ಸಮಾರಂಭ

**ಉದ್ಘಾಟನೆ :** ಸನ್ಮಾನ್ಯ ಶ್ರೀ ನರಸಿಂಹನಾಯಕ (ರಾಜುಗೌಡ)
ಸಣ್ಣ ಕೈಗಾರಿಕ ಸಚಿವರು, ಕರ್ನಾಟಕ ಸರ್ಕಾರ

**ಸನ್ಮಾನ :** ಶ್ರೀ ಚಂದ್ರಶೇಖರ ಕಂಬಾರ
ಜ್ಞಾನಪೀಠ ಪುರಸ್ಕೃತರು

**ನೃತ್ಯ ದೀಪಿಕ ಕೃತಿ ಬಿಡುಗಡೆ :** ಶ್ರೀ ಎನ್. ಶಂಕ್ರಪ್ಪ
ಅಧ್ಯಕ್ಷರು, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ

**ಅಧ್ಯಕ್ಷತೆ :** ಶ್ರೀ ಅಶೋಕ ಹಿರಿಯ ನಟ
ಅಧ್ಯಕ್ಷರು, ಕರ್ನಾಟಕ ಚಲನಚಿತ್ರ ಕಾರ್ಮಿಕರ ಒಕ್ಕೂಟ (ರಿ)

### ಮುಖ್ಯ ಅತಿಥಿಗಳು

ಡಾ. ವೆಂಕಟಾಚಲ ಹೆಗಡೆ, ಅಧ್ಯಕ್ಷರು, ದೆಹಲಿ ಕರ್ನಾಟಕ ಸಂಘ
ಶ್ರೀ ಸಿ.ಎಂ. ನಾಗರಾಜ, ಕಾರ್ಯದರ್ಶಿಗಳು, ದೆಹಲಿ ಕರ್ನಾಟಕ ಸಂಘ
ಡಾ. ಕೆ. ಕುಮಾರ ಪ್ರಾಧ್ಯಾಪಕರು, ಲಲಿತ ಕಲೆಗಳ ಕಾಲೇಜು, ಮೈಸೂರು ವಿಶ್ವವಿದ್ಯಾಲಯ
ಶ್ರೀ ಮಾರುತಿ ಬಡಿಗೇರ್, ಅಧ್ಯಕ್ಷರು, ನೃಪತುಂಗ ಕಲಾನಿಕೇತನ

**ನಿರೂಪಣೆ :** ಎನ್.ಆರ್. ಶ್ರೀನಾಥ್, ನವದೆಹಲಿ

**ಪ್ರಾರ್ಥನಾ ನೃತ್ಯ :** ಕು. ಜಿ.ವಿ. ಶ್ರೀಲಕ್ಷ್ಮಿ ಬೆಂಗಳೂರು

**ಕವಿಗೋಷ್ಠಿ**

### ಸಾಂಸ್ಕೃತಿಕ ಕಾರ್ಯಕ್ರಮಗಳು

| | |
|---|---|
| **ಭರತನಾಟ್ಯ** | : ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರ, ಮೈಸೂರು |
| **ಸುಗಮ ಸಂಗೀತ** | : ನಾದಸುಧೆ ಸಂಗೀತ ಅಕಾಡೆಮಿ(ರಿ) ಬೆಂಗಳೂರು |
| **ಬುಲ್‌ಬುಲ್ ತರಂಗ** | : ವೀರಯ್ಯ ಹಿರೇಮಠ ಬೆಂಗಳೂರು |
| **ಜಾನಪದ ಮಲ್ಲಕಂಬ** | : ಸಿದ್ಧರೂಡ ಹೂಗಾರ ತಂಡದವರಿಂದ |
| **ರಂಗಗೀತೆಗಳ ಗಾಯನ** | : ಸುಮಿತ್ರ ಕಲಾ ತಂಡ ತಿಪಟೂರು |
| **ಯಕ್ಷಗಾನ** | : ಶ್ರೀ ಸಾಯಿಕಲಾ ಪ್ರತಿಷ್ಠಾನ(ರಿ) ಶಿವಮೊಗ್ಗ |
| **ಭರತನಾಟ್ಯ** | : ಆತ್ಮ ಫೌಂಡೇಶನ್ (ರಿ) ಬೆಂಗಳೂರು |
| **ವೀರಗಾಸೆ, ಜಾನಪದ ಗೀತೆ** | : ಎಚ್.ಎಸ್. ಲೋಕೇಶ್ ಶಿಕ್ಷಕರು |
| **ಭರತನಾಟ್ಯ** | : ಕರ್ನಾಟಕ ಕಲಾ ಮಂಡಲಂ (ರಿ) ರಾಯಚೂರು |

**ಭಾರತ ವಿಕಾಸ ರತ್ನ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ**

**ಕನ್ನಡ ಸೇವೆ ಸಲ್ಲಿಸಿದ ಐವರು ದೆಹಲಿ ಕನ್ನಡಿಗರಿಗೆ ಸನ್ಮಾನ**

**ರಾಷ್ಟ್ರೀಯ ನೃಪತುಂಗ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ**

## ತಮಗೆಲ್ಲರಿಗೂ ಆದರದ ಸ್ವಾಗತ

**ಡಾ. ವೆಂಕಟಾಚಲ ಹೆಗಡೆ**
**ಅಧ್ಯಕ್ಷರು, ದೆ.ಕ.ಸಂ**

**ಮಾರುತಿ ಬಡಿಗೇರ್**
**ಅಧ್ಯಕ್ಷರು, ನೃಪತುಂಗ ಕಲಾನಿಕೇತನ**

**ಸಿ.ಎಂ. ನಾಗರಾಜ**
**ಪ್ರಧಾನ ಕಾರ್ಯದರ್ಶಿ, ದೆ.ಕ.ಸಂ**

**ಎನ್.ಆರ್. ಶ್ರೀನಾಥ್**
**ಕಾರ್ಯಾಧ್ಯಕ್ಷರು, ನೃಪತುಂಗ ಕಲಾನಿಕೇತನ (ರಿ) ನವದೆಹಲಿ**

# ಗಣರಾಜ್ಯೋತ್ಸವ ಪರೇಡ್‌ನಲ್ಲಿ ಮೂರನೇ ಬಹುಮಾನ ಪಡೆದ "ಭೂತಾರಾಧನೆ" ಸ್ತಬ್ಧ ಚಿತ್ರ



ಚಿತ್ರ : ಎಂ.ಎಂ. ಜೋಷಿ



ಭೂತಾರಾಧನೆ ಸ್ತಬ್ಧ ಚಿತ್ರಕ್ಕೆ 3ನೇ ಬಹುಮಾನವನ್ನು ಕೇಂದ್ರ ರಕ್ಷಣಾ ಸಚಿವ ಶ್ರೀ ಎ.ಕೆ. ಆ್ಯಂಟನಿ ಅವರಿಂದ ಸ್ವೀಕರಿಸುತ್ತಿರುವ ವಾರ್ತಾ ಇಲಾಖೆಯ ನಿರ್ದೇಶಕ ಶ್ರೀ ಕೆ.ಎಸ್. ಬೇವಿನ ಮರದ, ಜಂಟಿ ನಿರ್ದೇಶಕ ಶ್ರೀ ರವಿಕುಮಾರ್ ಹಾಗೂ ದೆಹಲಿಯ ಸಹ ನಿರ್ದೇಶಕ ಮೈಸೂರು ಗಿರೀಶ್

ಕರ್ನಾಟಕ ಸಾಂಸ್ಕೃತಿಕ ವೈಭವವನ್ನು ನವದೆಹಲಿಯ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಅನಾವರಣಗೊಳಿಸುವ ನಿಟ್ಟಿನಲ್ಲಿ ಕರಾವಳಿಯ ಧಾರ್ಮಿಕ, ಜಾನಪದ ಹಾಗೂ ಸಾಂಸ್ಕೃತಿಕ ಸಮ್ಮಿಳನವಾದ 'ಭೂತಾರಾಧನೆ' ಚಲನ ರೂಪಕ (ಸ್ತಬ್ಧಚಿತ್ರ)ವನ್ನು ಪ್ರಸ್ತುತಪಡಿಸಲಾಯಿತು. ನಲ್ವತ್ತು ವರ್ಷಗಳಿಂದ ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ಕರ್ನಾಟಕ ವಾರ್ತಾ ಇಲಾಖೆ ಕರ್ನಾಟಕ ಸರ್ಕಾರದ ಪರವಾಗಿ ಸಾಂಸ್ಕೃತಿಕ ವೈವಿಧ್ಯತೆಯನ್ನು ಪ್ರತಿಬಿಂಬಿಸುತ್ತಿದ್ದು ಈ ವರ್ಷ 'ಭೂತಾರಾಧನೆ' ಸ್ತಬ್ಧಚಿತ್ರವನ್ನು ಪ್ರದರ್ಶಿಸಲಾಯಿತು.

ದಕ್ಷಿಣ ಕನ್ನಡ ಜಿಲ್ಲೆ ಕಾಸರಗೋಡು ಮತ್ತು ಕೊಡಗು ಜಿಲ್ಲೆಗಳಲ್ಲಿ 'ಭೂತಾರಾಧನೆ' ತುಂಬ ಜನಪ್ರಿಯವಾಗಿದೆ. ಅದನ್ನು ನಂಬುವವರಿಗೆ 'ಭೂತ'ಗಳು ಕಷ್ಟ ಪರಿಹಾರ ಮಾಡುವ 'ದೈವ'ಗಳೂ ಹೌದು. ಸಂಶೋಧಕರ ಪ್ರಕಾರ ಈ ಭಾಗದಲ್ಲಿ ಸುಮಾರು 360 ದೈವಗಳಿವೆ. ಈ ದೈವಗಳ ಹುಟ್ಟು, ಪ್ರಸರಣ, ಸಾಧನೆ ಮತ್ತು ಸಾವುಗಳನ್ನು ವಿವರಿಸುವ ಹಾಡಿನ ರೂಪದ ದೀರ್ಘ ಕಥಾನಕಗಳನ್ನು 'ಪಾಡ್ದನ'ಗಳೆಂದು ಕರೆಯುತ್ತಾರೆ. ಪ್ರತಿವರ್ಷ ನಡೆಯುವ ಭೂತಾರಾಧನೆಯ ಸಂದರ್ಭದಲ್ಲಿ ಈ ಪಾಡ್ದನಗಳಲ್ಲಿ ಕಾಣುವ ಈ ತುಳುವ ವೀರರು ಎಲ್ಲರಂತೆ ಹುಟ್ಟಿ, ಆದರೆ ಮಧ್ಯೆ ಮಹತ್ವವಾದದ್ದನ್ನು ಏನೋ ಸಾಧಿಸಿ ಅಲ್ಪ ವಯಸ್ಸಿನಲ್ಲಿಯೇ ಸಾವನ್ನಪ್ಪುತ್ತಾರೆ. ವೀರರ ಅಲ್ಪಾಯುಸ್ಸಿನ ಸಾವು ಜನರ ಮೇಲೆ ವಿಶೇಷ ಪರಿಣಾಮ ಬೀರಿದ ಕಾರಣವಾಗಿ ಭೂತಾರಾಧನೆ ಹುಟ್ಟಿಕೊಂಡಿತೆಂದು ಹೇಳಲಾಗುತ್ತದೆ. ಈ ಭೂತಗಳಲ್ಲಿ ಮನುಷ್ಯ ರೂಪದ ಮತ್ತು ಪ್ರಾಣಿ ರೂಪದ ದೈವಗಳಿವೆ. ಸಿರಿ, ಕೋಟಿ–ಚೆನ್ನಯ, ಕಲ್ಕುಡ ಮೊದಲಾದವು ಮನುಷ್ಯರೂಪದ ದೈವಗಳಾದರೆ, ಪಂಜುರ್ಲಿ, ಜುಮಾದಿ ಮೊದಲಾದವು ಪ್ರಾಣಿರೂಪದ ದೈವಗಳಾಗಿವೆ. ಆರಾಧನೆಯ ಸಂದರ್ಭದಲ್ಲಿ ಮುಖಕ್ಕೆ ಬಣ್ಣ ಹಾಕಿ, ತಲೆಗೆ ಕಿರೀಟ ಕಟ್ಟಿ, ಬೆನ್ನಿಗೆ ಅಣಿ ಕಟ್ಟಿ, ಕಾಲಿಗೆ ಗಗ್ಗರ ಜೋಡಿಸಿ ಕುಣಿಯುವ ಈ ದೈವಗಳು ನೋಡಲು ಮನಮೋ–ಹಕವಾಗಿರುತ್ತವೆ. ಈ ಸಂಸ್ಕೃತಿಯನ್ನು ರಾಷ್ಟ್ರಮಟ್ಟದಲ್ಲಿ ಬಿಂಬಿಸುವ ನಿಟ್ಟಿನಲ್ಲಿ ಈ ವರ್ಷದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭೂತಾರಾಧನೆಯ ಸ್ತಬ್ಧಚಿತ್ರವನ್ನು ಪ್ರದರ್ಶಿಸಲಾಯಿತು. ಭೂತಾರಾಧನೆಯ ಕಿರೀಟ, ಅಣಿ, ಗಗ್ಗರ, ಬಣ್ಣ, ಗಂಟೆಗಳು ನೋಡುಗರನ್ನು ಆಕರ್ಷಿಸಿ ತುಳುವ ಸಂಸ್ಕೃತಿಯನ್ನು ವಿಶ್ವದಾದ್ಯಂತ ಪಸರಿಸುವಲ್ಲಿ ಯಶಸ್ವಿಯಾಯಿತು. ಅಲ್ಲದೇ ಮೂರನೇ ಬಹುಮಾನವನ್ನು ಪಡೆಯಿತು.

ಖ್ಯಾತ ಕಲಾವಿದ ಶಶಿಧರ್ ಅಡಪ ಅವರು ರೂಪಿಸಿದ ಈ ಸ್ತಬ್ಧಚಿತ್ರವನ್ನು ಸಂಜಯ್ ಮಾರ್ಕೆಟಿಂಗ್ ಸಂಸ್ಥೆಯ ಕಲಾ ನಿರ್ದೇಶಕ ರಘು, ಆನಂದ ಕೃಷ್ಣ, ಬಾಬು ನೇತೃತ್ವದಲ್ಲಿ ಸುಮಾರು 30 ಕಲಾವಿದರು ಸಜ್ಜುಗೊಳಿಸಿದರು.

ವಾರ್ತಾ ಇಲಾಖೆಯ ನಿರ್ದೇಶಕ ಕೆ.ಎಸ್. ಬೇವಿನಮರದ, ಜಂಟಿ ನಿರ್ದೇಶಕ ಎಸ್.ವಿ. ಲಕ್ಷ್ಮೀನಾರಾಯಣ್, ದೆಹಲಿಯ ಸಹನಿರ್ದೇಶಕ ಮೈಸೂರು ಗಿರೀಶ್ ತಂಡ ನಿರ್ಮಾಣದ ಮೇಲ್ವಿಚಾರಣೆಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದಕ್ಕಾಗಿ ಅವರಿಗೆ ಹಾರ್ದಿಕ ಅಭಿನಂದನೆಗಳು.



# ದೆಹಲಿ–ಕಾಸರಗೋಡು ಉತ್ಸವ : ರಾಜಧಾನಿಯಲ್ಲಿ ಕನ್ನಡದ ಕಲರವ

## ಭಾಷೆ ಸಂವಹನ ಮಾಧ್ಯಮ ಮಾತ್ರವಲ್ಲ, ಸಂಸ್ಕೃತಿಯ ಸಂಪತ್ತು– ವಿ. ಧನಂಜಯ ಕುಮಾರ್



ದೆಹಲಿ ಕರ್ನಾಟಕ ಸಂಘ ಮತ್ತು ಕಾಸರಗೋಡಿನ ಕನ್ನಡ ಕೈರಳಿ ಮಾಸಪತ್ರಿಕೆಯ ಆಶ್ರಯದಲ್ಲಿ 'ದೆಹಲಿ–ಕಾಸರಗೋಡು ಉತ್ಸವ–2012' ಯಶಸ್ವಿಯಾಗಿ ಜರುಗಿತು. ಸಂಕ್ರಾಂತಿ ಹಬ್ಬದ ಶುಭಾಶಯದೊಂದಿಗೆ ಕರ್ನಾಟಕ ಸರಕಾರದ ವಿಶೇಷ ಪ್ರತಿನಿಧಿ ಹಾಗೂ ಮಾಜಿ ಕೇಂದ್ರ ಸಚಿವ ವಿ. ಧನಂಜಯ ಕುಮಾರ್ ಉದ್ಘಾಟಿಸಿದರು.

ಭಾಷೆ, ಮತ, ಧರ್ಮ, ಸಂಸ್ಕೃತಿಗಳ ಸಂಗಮ ಭೂಮಿಯಾಗಿರುವ ಕಾಸರಗೋಡು ಪ್ರದೇಶವು ಅನನ್ಯತೆ ಮತ್ತು ವೈವಿಧ್ಯತೆಯೊಂದಿಗೆ ಗುರುತಿಸಲ್ಪಟ್ಟಿದೆ. ಇಂತಹಾ ಪ್ರದೇಶ ವಿಶ್ವದಲ್ಲೆಲ್ಲೂ ಕಾಣಸಿಗದು, ಕಾಸರಗೋಡನ್ನು ಮೆಚ್ಚಿಕೊಂಡವರಿಗೆ, ಹಚ್ಚಿಕೊಂಡವರಿಗೆ ಇದು ಅಭಿಮಾನದ ವಿಷಯ ಎಂದು ಧನಂಜಯ ಕುಮಾರ್ ಹೇಳಿದರು. ದೆಹಲಿಯಲ್ಲಿ ರಾಷ್ಟ್ರಭಾಷೆಯ ಜತೆ ಕನ್ನಡದ ಕಲರವವಾಗುತ್ತಿದೆ. ಕಾಸರಗೋಡಿನ ದರ್ಶನವಾಗುತ್ತಿದೆ. ಇದಕ್ಕೆ ವೇದಿಕೆ ಕಲ್ಪಿಸಿದವರು ದೆಹಲಿ ಕರ್ನಾಟಕ ಸಂಘದ ಸಾರಥಿಗಳು. ಕಾರ್ಯಕ್ರಮವನ್ನು ಆಯೋಜಿಸಿದವರು ಕಾಸರಗೋಡಿನ ಕನ್ನಡ ಕೈರಳಿ ಪತ್ರಿಕೆಯವರು. ಭಾಷೆ, ಗಡಿಗಳ ಎಲ್ಲೆಯನ್ನು ಮೀರಿ ನಡೆಯುವ ಈ ಉತ್ಸವದಲ್ಲಿ ಬಾಂಧವ್ಯ ಬೆಸೆದುಕೊಂಡಿದೆ. ಸಂಘಟಕರು ಅಭಿನಂದನಾರ್ಹರು ಎಂದು ಅವರು ನುಡಿದರು.

ಭಾಷೆ ಕೇವಲ ಸಂಪರ್ಕ ಸಾಧನವಲ್ಲ. ಅದರ ಹರಿವು ವಿಸ್ತಾರವಾದದ್ದು. ಸಮಾಜದೊಂದಿಗೆ ಸಂಬಂಧ ಪಡೆಯಲು ಬಯಸುವ ವ್ಯಕ್ತಿಗೆ ಭಾಷೆಗಳು ಅನಿವಾರ್ಯ. ಭಾಷೆ ಸಂವಹನ ಮಾಧ್ಯಮ ಮಾತ್ರವಲ್ಲ ಸಂಸ್ಕೃತಿಯ ಸಂಪತ್ತೂ ಆಗಿದೆ. ಭಾಷೆಯ ರಕ್ಷಣೆ, ಇತರ ಭಾಷಿಗರೊಂದಿಗೆ ಬಾಂಧವ್ಯ ಬೆಳೆಸುವ ಕೆಲಸ ಕಾರ್ಯಗಳು ಇಂತಹ ಉತ್ಸವಗಳಿಂದ ನಡೆಯಬೇಕಾಗಿದೆ ಎಂದು ಧನಂಜಯ ಕುಮಾರ್ ಹೇಳಿದರು.

ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ನಡೆದ ದೆಹಲಿ–ಕಾಸರಗೋಡು ಉತ್ಸವದ ಸಭಾಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ವಹಿಸಿದ್ದರು. ಉಪಾಧ್ಯಕ್ಷೆ ಉಷಾ ಭರತಾದ್ರಿ ಉಪಸ್ಥಿತರಿದ್ದರು. ಕನ್ನಡ ಕೈರಳಿಯ ಐದನೇ ವರ್ಷದ ವಿಶೇಷ ಸಂಚಿಕೆಯನ್ನು ಕರ್ನಾಟಕ ಸರಕಾರದ ದೆಹಲಿಯ ಹೆಚ್ಚುವರಿ ವಿಶೇಷ ಪ್ರತಿನಿಧಿ ಬೈಕೆರೆ ನಾಗೇಶ್ ಅವರು ಬಿಡುಗಡೆಗೊಳಿಸಿದರು. "ಓದುಗರನ್ನು ಯೋಚಿಸುವಂತೆ ಮಾಡುವ, ಒಂದು ರೀತಿಯಲ್ಲಿ ಜನಜಾಗೃತಿ ಮೂಡಿಸುವ ಕೆಲಸವನ್ನು ಪತ್ರಿಕೆಗಳು ಮಾಡಬೇಕಾಗಿದೆ. ಎ.ಆರ್. ಸುಬ್ಬಯ್ಯಕಟ್ಟೆ ಬಹಳ ಪರಿಶ್ರಮದಿಂದ ಕನ್ನಡ ಕೈರಳಿಯನ್ನು ಹೊರತರುತ್ತಿದ್ದಾರೆ. ಗಡಿನಾಡ ಕನ್ನಡಿಗರ ಧ್ವನಿಯಾಗಿ ಅದು ಹೊರಬರುತ್ತಿದೆ. ಸಮಸ್ತ ಕನ್ನಡಿಗರು ಅದರ ಉಳಿವು, ಬೆಳವಣಿಗೆಗೆ ಪ್ರೋತ್ಸಾಹ ನೀಡಬೇಕು" ಎಂದು ಬೈಕೆರೆ ನಾಗೇಶ್ ಹೇಳಿದರು.

ಮಾನವ ಹಕ್ಕುಗಳ ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಕೆ.ಎನ್. ಜಯರಾಜ್, ಕೇರಳ ಭವನದ ನಿವಾಸೀ ಆಯುಕ್ತ ಯು.ಕೆ.ಎಸ್. ಚೌಹಾನ್, ದೆಹಲಿ ಸರಕಾರದ ಉಪಸಭಾಪತಿ ಅಮರೀಶ್‌ಸಿಂಗ್ ಗೌತಮ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಮಾಜಸುಧಾರಕ, ದೀನದಲಿತರ ಉದ್ಧಾರಕ ಮೆಟ್ರೋ ಮಹಮ್ಮದ್ ಹಾಜಿಯವರಿಗೆ ಸಾರ್ವಜನಿಕ ಸನ್ಮಾನ ಮಾಡಲಾಯಿತು. ಕರ್ನಾಟಕ ವಿಧಾನಪರಿಷತ್ ಸದಸ್ಯ ದಯಾನಂದ ರೆಡ್ಡಿ, ಆರ್ಥಿಕ ತಜ್ಞ ಆರ್. ಕೆ. ಶೆಟ್ಟಿ ಮುಂಬಯಿ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರದ ಸಾಧಕ ಧರ್ಮಪಾಲ್ ದೇವಾಡಿಗ ಮುಂಬಯಿ, ಮುದ್ರಣ ರಂಗದ ಸಾಧಕ, ಪ್ರತಿಭಾ ಪೋಷಕ ಕೆ. ನಾರಾಯಣ ಬೆಂಗಳೂರು, ವೃತ್ತಿ ಮತ್ತು ಪ್ರವೃತ್ತಿಗಳ ಮಧ್ಯೆ ಸಮಾಜಮುಖೀ ಚಟುವಟಿಕೆಗಳಲ್ಲಿ ಸಕ್ರಿಯರಾಗಿರುವ ಕಾಸರಗೋಡು ಸರಕಾರಿ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಪ್ರೊ. ಎ. ಶ್ರೀನಾಥ್, ಮುಂಬಯಿ ತುಳುನಾಡ ಸಮಾಜದ ಅಧ್ಯಕ್ಷ, ಸಾಂಸ್ಕೃತಿಕ ರಾಯಭಾರಿ ಡಾ. ರವಿರಾಜ್ ಸುವರ್ಣ ಮೊದಲಾದವರಿಗೆ ಸಾಧಕ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವಿ. ಧನಂಜಯ ಕುಮಾರ್ ಅವರು ಸನ್ಮಾನ ಮತ್ತು ಪ್ರಶಸ್ತಿ ಪ್ರದಾನ ಮಾಡಿದರು.

ಕನ್ನಡ ಕೈರಳಿ ಪತ್ರಿಕೆಯ ಸಂಪಾದಕ ಅಬ್ದುಲ್ ರೆಹಮಾನ್ ಸುಬ್ಬಯ್ಯಕಟ್ಟೆ ಅತಿಥಿಗಳನ್ನು ಸ್ವಾಗತಿಸಿದರು. ಪತ್ರಿಕೆಯ ಸಂಪಾದಕ ಮಂಡಳಿ ಸದಸ್ಯ, ರಂಗಕರ್ಮಿ ಎಂ. ಉಮೇಶ್ ಸಾಲ್ಯಾನ್ ದೆಹಲಿ ಕಾಸರಗೋಡು ಉತ್ಸವದ ಬಗ್ಗೆ ಮತ್ತು ಕನ್ನಡ ಕೈರಳಿ ಬೆಳೆದು ಬಂದ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಪತ್ರಿಕೆಯ ಮುಂಬಯಿ ಪ್ರತಿನಿಧಿ ರತ್ನಾಕರ ಮಟ್ಟಿ ಅತಿಥಿಗಳಿಗೆ ಸ್ಮರಣಿಕೆ ನೀಡಿ ಗೌರವಿಸಿದರು. ಕವಿ, ಪತ್ರಕರ್ತ ರಾಧಾಕೃಷ್ಣ ಕೆ. ಉಳಿಯತ್ತಡ್ಕ ಸನ್ಮಾನಿತರ ಮತ್ತು ಸಾಧಕರತ್ನ ಪ್ರಶಸ್ತಿ ಪುರಸ್ಕೃತರನ್ನು ಪರಿಚಯಿಸಿದರು. ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು. ಸಹಕಾರ್ಯದರ್ಶಿ ಶ್ರೀ ಎನ್.ಆರ್. ಶ್ರೀನಾಥ್ ಕಾರ್ಯಕ್ರಮ ನಿರೂಪಿಸಿದರು.

# ರಕ್ತದಾನ ಶಿಬಿರ

**ದೆಹಲಿ ಕರ್ನಾಟಕ ಸಂಘ**

ಅಖಿಲ ಭಾರತೀಯ ವೈದ್ಯಕೀಯ ವಿಜ್ಞಾನ ಸಂಸ್ಥೆ (AIIMS), ನವದೆಹಲಿ

ಇದರ ಸಹಯೋಗದೊಂದಿಗೆ

**ಅಮೂಲ್ಯ ಜೀವಗಳನ್ನು ಉಳಿಸಲು ಮತ್ತು ನಿಮ್ಮ ಜೀವನವನ್ನು ಇನ್ನಷ್ಟು ಅರ್ಥಪೂರ್ಣವಾಗಿಸಲು ಒಂದು ಅತ್ಯುತ್ತಮ ಅವಕಾಶ!**

4 ಮಾರ್ಚ್ 2012 ರಂದು ಸಂಘದಲ್ಲಿ ದೆಹಲಿ ಕರ್ನಾಟಕ ಸಂಘ ಸ್ವಯಂಪ್ರೇರಿತ ರಕ್ತದಾನ ಶಿಬಿರವನ್ನು ಆಯೋಜಿಸಿದೆ. ದೆಹಲಿ ಕರ್ನಾಟಕ ಸಂಘದ ಸದಸ್ಯರೆಲ್ಲರೂ ರಕ್ತದಾನ ಮಾಡಿ, ಜೀವಗಳನ್ನು ಉಳಿಸುವ ಈ ಅತ್ಯಮೂಲ್ಯ ಅವಕಾಶದ ಸದುಪಯೋಗಪಡಿಸಿಕೊಳ್ಳಬೇಕಾಗಿ ವಿನಂತಿ. ಇಂಥ ಆದರ್ಶಪ್ರಾಯ ಕಾರ್ಯಕ್ರಮಕ್ಕೆ ನಿಮ್ಮ ಮನೆಯುವರು ಹಾಗೂ ಬಂಧು–ಮಿತ್ರರೊಡಗೂಡಿ ಬಂದು ಶಿಬಿರವನ್ನು ಯಶಸ್ವಿಗೊಳಿಸುವುದು ನಿಮ್ಮ ಕರ್ತವ್ಯವೇ ಸರಿ. ದಿನ–ಪೂರ್ತಿ ನಡೆಯುವ ಈ ಶಿಬಿರದಲ್ಲಿ ಹೆಸರಾಂತ ಅಖಿಲ ಭಾರತೀಯ ವೈದ್ಯಕೀಯ ವಿಜ್ಞಾನ ಸಂಸ್ಥೆ, ನವದೆಹಲಿ (AIIMS) ಯಲ್ಲಿ ಕೆಲಸ ಮಾಡುತ್ತಿರುವ, ವೈದ್ಯಕೀಯ ಕ್ಷೇತ್ರದ ವಿವಿಧ ವಿಭಾಗಗಳಲ್ಲಿ ಪ್ರಾವೀಣ್ಯತೆ ಹೊಂದಿರುವ, ಕನ್ನಡಿಗ ವೈದ್ಯರುಗಳು ಉಪಸ್ಥಿತರಿರುತ್ತಾರೆ ಹಾಗೂ ಆರೋಗ್ಯ ಸಂಬಂಧಿ ಸಲಹೆಗಳನ್ನು ನೀಡಲಿದ್ದಾರೆ.

# "ಗೌರೀಶ್ ಕಾಯ್ಕಿಣಿ" ಎಂಬ ಗೋಕರ್ಣದ ಬೆಳಕು



*ನೂರು ಹಾಡಿ ನಾಡಿಯಾದವ*
*ನಾಡ ಬೆಳಗಿದ ಸಾಧಕ*
*ಬಾಳಗುಟ್ಟಿಗೆ, ಒಲುಮೆ ಒಗಟಿಗೆ*
*ಭಾಷ್ಯ ಬರೆದಿಹ ಬೋಧಕ*
*ಮಾರ್ಕ್ಸ್ ಮೆಚ್ಚಿಗ, ರಾಯ್ ನೆಚ್ಚಿಗ*
*ಸಮತೂಕದ ನಡಿಗೆ*
*ಬಾಳ್‌ಬಟ್ಟೆಗೆ ಬೇಕೆನುವನು*
*ಸಮ ಸಮ ಸಮ ಕೊಡುಗೆ*
*ಹೊಸ ಗಿಡಗಳ ಕಸಿ ಮಾಡುವ*
*ವೈಚಾರಿಕ ಸೂತ್ರ*
*ಇವ ಬಿತ್ತಿದ ಬೆಳೆ ದೊಡ್ಡದು*
*ರಸಋಷಿಗಳ ಮಿತ್ರ*

ಡಾ. ಗೌರೀಶ ಕಾಯ್ಕಿಣಿಯವರಿಗೆ ಎಂಬತ್ತು ತುಂಬಿದಾಗ ನಾನು ಬರೆದು ಅರ್ಪಿಸಿದ ಪದ್ಯ ಇದು (1992)
ಅದರಲ್ಲಿ ಇನ್ನೂ ಕೆಲವು ನುಡಿಗಳಿವೆ. "ಸವಿಗದ್ಯದ ಮಹಾಕವಿಯಿವ, ಇನ್ನಿಲ್ಲದ ಉಳುಮೆ; ಆಶ್ಲೇಷೆಗೆ, ಅನುಪ್ರಾಸಕೆ ಇವಗಿವನೇ ಉಪಮೆ" ಎಂಬ ಮಾತೊಂದು ಇಲ್ಲಿ ಪ್ರಸ್ತಾಪವಾಗದೆ ಉಳಿದ ಆ ನುಡಿಯಲ್ಲಿದೆ.

ನಿಜ, ಗೌರೀಶ ಕಾಯ್ಕಿಣಿಯವರ ಬದುಕು ಮತ್ತು ಬರವಣಿಗೆಗೆ ಇನ್ನೊಂದು ಉದಾಹರಣೆ ನನಗೆ ಈಗಲೂ ಸಿಗುತ್ತಿಲ್ಲ. ಅವರಿಗೆ ಅವರೇ ಉಪಮೆ. ಅವರ ಬರವಣಿಗೆಯ ಗುಣ-ಗತ್ತುಗಳೇ ಹಾಗೆ. ಸುಮಾರು ಅರವತ್ತು ವರ್ಷಗಳ ತೆರಪಿಲ್ಲದ ಬರವಣಿಗೆಯ ಬದುಕಿನಲ್ಲಿ ಅವರು ಅರವತ್ತಕ್ಕಿಂತ ಹೆಚ್ಚು ಗ್ರಂಥಗಳನ್ನು ಕೊಟ್ಟಿದ್ದಾರೆ. ಅವುಗಳಲ್ಲಿ ವಿಚಾರ-ವಿಮರ್ಶಾ ಕ್ಷೇತ್ರಕ್ಕೆ ಸಂದ ಕೊಡುಗೆಯೇ ದೊಡ್ಡದು. ಅವರ ಗದ್ಯದ ಸವಿ ಮೆಂದವರಿಗೇ ಗೊತ್ತು.

ಗೌರೀಶ ಕಾಯ್ಕಿಣಿಯವರ ಸಮಗ್ರ ಸಾಹಿತ್ಯ ಪ್ರಕಟಿಸುವ ಹುಂಬ ಧೈರ್ಯವನ್ನು ತೊಂಬತ್ತರ ದಶಕದಲ್ಲಿ ಮಾಡಿದೆ. ವರ್ಷಕ್ಕೊಂದರಂತೆ ಸರಾಸರಿ 500ಪುಟಗಳ ಹತ್ತು ಸಂಪುಟಗಳು ಹೊರಬಂದ ಮೇಲೂ ಬರಬೇಕಾದ ಬರಹಗಳು ಇನ್ನೂ ದೊಡ್ಡ ಪ್ರಮಾಣದಲ್ಲಿದ್ದವು. ಅಷ್ಟೊತ್ತಿಗೆ ನಾನೇ ಸುಸ್ತುಹೊಡೆದು ಹೋಗಿದ್ದೆ. ಪತ್ರಿಕೆಗಳಲ್ಲಿ ಹರಡಿಹೋದ ಅವರ ಬಿಡಿ ಬರಹಗಳ ರಾಶಿ ನೋಡಿದಾಗ, ಮಹಾಭಾರತದಲ್ಲಿ ಹನ್ನೊಂದು ಅಕ್ಷೋಹಿಣಿ ಸೈನ್ಯ ನೋಡಿದಾಗಿನ ಅರ್ಜುನನ ಗತಿ ನನ್ನದಾಗಿತ್ತು ! ಸುಮಾರು ಒಂದುವರೆ ಸಾವಿರದಷ್ಟು ಬಿಡಿಲೇಖನಗಳು ನನ್ನ ಓದಿಗೆ ಸಿಕ್ಕಿದ್ದವು. ಅವುಗಳಲ್ಲಿ ಎಷ್ಟೊಂದು ವೈವಿಧ್ಯತೆಗಳಿದ್ದವೆಂದರೆ ಯಾವುದನ್ನು ಹೆಕ್ಕಬೇಕು ಯಾವುದನ್ನು ಬಿಡಬೇಕು ಎಂಬ ಗೊಂದಲದಲ್ಲಿ ಮುಳುಗಿ ಹೋದದ್ದುಂಟು. ಕೊನೆಗೆ ತೋರಿದ ದಾರಿ ಪ್ರಾತಿನಿಧಿಕವಾದ 150 ಬಿಡಿ ಲೇಖನಗಳನ್ನು ಮಾತ್ರ ಹೆಕ್ಕಿ ಹಾಕಬೇಕೆಂಬುದು. ಹತ್ತನೆಯ ಸಂಪುಟದ ವೇಳೆಗೆ ಈ ವಿಚಾರದಲ್ಲಿ ನನ್ನ ನೆರವಿಗೆ ನಿಂತವರು ಡಾ. ಎಂ.ಜಿ. ಹೆಗಡೆ. ಅವರು ಮಾಡಿದ ಆಯ್ಕೆಯೂ ಸೇರಿ ಸುಮಾರು 300 ಬಿಡಿ ಲೇಖನಗಳು ಮಾತ್ರ ಕೊನೆಯ ಮೂರು ಸಂಪುಟಗಳಲ್ಲಿ ಸೇರಿವೆ. ಉಳಿದವುಗಳ ಪಾಡೇನು?. . . ಆದುದರಿಂದ ಅವರ ಸಮಗ್ರ ಸಾಹಿತ್ಯವನ್ನು ಓದುಗರಿಗೆ ಹಿಡಿದುಕೊಡುವಲ್ಲಿ ನಾನು ಭಾಗಶಃ ಮಾತ್ರ ಯಶಸ್ವಿಯಾಗಿದ್ದೇನೆಯೇ ಹೊರತು ಪೂರ್ಣಮಾಡಿದ ತೃಪ್ತಿ ಈ ಗಳಿಗೆಯವರೆಗೂ ಇಲ್ಲ.

ಗೌರೀಶ ಕಾಯ್ಕಿಣಿ ಅವರಂಥ ಅಖಂಡ ಓದುಗನನ್ನು ನಾನು ನನ್ನ ಜೀವಮಾನದಲ್ಲಿ ಬೇರೆಲ್ಲೂ ಕಂಡಿಲ್ಲ. ಅವರ ಓದಿನ ಬಗ್ಗೆ ಅನೇಕ ಪ್ರತೀತಿಗಳಿವೆ. ಅವರು ಬಂಕಿಕೊಡ್ಲದ ಆನಂದಾಶ್ರಮ ಪ್ರೌಢಶಾಲೆಯ ಶಿಕ್ಷಕರಾಗಿದ್ದಾಗ ಗೋಕರ್ಣದಿಂದ ಅಲ್ಲಿಗೆ ನಡೆದುಕೊಂಡೇ ಹೋಗಿ ಬರುತ್ತಿದ್ದರಂತೆ. ಹೋಗುವಾಗಲೂ, ಬರುವಾಗಲೂ ತೆರೆದ ಪುಸ್ತಕದ ಮೇಲೇ ಅವರ ಕಣ್ಣು ನೆಟ್ಟಿರುತ್ತಿತ್ತಂತೆ. ಇದು ಅನೇಕ ದಂತಕತೆಗಳಿಗೂ ಕಾರಣವಾದದ್ದಿದೆ. ಅವರು ಹೋಗಿ-ಬರುವಾಗ ದಾರಿಗಡ್ಡ ನಿಂತ ದನ-ಕರುಗಳು ಕೂಡ ಬದಿಗೆ ಸರಿದು ಈ 'ವಿಚಿತ್ರ ಜೀವ'ಕ್ಕೆ ದಾರಿ ಮಾಡಿಕೊಡುತ್ತಿದ್ದವೆಂಬ ಮಾತು ಇಂದೂ ವಾಡಿಕೆಯಲ್ಲಿದೆ. ಇದರಲ್ಲಿ ಉತ್ಪ್ರೇಕ್ಷೆಯ ಭಾಗ ಹೆಚ್ಚಾಗಿರಬೇಕೆಂದು ನನಗೂ ಅನಿಸಿದೆ. ಆದರೆ ಅಂಥ ಒಂದು ರೂಢಿಗತ ಹೇಳಿಕೆಗೂ ಆಹಾರ ಒದಗಿಸಿತ್ತು ಅವರ ಓದು ಎಂಬುದಂತೂ ನಿಜ. ನಾನು ಅವರ ಜೀವಿತ ಕಾಲಾವಧಿಯಲ್ಲಿ ಸಾಮಾನ್ಯವಾಗಿ ವಾರಕ್ಕೊಮ್ಮೆ, ಇಲ್ಲ ಹದಿನೈದು ದಿನಗಳಿಗೊಮ್ಮೆ ಪೂರ್ವಸೂಚನೆ ಕೊಡದೇ ಅವರ ಮನೆಗೆ ಹೊಕ್ಕುವುದಿತ್ತು. ಆಗೆಲ್ಲ ನಾನು ಕಂಡದ್ದು, ಒಂದೋ, ಆರಾಮ ಖುರ್ಚಿಯ ಮೇಲೆ ಓದುತ್ತ ಕುಳಿತ ಕಾಯ್ಕಿಣಿ ಇಲ್ಲವೇ ಪುಟ್ಟ ಟೇಬಲಿನ ಮುಂದೆ ಗೋಣು ಬಗ್ಗಿಸಿ ಬರೆಯುತ್ತಿದ್ದ ದೃಶ್ಯ. ಇವೆರಡರ ಹೊರತು ಖಾಲಿ ಕುಳಿತಿದ್ದ ಗೌರೀಶರನ್ನು ನಾನು ಒಮ್ಮೆ ಕೂಡ ನೋಡಿದ ನೆನಪಿಲ್ಲ.

ಈ ಮನುಷ್ಯ ಒಬ್ಬ ಅಸಾಧಾರಣ ಚಿಂತಕ, ಸೂಕ್ಷ್ಮ ಸಮೀಕ್ಷಕ ಎಂಬ ವಿಚಾರ ಬಹಳಷ್ಟು ವರ್ಷಗಳವರೆಗೆ ಸಾಹಿತ್ಯ ಕ್ಷೇತ್ರದಲ್ಲಿ ಅವರ ಸಮಕಾಲೀನರಾದ ಸಿದ್ಧ-ಪ್ರಸಿದ್ಧರಿಗೂ ಗೊತ್ತಿರಲಿಲ್ಲ. ಅಥವಾ ಇವರನ್ನು ಅಷ್ಟು ಗಂಭೀರವಾಗಿ ಓದುವ ಗೋಜಿಗೇ ಹೋಗಿರಲಿಲ್ಲವೋ!. . . 1950ರ ದಶಕಾರಂಭದಲ್ಲಿ ಕೈಕಿಣಿಯವರ 'ವಿಚಾರವಾದ' ಅಥವಾ 'ಬುದ್ಧಿವಾದ' ಎಂಬ ಒಂದು ಚಿಕ್ಕ ಪುಸ್ತಕ ಕರ್ನಾಟಕ ವಿಶ್ವವಿದ್ಯಾಲದಯ ಪ್ರಸಾರಾಂಗ ಮಾಲೆಯಲ್ಲಿ ಹೊರಬಂತು. 'ಪ್ರಸಾರಾಂಗ'ವು ಏರ್ಪಡಿಸಿದ ವಿಶೇಷ ಉಪನ್ಯಾಸಮಾಲೆಯಲ್ಲಿ ಗೌರೀಶರು ಮಾಡಿದ ಭಾಷಣದ ಲೇಖನರೂಪ ಅದು.

ಅದಕ್ಕಿಂತ ಪೂರ್ವದಲ್ಲೇ ಗೌರೀಶರು 'ಮಾರ್ಕ್ಸ್‌ವಾದ' ಎಂಬ ಪುಸ್ತಕ ಬರೆದದ್ದಿದೆ (1949) ಬಹುಶಃ ಕನ್ನಡದಲ್ಲಿ ಮಾರ್ಕ್ಸ್‌ವಾದದ ಕುರಿತ ಮೊದಲ ಗ್ರಂಥ ಗೌರೀಶರದೇ ಇರಬೇಕೆಂಬುದು ನನ್ನೆಣಿಕೆ. ಮಾರ್ಕ್ಸ್‌ನ ಚಿಂತನೆಯ ಸುತ್ತ ಆನಂತರ ಬರೆದ ಲೇಖಕರು ಗೌರೀಶರ 'ಮಾರ್ಕ್ಸವಾದ' ಇಡಿಯಾಗಿ ಓದಿದ್ದಾರೆಯೇ ಎಂಬ ಅನುಮಾನ ಕೂಡ ನನಗಿದೆ. ವಿಚಾರವಾದ ಹೊರಬಂದಮೇಲೇ ಬುದ್ಧಿಜೀಗಳನ್ನಿಸಿಕೊಂಡವರು ಗೌರೀಶರ ಬರವಣಿಗೆಗಳನ್ನು ಗಂಭೀರವಾಗಿ ಪರಿಗಣಿಸತೊಡಗಿದ್ದೆಂದು ತೋರುತ್ತದೆ. ಬುದ್ಧಿವಾದದ ಅಗತ್ಯ, ಬುದ್ಧಿಪ್ರಧಾನ್ಯತೆಗೆ ಪ್ರತಿಕೂಲವಾದ ಸಂಗತಿಗಳು, ಬುದ್ಧಿಯಮೇಲೆ ಆಗುವ ಹೊಸ ಹೊಸ ದಾಳಿಗಳು, ಬುದ್ಧಿಶಕ್ತಿಯ ಜೀವಾಳದ ಭೇದ, ಬುದ್ಧಿಶಕ್ತಿಯ ಸ್ವರೂಪ, ಗ್ರಹಿಕೆ-ಪೂರ್ವಗ್ರಹಿಕೆ, ಶುದ್ಧಬುದ್ಧಿಗೆ ಒದಗುವ ಸೂಕ್ಷ್ಮ ವಿಘ್ನಗಳು, ಅನುಮಾನ ಪ್ರವೃತ್ತಿ-ಹೀಗೆ ಅನೇಕ ಸಂಗತಿಗಳ ಬಗ್ಗೆ ಅವರು ಅದರಲ್ಲಿ ಪ್ರಮಾಣಬದ್ಧವಾಗಿ ಬರೆದಿದ್ದಾರೆ. ಅಂತಿಮದಲ್ಲಿ ಶುದ್ಧ-ಬುದ್ಧಿಯೇ ಬದುಕಿನ ಒರೆಗಲ್ಲು ಎಂಬ ನಿಲುವಿಗೆ ಬರುತ್ತಾರೆ.

ಇಲ್ಲಿಗೇ ಕಾಯ್ಕಿಣಿಯವರ ವಿಚಾರವಾದದ ದಾಹ ತಣಿಯುವುದಿಲ್ಲ. ಆ ಕೃತಿ ಹೊರಬಂದಮೇಲೂ ವಿಚಾರವಾದದ ಮುಂದುವರಿಕೆಯಾಗಿ ಎರಡು ದೀರ್ಘ ಲೇಖನಗಳನ್ನು ಅವರು ಬರೆದಿದ್ದರೆ. 1980ರಲ್ಲಿ ಕಸ್ತೂರಿ ಮಾಸಿಕಕ್ಕಾಗಿ 'ವಿಚಾರವಾದ ಮತ್ತು ನಿರಾಶಾವಾದ' ಎಂಬ ಲೇಖನ ಬರೆದಿದ್ದಾರೆ. ತೊಂಬತ್ತರ ದಶಕಾರಂಭದಲ್ಲಿ 'ದಿ. ವಿ.ಜಿ. ಶಾನಭಾಗ ಸ್ಮಾರಕ ಉಪನ್ಯಾಸಮಾಲೆ ವೇದಿಕೆಯಿಂದ (ಕುಮಟಾದಲ್ಲಿ) ಮಾಡಿದ ದೀರ್ಘ ಭಾಷಣ, 'ವಿಚಾರವಾದ-ಉತ್ತರಾರ್ಧ' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ.

ಕಾಯ್ಕಿಣಿಯವರ ಸಾಹಿತ್ಯದ ಹರಹು ತುಂಬಾ ವಿಸ್ತಾರವಾದದ್ದು. 'ನವಮಾನವತಾವಾದ', 'ನಾಸ್ತಿಕವಾದ'ದ ಅವರ ಕೃತಿಗಳಿವೆ. 'ಪ್ರೀತಿ', 'ಗಂಡುಹೆಣ್ಣು' ಓದಲೇಬೇಕಾದ ಗ್ರಂಥಗಳೆಂದು ನಾನು ಅನೇಕರ ಬಳಿ ಹೇಳಿದ್ದುಂಟು. ಈ ಎರಡು ವಿಷಯಗಳ ಮೇಲೆ ಇಷ್ಟು ವಿಸ್ತೃತವಾದ, ವಿಚಾರಪೂರ್ಣವಾದ ಬರಹಗಳು ನನಗೆ ಬೇರೆಡೆ ಇದುವರೆಗೂ ಓದಲು ಸಿಕ್ಕಿಲ್ಲ. 'ಬಾಳೆಂಬ ಬಂಟನಿಗೆ ಗಂಡು ತ್ರಾಣವಾದರೆ, ಹೆಣ್ಣು ಪ್ರಾಣ' ಎಂಬುದು ಗೌರೀಶರ ತೀರ್ಮಾನ. 'ಗಂಡು-ಹೆಣ್ಣು' ಗ್ರಂಥದಲ್ಲೇ ಬಂದ ಮಾತಿದು.

ಪಾಶ್ಚಾತ್ಯ ಮಹಾ ಪ್ರತಿಭೆಗಳ ಬಗ್ಗೆ ಗೌರೀಶರು ಎಷ್ಟೊಂದು ಆಳವಾಗಿ ಓದಿಕೊಂಡಿದ್ದಾರೆ ಎಂಬ ಬಗ್ಗೆ ಅವರು ಸಾಕ್ರೆಟಿಸ್‌ನ ಬಗ್ಗೆ ಬರೆದ, ಆರಿಸ್ಟಾಟಲ್‌ನ ಬಗ್ಗೆ ಬರೆದ, ಮೆಕಿಯಾವೆಲ್ಲಿ ಬಗ್ಗೆ, ರುಸೋ, ವೊಲ್ಟಾರ್, ಚಾರ್ಲ್ಸ್ ಡಾರ್ವಿನ್‌ರ ಬಗ್ಗೆ; ಡಾ. ಜೊನ್‌ಸನ್, ಶೆಲ್ಲಿ, ಬಾಯರನ್, ಕೀಟ್ಸ್‌ರ ಬಗ್ಗೆ ಬರೆದ, ಐಸಾಕ್ ನ್ಯೂಟನ್ ಬಗ್ಗೆ ಬರೆದ, ಲೂಯೀಪಾಶ್ಚರ್ ಬಗ್ಗೆ ಬರೆದ, ಎಡಿಸನ್, ಲಿಂಕನ್, ಬಿಸ್ಮಾರ್ಕ, ಗೆರಿಬಾಲ್ಡರ ಬಗ್ಗೆ ಬರೆದ, ಎಝ್ರಾಪೌಂಡ್,

ಯೇಟ್ಸ್, ಇಲಿಯೆಟ್ ಮುಂತಾದವರ ಬಗ್ಗೆ ಬರೆದ ಬರಹಗಳನ್ನು ಬಿಡುವು ಮಾಡಿಕೊಂಡು ಓದಬೇಕು. ಈ ಎಲ್ಲರ ಕುರಿತ ಮಾಹಿತಿಗಳೇ ಒಂದು ಮಹಾಸಂಪುಟವಾಗಿ ಹೊರಬಂದದ್ದಿದೆ.

ಕಾಯ್ಕಿಣಿಯವರು ಕಾವ್ಯಶಾಸ್ತ್ರದ ಗಂಭೀರ ಮೀಮಾಂಸಕಾರರೂ ಹೌದು, ಕೃತಿಗಳ ರಸವಿಮರ್ಶಕರೂ ಹೌದು. ಕಾವ್ಯ ಅಂದರೇನು? ರಸನಿಷ್ಪತ್ತಿ ಅಂದರೇನು? ಅನುಭವ-ಅಭಿವ್ಯಕ್ತಿ ಅಂದರೇನು? ಅಥೆಂಟಿಕ್, ಜೆನ್ವಿನ್ ಅಂದರೇನು? ಎಂಬಿತ್ಯಾದಿ ಮೀಮಾಂಸೆ, ನಮ್ಮ ಮುಂದಿಟ್ಟು ಚರ್ಚಿಸಿದ್ದಾರೆ. ಸರ್ವಜ್ಞನ ವಚನದ ಕುರಿತು, ಮಾಸ್ತಿಯವರ 'ಸುಬ್ಬಣ್ಣ'ನ ಕುರಿತು, ಕಾರಂತರ 'ಗೀತನಾಟಕ'ಗಳ ಬಗ್ಗೆ, ಭೈರಪ್ಪನವರ ಕಾದಂಬರಿಗಳ ಬಗ್ಗೆ, ಬೇಂದ್ರೆ, ವಿ.ಜಿ. ಭಟ್, ಕಣವಿ, ಅಕಬರ ಅಲಿ, ರಂ.ಶ್ರೀ ಮುಗಳಿ, ಕಡಂಗೋಡ್ಲು, ದಿನಕರ ದೇಸಾಯಿ, ಸನದಿ ಮುಂತಾದವರ ಕಾವ್ಯಕೃತಿಗಳ ಬಗ್ಗೆ ಕಾಯ್ಕಿಣಿಯವರು ಬರೆದ ರಸವಿಮರ್ಶೆ, ವಿಮರ್ಶಾ ಕ್ಷೇತ್ರದಲ್ಲಿ 'ಕೈಕಿಣಿತನ' ಎಂಬ ಹೊಸ ಪ್ರಕಾರವನ್ನೇ ಕಟ್ಟಿಕೊಟ್ಟಿದೆ ಅನ್ನಬಹುದು.

ಗೌರೀಶ ಕಾಯ್ಕಿಣಿ ಒಬ್ಬ ಸಮರ್ಥ ಗೀತರೂಪಕಕಾರ. ಅವರ ರಂಗಪಂಚಮಿ, ಯಶೋಧರಾ, ವರ್ಷಾಗಮನ, ಚೈತ್ರ-ಚಿತ್ರ, ಕ್ರೌಂಚಧ್ವನಿ-ಇವೆಲ್ಲ ಓದಿಗೆಷ್ಟು ಹಿತವೋ ಹಾಗೆ ವೇದಿಕೆಯ ಮೇಲೂ ಅದ್ಭುತವಾದ ಪರಿಣಾಮ ಬೀರಿದ ರೂಪಕಗಳು. ಕರ್ಣರಸಾಯನ, ದೇವಿಕೊಟ್ಟ ಬೆಳಕು, ವಾಸವದತ್ತಾ, ಶಿವಯೋಗಾ ಸಿದ್ಧಿ ಅಪಾರ ಜನಪ್ರಿಯತೆ ಪಡೆದ ರೇಡಿಯೋ ರೂಪಕಗಳು. 'ಒಲುಮೆಯ ಒಗಟು', 'ಕೃಷ್ಣಾ-ರುಕ್ಮಿಣಿ-ಭಾಮೆ'ಯರನ್ನೊಳಗೊಂಡ ಸುಂದರ ನಾಟಕ. 'ಚಿದಂಬರ ಸ್ವಾರಸ್ಯ' ಅದ್ಭುತ ಹಾಸ್ಯ ನಾಟಕ.

ಇವರ ಕೃತಿಗಳ ವೈವಿಧ್ಯ, ವೈಶಾಲ್ಯ, ಹೊಸತನಗಳ ಬಗ್ಗೆ ಬರೆದಷ್ಟು ಕಡಿಮೆ. ಕೈಕಿಣಿ ಗೋಕರ್ಣದಂಥ ಒಂದು ಸೌಲಭ್ಯವಂಚಿತ ಮೂಲೆಯಲ್ಲಿ ಕುಳಿತು ಇಷ್ಟೆಲ್ಲಾ ಬರೆಯಲು ಹೇಗೆ ಸಾಧ್ಯವಾಯಿತು ಅನ್ನುವುದೇ ಒಂದು ಅಚ್ಚರಿ. ಮನುಷ್ಯನಾಗಿ, ಇವರ ಸಂಪರ್ಕ ಅನುಭವಿಸಿದವರು ಅದೃಷ್ಟವಂತರೆಂದೇ ನಾನು ನಂಬಿದ್ದೇನೆ. ಎಂದೂ ಯಾರನ್ನೂ ನೋಯಿಸಲು ಇಷ್ಟಪಡದ ಅವರ ನಿಲುವು ಕೆಲವೊಮ್ಮೆ ಅಲ್ಲಲ್ಲಿ ವಿಮರ್ಶೆಗೆ ಒಳಗಾದದ್ದೂ ಉಂಟು. ಆದರೆ ಗೌರೀಶರ ಮಗುಮನಸ್ಸನ್ನು ಪ್ರಶ್ನಿಸುವ ಅರ್ಹತೆ ಯಾರಿಗೂ ಇಲ್ಲ.

ಈ ಸಂದರ್ಭದಲ್ಲಿ ಅವರ 90ನೇ ಹುಟ್ಟು ಹಬ್ಬದ ದಿನ ನಡೆದ ಒಂದು ಘಟನೆ ನೆನಪಾಗುತ್ತಿದೆ. ಅದನ್ನು ಹೇಳಿ ನಿಲ್ಲಿಸುತ್ತೇನೆ. ಅವರ ಮನೆಗೆ ಅಂಕೋಲಾ ಕರ್ನಾಟಕ ಸಂಘದವರು ಹೋಗಿ ಅಭಿನಂದಿಸಿದ ಪ್ರಸಂಗ ಅದು. ಕೊನೆಯಲ್ಲಿ ಕಾಯ್ಕಿಣಿಯವರ ಮಾತು. ಅವರು ಕೇವಲ ನಾಲ್ಕು ನಿಮಿಷ ಮಾತನಾಡಿದ್ದರು. ಕೊನೆಯಲ್ಲಿ ಅಂದದ್ದು ಹೀಗೆ : ನನಗೆ ನಾಲ್ಕು ಭುಜಗಳಿವೆ. ಅವುಗಳ ಬಲದ ಮೇಲೆ ಎಲ್ಲ ನಡೆದಿದೆ. ಮೊದಲನೆಯ ಭುಜ ಶಾಂತು (ಶಾಂತಾ ಕಾಯ್ಕಿಣಿ), ಎರಡನೆಯ ಭುಜ ಅನು (ಜಯಂತ), ಮೂರನೆಯ ಭುಜ ವಿಷ್ಣು. ಇಷ್ಟು ಹೇಳಿದ ಮೇಲೆ ಮಾತಿಗೆ ವಿರಾಮ. ನೆರೆದ ಎಲ್ಲರಲ್ಲೂ ನಾಲ್ಕನೆಯ ಭುಜ ಯಾರು? ಎಂಬ ಪ್ರಶ್ನೆ. ಕಾಯ್ಕಿಣಿ ಅಂದರು: ನಾಲ್ಕನೆಯ ಭುಜ ಯಾರೆಂದು ನಾನು ಹೇಳುವುದಿಲ್ಲ. ಸಭೆ ಗೊಳ್ಳೆಂದು ನಕ್ಕಿತು. ಎಲ್ಲರೂ ತಾನೇ ಅಂದುಕೊಂಡು ಹೋಗುವ ಹಾಗೆ ಮಾತಿಗೆ ತಿರುವು ಕೊಟ್ಟರು. ಇದು ಕಾಯ್ಕಿಣಿಯವರ ಸಮಯ ಪ್ರಜ್ಞೆ ಮತ್ತು ಮಾತಿನ ಜಾಣತನ.

❑ **ವಿಷ್ಣು ನಾಯ್ಕ**

# ಉಚಿತ ಆರೋಗ್ಯ ತಪಾಸಣಾ ಶಿಬಿರ

ದಿನಾಂಕ 21.01.2012ರಂದು ಸಿಂಹಿಣಿ ದೆಹಲಿ ಗ್ರೇಟ್ (Lioness Delhi Great) ಅವರ ಸಹಯೋಗದೊಂದಿಗೆ ಪ್ರಸಿದ್ಧ ಮ್ಯಾಕ್ಸ್ ಆಸ್ಪತ್ರೆಯ ಸಿಬ್ಬಂದಿಗಳು ಉಚಿತ ಆರೋಗ್ಯ ಶಿಬಿರವನ್ನು ಸಂಘದ ಆವರಣದಲ್ಲಿ ನಡೆಸಿಕೊಟ್ಟರು. ದೆಹಲಿ ಕರ್ನಾಟಕ ಸಂಘದ ಉಪಸಮಿತಿ ಮಹಿಳಾ ಸಮಿತಿಯು ಈ ಶಿಬಿರವನ್ನು ಆಯೋಜಿಸಿತ್ತು.

ಜನಸಂಪನ್ಮೂಲದ ಆಧಾರ ಬಿಂದು ಆರೋಗ್ಯ ಸಂಪತ್ತಿನ ಕಡೆ ಗಮನ ಹರಿಸಿ ಮಹಿಳೆಯರು ಎಚ್ಚೆತ್ತರೆ ತಮ್ಮ ಪೂರ್ಣ ಸಂಸಾರದ ಆರೋಗ್ಯದ ಹಿತದೃಷ್ಟಿಯೊಂದಿಗೆ ಸಮಾಜದ ಆರೋಗ್ಯದೊಂದಿಗೆ ಸರ್ವತೋಮುಖ ಬೆಳವಣಿಗೆಗೆ ತಮ್ಮ ಅಮೂಲ್ಯ ಕೊಡುಗೆ ನೀಡುವಲ್ಲಿ ಯಾವುದೇ ಸಂಶಯವಿಲ್ಲ. ಇಂದಿನ ದಿನಗಳಲ್ಲಿ ಸಮಯದ ಅಭಾವ, ಒತ್ತಡ, ಜೀವನದ ರೀತಿ, ನೀತಿ, ಶೈಲಿಗಳು ಆರೋಗ್ಯ ಒಂದರ ಹೊರತಾಗಿ ಎಲ್ಲಾ ಭಾಗಗಳನ್ನೂ ತಮ್ಮದಾಗಿಸುವ ತರಾತುರಿಯಲ್ಲಿ ನಮ್ಮ ಬದುಕಿನ ಮೂಲವನ್ನು ಮರೆಯದೆ ಆರೋಗ್ಯದ ಕಡೆ ಚಾಲನೆ ಮಾಡುವ ಸದುದ್ದೇಶದೊಂದಿಗೆ ಆರೋಗ್ಯ ಶಿಬಿರವನ್ನು ಮಹಿಳಾ ಸಮಿತಿಯವರು ಹಮ್ಮಿಕೊಂಡರು.



**ಸಂಘದ ಪರವಾಗಿ ಡಾ. ವೆಂಕಟಾಚಲ ಹೆಗಡೆ, ಶ್ರೀಮತಿ ಸರೋಜ ಮಾಧವ, ಶ್ರೀ ಸಿ.ಎಂ. ನಾಗರಾಜ, ಶ್ರೀಮತಿ ಎಸ್.ಸಿ. ಹೇಮಲತ ಹೂಗುಚ್ಛ ನೀಡಿ ವೈದ್ಯರನ್ನು ಹಾಗು ಸಿಂಹಿಣಿಯರನ್ನು ಗೌರವಿಸಿದರು**

ಇಬ್ಬರು ಹೃದಯ ತಜ್ಞರು, ನರಗಳ ತಜ್ಞರು, ಕಣ್ಣಿನ ತಜ್ಞರು, ಮಹಿಳೆಯ ತಜ್ಞರು (Gynaecogist), ಮಧುಮೇಹ ಪರೀಕ್ಷೆ (Blood Glucose test), ರಕ್ತದೊತ್ತಡದ ಪರೀಕ್ಷೆ (B.P), ಹೃದಯದ ಸಮತೋಲನದ ಸ್ಥಿತಿಗತಿಯ ಪರೀಕ್ಷೆ (E.C.G), ಕಣ್ಣಿನ ಪರೀಕ್ಷೆಗಳೊಂದಿಗೆ ಎಲ್ಲಾ ತಜ್ಞರುಗಳು ಸೂಕ್ತ ಸಲಹೆ, ಸಮಾಧಾನಗಳನ್ನು ನೀಡಿ ಕಾಯಿಲೆಯ ಪರಿಮಿತಿಯ ಅರಿವು ಮೂಡಿಸಿದರು. ಕಣ್ಣಿನ ಡಾಕ್ಟರು ರಿಯಾಯಿತಿ ದರದಲ್ಲಿ ಕನ್ನಡಕಗಳನ್ನು ವಿತರಿಸಿದರು. ಕಣ್ಣಿನ ಪೊರೆ ಅಥವ ಮಂದದೃಷ್ಟಿಗೆ ಶಸ್ತ್ರ ಚಿಕಿತ್ಸೆಯ ಅಗತ್ಯವಿದ್ದಲ್ಲಿ ಅವರುಗಳಿಗೆ ಆಸ್ಪತ್ರೆಯಲ್ಲಿ ಉಚಿತ ಶಸ್ತ್ರ ಚಿಕಿತ್ಸೆ ಮಾಡಿಸುವ ವ್ಯವಸ್ಥೆಯನ್ನು ಮುಂದಿನ ದಿನಗಳಲ್ಲಿ ಮಾಡಲಾಗುವುದೆಂದು ಕಣ್ಣಿನ ತಜ್ಞರು ತಿಳಿಸಿರುವರು. ಈ ಆರೋಗ್ಯ ಶಿಬಿರದಲ್ಲಿ ಪಾಲ್ಗೊಂಡು ಆರೋಗ್ಯ ಚೀಟಿ ಪಡೆದುಕೊಂಡವರು ಡಾಕ್ಟರನ್ನು ನೇರವಾಗಿ ಸಂಪರ್ಕಿಸಲೂಬಹುದು.

ಸುಮಾರು 100ಕ್ಕೂ ಹೆಚ್ಚು ಕನ್ನಡಿಗರು ತಪಾಸಣೆಯ ಅತ್ಯುತ್ತಮ ಉಪಯೋಗವನ್ನು ಪಡೆದುಕೊಂಡರು. ಸ್ನೇಹಾ ಲೇಡಿಸ್ ಅಸೋಸಿಯೇಶನ್, ಜನಕಪುರಿ ಮಹಿಳಾ ಮಂಡಳಿ, ದೆಹಲಿ ಪೋಲಿಸ್ ಮಹಿಳೆಯರು, ಕರ್ನಾಟಕ ಭವನದ ಮಹಿಳೆಯರು ಸ್ವಯಂ ಸೇವೆಯನ್ನು ಸಲ್ಲಿಸಿದರು. ದೆಹಲಿ ಸಿಂಹಿಣಿಯರಾದ ಶ್ರೀಮತಿ ಮಾಲತಿ, ಶ್ರೀಮತಿ ರಜನಿ, ಶ್ರೀಮತಿ ರಮೇಶ್ ಕೂಡಾ ಶಿಬಿರದಲ್ಲಿ ಉಪಸ್ಥಿತರಿದ್ದು ಸೂಕ್ತ ಸಲಹೆಗಳನ್ನು ನೀಡಿ ಸಹಕರಿಸಿದರು. ಮುಂಬರುವ ದಿನಗಳಲ್ಲಿ ಎಲ್ಲಾ ತರದ ಉಚಿತ ಆರೋಗ್ಯ ತಪಾಸಣೆಯನ್ನು ಹೆಚ್ಚಿನ ವೈದ್ಯಕೀಯ ಸೌಲಭ್ಯದೊಂದಿಗೆ, ಕ್ಯಾನ್ಸರ್‌ನ ತಪಾಸಣೆಯನ್ನೂ ನಡೆಸಿಕೊಡುವುದಾಗಿ ದೆಹಲಿ ಸಿಂಹಿಣಿಯರ ಜಿಲ್ಲಾಧ್ಯಕ್ಷೆ ಆಶ್ವಾಸನೆ ನೀಡಿದರು.

ಈ ಆರೋಗ್ಯ ಶಿಬಿರದ ಸಂಪೂರ್ಣ ಹೊಣೆಗಾರಿಕೆಯನ್ನು ಮಹಿಳಾ ಉಪಸಮಿತಿಯ ಅಧ್ಯಕ್ಷೆ ಶ್ರೀಮತಿ ಸರೋಜಾ ಮಾಧವ ಅವರು ಅತ್ಯಂತ ಉತ್ಸಾಹ, ಕಾಳಜಿ ವಹಿಸಿ ಯಶಸ್ವಿಯಾಗಿ ನಿರ್ವಹಿಸಿದರಲ್ಲದೇ ಮತ್ತಷ್ಟು ಆರೋಗ್ಯ ಸಂಬಂಧ ಕಾರ್ಯಕ್ರಮಗಳನ್ನು ಆಯೋಜಿಸುವುದಾಗಿ ತಿಳಿಸಿದ್ದಾರೆ. ಮಹಿಳಾ ಸಮಿತಿಯ ಸಂಚಾಲಕಿ ಹೇಮಲತ ಗುಡ್ಡೇಗೌಡ ಅವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸುವಲ್ಲಿ ಸಹಕರಿಸಿದರು.

❑ **ಸರೋಜ ಮಾಧವ**

# ಗೌರೀಶರ ವೈಚಾರಿಕತೆ ಈಗ ಇನ್ನಷ್ಟು ಪ್ರಸ್ತುತ

## ದೆಹಲಿ ಕರ್ನಾಟಕ ಸಂಘದಲ್ಲಿ ಗೌರೀಶ ಕಾಯ್ಕಿಣಿ ಶತಮಾನೋತ್ಸವ

*'ಜಿಜ್ಞಾಸೆ' ಮತ್ತು ಜೀವಂತ 'ಲವಲವಿಕೆ'ಗಳು ಗೌರೀಶರ ವ್ಯಕ್ತಿತ್ವದ ಎದ್ದು ಕಾಣುವ ಗುಣಗಳು. ವೈಚಾರಿಕತೆಯ ಮುಖ್ಯ ಲಕ್ಷಣ ಮುಕ್ತತೆ. ನಮ್ಮದು ಮಾರ್ಕ್ಸ್, ಫ್ರಾಯ್ಡ್ ನಂತರದ ರಚನಾವಾದಿಗಳ ನಂತರದಯುಗ. ಈ ಯುಗದ ಆಹ್ವಾನಗಳೇ ಬೇರೆ, ಅವನ್ನು ಎದುರಿಸುವಲ್ಲಿ ಗೌರೀಶರ ಮಾದರಿ ಅನುಕರಣೀಯವಾಗಿದೆ. ಮನುಷ್ಯನ ಆಸ್ಥೆಗೆ ಯೋಗ್ಯವಾದುದೆಲ್ಲವೂ ಮನುಷ್ಯರಾಗಿ ಬೆಚ್ಚಿಕೊಳ್ಳಲು ನಮಗೆ ನೆರವಾಗಬಲ್ಲುದೆಲ್ಲವೂ ಗೌರೀಶರ ಸಾಹಿತ್ಯಕ್ಕೆ ವಸ್ತುಗಳಾಗಿವೆ. ನಿರಂತರವಾಗಿ ತಿಳಿಯುವ ಆಸೆ ಹಾಗೂ ಜೀವಂತ ಲವಲವಿಕೆಯನ್ನು ಕಾಪಿಟ್ಟುಕೊಂಡು ಬುದ್ಧಿಯು ಪ್ರಜ್ಞೆಯಾಗಿ ವಿಕಾಸವಾಗಲೆಂದು ಹಾರೈಸಿ ಪಡುಮೂಲೆಯ ಕಡಲತಡಿಯ ಪುಟ್ಟ ಗೂಡಿನ ಗಾಳಿಚಿಟ್ಟೆಯ ಮೇಲೆ ಕೂತು ಚಿಂತಿಸಿದ ಪ್ರಚಂಡ ವಿಚಾರವಾದಿ, ಚಿಂತಕ ಗೌರೀಶ ಕಾಯ್ಕಿಣಿ ಅವರ ಜನ್ಮಶತಮಾನೋತ್ಸವ ವಿಚಾರ ಸಂಕಿರಣ ರಾಜಧಾನಿಯಲ್ಲಿ ಜನವರಿ 21, 22 ರಂದು ಅರ್ಥಪೂರ್ಣವಾಗಿ ನಡೆಯಿತು.*



ಕೆ. ಮರುಳುಸಿದ್ದಪ್ಪ ಅವರು ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವುದು

"ಇತ್ತೀಚಿನ ವರ್ಷಗಳಲ್ಲಿ ಭಾರತದಲ್ಲಿ ಹೇಗೋ ಹಾಗೆ ಕರ್ನಾಟಕದಲ್ಲಿ ಕೂಡಾ ವೈಚಾರಿಕತೆ ಕುಂಠಿತವಾಗುತ್ತಿದೆ. ಇಂಥ ಸಂದರ್ಭದಲ್ಲಿ ಗೌರೀಶ ಕಾಯ್ಕಿಣಿ ಅವರ ವಿಚಾರವಾದ ದಾರಿದೀಪವಾಗಬೇಕು. ಗೋಕರ್ಣದಂಥ ಕಡಲತಡಿಯ ಪುಟ್ಟ ಊರಲ್ಲಿ ಕುಳಿತು ತಮ್ಮ ಪ್ರಖರ ವೈಚಾರಿಕೆಯಿಂದ ಧಾರ್ಮಿಕ ಮೌಢ್ಯ, ವಂಚನೆ, ಲಂಚಕೋರತನ ಇತ್ಯಾದಿಗಳನ್ನು ಖಂಡಿಸುತ್ತಾ ಭಾರತೀಯರಿಗೆ ಯಾವ ದಾರಿ ಕ್ಷೇಮವಾದುದು ಎಂದು ಆಲೋಚಿಸಿದ ಗೌರೀಶರು ಭಾವನೆಗಿಂತ ಬುದ್ಧಿಗೆ ಪ್ರಾಶಸ್ತ್ಯ ನೀಡಿದ್ದರು" ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯ ಕೆ. ಮರುಳುಸಿದ್ದಪ್ಪ ಅವರು ಅಭಿಪ್ರಾಯಪಟ್ಟರು. ಅವರು ಜನವರಿ 21ರಂದು ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಗೌರೀಶ ಕಾಯ್ಕಿಣಿ ಶತಮಾನೋತ್ಸವ ಕಾರ್ಯಕ್ರಮದ ಉದ್ಘಾಟನಾ ಭಾಷಣ ಮಾಡುತ್ತಿದ್ದರು. ಅವರು ಮುಂದುವರೆದು "ಗೌರೀಶರಂತೆಯೇ ವಿಚಾರವಾದಿಯಾಗಿದ್ದ ಕುವೆಂಪು ಅವರ ಪ್ರಭಾವವೂ 70ರ ದಶಕದ ಎಲ್ಲ ಕನ್ನಡ ಚಳುವಳಿಗಳಿಗೆ ನಾಂದಿಯಾದವು. ಏಕೀಕರಣ ಚಳುವಳಿ, ಬಂಡಾಯ ಚಳುವಳಿಗಳು ಆ ಕಾಲದಲ್ಲಿ ಕನ್ನಡ ನಾಡನ್ನು ಪ್ರಭಾವಿಸುವಲ್ಲಿ ಮತ್ತು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದವು. ವಿಚಾರವಾದದ ಬಗ್ಗೆ ಗೌರೀಶರ ನಿಷ್ಠೆ ಅನನ್ಯವಾದುದು" ಎಂದು ಹೇಳಿದರು. ದೆಹಲಿ ಕರ್ನಾಟಕ ಸಂಘ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಸಹಯೋಗದಲ್ಲಿ ನಡೆಸಲಾದ ಈ ವಿಚಾರ ಸಂಕಿರಣದಲ್ಲಿ ಅಂದಿಗಿಂತಲೂ ಇಂದು ಗೌರೀಶರ ವೈಚಾರಿಕತೆ ಹೆಚ್ಚು ಪ್ರಸ್ತುತ ಎಂಬ ಅಂಶವನ್ನು ಅವರು ಒತ್ತಿ ಹೇಳಿದರು.

ಸ್ವಾಗತದ ಜೊತೆ ಪ್ರಾಸ್ತಾವಿಕ ನುಡಿಗಳನ್ನಾಡಿದ ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿ ಶ್ರೀ ಅಗ್ರಹಾರ ಕೃಷ್ಣಮೂರ್ತಿ ಅವರು "ಇಡೀ ಜಗತ್ತಿನಾದ್ಯಂತ ಇರಬೇಕಾದ ವಸ್ತುಗಳಲ್ಲೆದರಲ್ಲೂ ಸದಾ ಚಿಂತನಶೀಲರಾಗಿದ್ದ ಗೌರೀಶ ಕಾಯ್ಕಿಣಿ ಬರೆಯದ ವಿಷಯಗಳೇ ಇಲ್ಲ. ಅವರು ಬರೆಯುವ ಕಾಲಕ್ಕೆ ಯಾವ ಸೌಕರ್ಯವೂ ಇರದ ತಮ್ಮ ಜನ್ಮಸ್ಥಾನ ಗೋಕರ್ಣವನ್ನೇ ಕೇಂದ್ರವಾಗಿಟ್ಟುಕೊಂಡು ಬಹೂದಕರು ಸಾಧಿಸದ್ದನ್ನು ಕುಟೀಚಕರು ಸಾಧಿಸಿ ತೋರಿಸಿದಂತೆ ಗೌರೀಶರು ಎಲ್ಲೂ ಅಲೆಯದೇ ತಮ್ಮ ಕುಟೀರದಲ್ಲಿದ್ದುಕೊಂಡೇ ಮಹತ್ತರವಾದುದನ್ನು ಸಾಧಿಸಿದ್ದಾರೆ" ಎಂದು ಹೇಳಿದರು. ನಮ್ಮ ಪರಂಪರೆಯಲ್ಲಿನ ಬಹೂದಕ ಮತ್ತು ಕುಟೀಚಕ ಪರಿಕಲ್ಪನೆಯನ್ನು ವಿವರಿಸುತ್ತಾ "ಗೌರೀಶರು ಗುಡಿಸಲು ಕಟ್ಟಿಕೊಂಡು, ಜಗತ್ತನ್ನು ಕಟ್ಟಿಕೊಡುವ ಅಪರೂಪದ ಚಿಂತನಕಾರರು. 'ಆಡು ಮುಟ್ಟದ ಸೊಪ್ಪಿಲ್ಲ' ಎಂಬಂತೆ ಅವರು ಚಿಂತಿಸದ ವಿಚಾರಗಳೇ ಇಲ್ಲ. ಯುವ ಜನಾಂಗವನ್ನು ವೈಚಾರಿಕತೆಯೆಡೆಗೆ ಆಕರ್ಷಿಸಿದರು" ಎಂದು ಗೌರೀಶರ ಪ್ರಗತಿಪರ ಚಿಂತನೆಗಳಿಗೆ ಬೆಳಕು ಚೆಲ್ಲಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಗೌರೀಶ ಕಾಯ್ಕಿಣಿ ಅವರ ಜನ್ಮ ಶತಮಾನೋತ್ಸವ ವಿಚಾರ ಸಂಕಿರಣವನ್ನು ಆಚರಿಸುವ ಪ್ರಸ್ತಾಪ ಬಂದಾಗ ಅದಕ್ಕೆ ಬೆಂಬಲಿಸಿ ಕಾರ್ಯಕ್ರಮವನ್ನು ರೂಪಿಸಿದ ಸಾಹಿತ್ಯ ಅಕಾಡೆಮಿ, ಕನ್ನಡ ಸಲಹಾ ಸಮಿತಿಯ ಸದಸ್ಯ ವಿಷ್ಣು ನಾಯ್ಕರ ಅದಮ್ಯ ಉತ್ಸಾಹ ಸ್ತುತ್ಯಾರ್ಹವೆಂದರು. "ಹತ್ತು ವರ್ಷಗಳ ಹಿಂದೆಯೇ ಗೌರೀಶರ ವೈಚಾರಿಕ ಲೇಖನಗಳನ್ನು ಸಂಗ್ರಹಿಸಿ ಅವುಗಳನ್ನು ಹತ್ತು ಸಂಪುಟಗಳಾಗಿ ಹೊರತರುವ ಅಸಾಮಾನ್ಯ ಕಾರ್ಯವನ್ನು ವಿಷ್ಣು ನಾಯ್ಕರು ಮಾಡಿದ್ದಾರೆ. ಗಂಗಾಧರ ಚಿತ್ತಾಲ, ದಾಮೋದರ ಚಿತ್ತಾಲ, ಯಶವಂತ ಚಿತ್ತಾಲ, ದಿನಕರ ದೇಸಾಯಿ ಮುಂತಾದ ಸಾಹಿತಿ ದಿಗ್ಗಜರನ್ನು ನೀಡಿದ ಉತ್ತರ ಕನ್ನಡ ಜಿಲ್ಲೆಯ ಅಘನಾಶಿನಿಯ ಮೈಸಿರಿಯ ವ್ಯಾಪ್ತಿಯಲ್ಲಿ ಚೆಲುವಿನ ಕಾಡಿನ ಪರಿಸರ, ಕೋಟಿತೀರ್ಥ, ಮಹಾಬಲೇಶ್ವರ ದೇವಾಲಯದ ಪುಣ್ಯದ ನೆಲ ಗೋಕರ್ಣದಲ್ಲಿ ಅರವತ್ತು ಸಂವತ್ಸರಗಳಿಗೂ ಹೆಚ್ಚು ಕಾಲ ಸಾಹಿತ್ಯವನ್ನೇ ಬದುಕಿದ ಗೌರೀಶರ ಜನ್ಮಶತಮಾನೋತ್ಸವನ್ನು ನಾವಿಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ಆಚರಿಸುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯ. ಇಂದಿನ ಪೀಳಿಗೆಗಾಗಿ ಕರ್ನಾಟಕದ ಮೂಲೆಮೂಲೆಯಲ್ಲಿನ ಹಿರಿಯ ಸಾಹಿತಿಗಳನ್ನು ಗುರುತಿಸಿ ಗೌರವಿಸಬೇಕು. ದೆಹಲಿ ಕರ್ನಾಟಕ ಸಂಘ ಈ ನಿಟ್ಟಿನಲ್ಲಿ ಗಂಭೀರವಾಗಿ ಕೆಲಸ ಮಾಡುತ್ತಿದೆ' ಎಂದರು.

ಈ ಸಂದರ್ಭದಲ್ಲಿ ಡಾ. ಎಂ.ಜಿ. ಹೆಗಡೆ ಅವರು ಬರೆದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಟಿಸಿದ ಭಾರತೀಯ ಸಾಹಿತ್ಯ ನಿರ್ಮಾಪಕರು–'ಗೌರೀಶ ಕಾಯ್ಕಿಣಿ' ಪುಸ್ತಕವನ್ನು ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ. ಚಂದ್ರಶೇಖರ ಕಂಬಾರ ಅವರು ಬಿಡುಗಡೆ ಮಾಡಿ "ಸಾಮಾಜಿಕ ಕಳಕಳಿಯ ನಿಷ್ಠಾವಂತ ವಿಚಾರವಾದಿ ಗೌರೀಶ ಕಾಯ್ಕಿಣಿ ಅವರು ಇಂದಿಗೂ ಪ್ರಸ್ತುತವಾಗಿದ್ದಾರೆ, ಅವರ ಬರಹಗಳಲ್ಲಿ ವೈಚಾರಿಕ ನೆಲೆಗಟ್ಟಿನ ಚಿಂತನೆಯಿದೆ" ಎಂಬ ಮಾತನ್ನು ಪುಷ್ಟೀಕರಿಸುತ್ತ ವಿಷ್ಣು ನಾಯ್ಕ ಅವರು ಮುಂದೆ ಬಂದು ಗೌರೀಶರ ಎಲ್ಲ ಬರಹಗಳನ್ನು ಸಮಗ್ರ ಸಂಪುಟಗಳಲ್ಲಿ ಹೊರತಂದುದಕ್ಕೆ

ಅಭಿನಂದಿಸಿದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ ನಾಡಿನ ಪ್ರಖ್ಯಾತ ಕನ್ನಡ ವಿಮರ್ಶಕರಾದ ಶ್ರೀ ಸಿ.ಎನ್. ರಾಮಚಂದ್ರನ್ ಅವರು ಕನ್ನಡ ಪರಂಪರೆಯಲ್ಲಿನ ಬಹೂದಕ, ಕುಟೀಚಕ ವ್ಯಕ್ತಿತ್ವವನ್ನು ಗುರುತಿಸಿ ಗೌರೀಶ ಕಾಯ್ಕಿಣಿ ಯಾವ ಗುಂಪಿಗೆ ಸಲ್ಲುತ್ತಾರೆಂಬ ನೂತನ ವಿಚಾರವನ್ನು ತಿಳಿಸಿದ ಅಗ್ರಹಾರ ಕೃಷ್ಣಮೂರ್ತಿ ಅವರ ಅಭಿಪ್ರಾಯವನ್ನು ಸಮೀಕರಿಸುತ್ತ, ಹೆಚ್ಚು ಕಡಿಮೆ ಗೌರೀಶರ ಎಲ್ಲಾ ಕೃತಿಗಳು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಬಿಡುಗಡೆಯಾದವಾದರೂ ಅವರು ನವೋದಯ ಘಟ್ಟದ ಮಹಾಲೇಖಕರ ಸಾಲಿಗೆ ಸೇರುತ್ತಾರೆ. ಸಾಹಿತ್ಯ, ಸಂಗೀತ ಸೇರಿದಂತೆ ಕಾವ್ಯ, ನಾಟಕ, ವಿಮರ್ಶೆ ಮುಂತಾಗಿ ಎಲ್ಲಾ ಸಾಹಿತ್ಯ ಪ್ರಕಾರಗಳಲ್ಲೂ ಸೃಜನಶೀಲರಾಗಿದ್ದ ಅವರದು ಬಹುಮುಖ ಪ್ರತಿಭೆ. ಬಹುಶ್ರುತರು ಕೂಡ. ಇಂದಿಗೂ ಪ್ರಸ್ತುತರಾಗಿರುವ ಗೌರೀಶ ಕಾಯ್ಕಿಣಿ ಅವರ ವಿಚಾರವಾದ, ವೈಚಾರಿಕ ಸಾಹಿತ್ಯ ಅನುಕರಣೀಯವಾದುದು ಎಂದು ಅಭಿಪ್ರಾಯಪಟ್ಟರು. "ಗೌರೀಶ ಕಾಯ್ಕಿಣಿ ಹಾಗೂ ನವೋದಯ ಕಾಲದ ಕುವೆಂಪು, ಬೇಂದ್ರೆ, ಮಾಸ್ತಿ, ಶಿವರಾಮ ಕಾರಂತ ಮೊದಲಾದ ಸಮಕಾಲೀನರಲ್ಲಿ ಅನೇಕ ನೆಲೆಗಳಲ್ಲಿ ಸಮಾನ ಗುಣಗಳಿವೆ. ಕಾರಂತರು ತಮ್ಮ "ಅಳಿದ ಮೇಲೆ" ಕಾದಂಬರಿಯಲ್ಲಿ 'ಸಾಮಾಜಿಕ ಋಣದ ಕಲ್ಪನೆ' ಅಂದರೆ ಅಳಿದ ಮೇಲೆಯೂ ಸಮಾಜಕ್ಕೆ ಮರಳಿ ಏನನ್ನಾದರೂ ಕೊಡುವಂಥ ಮಾನವೀಯ ಗುಣಗಳ ಕುರಿತು ಬರೆದುದಲ್ಲದೇ ವೈಯಕ್ತಿಕವಾಗಿಯೂ ಪಾಲಿಸಿದರು. ಅಂತೆಯೇ ಗೌರೀಶ ಕಾಯ್ಕಿಣಿ ಕೂಡ ಇದನ್ನೇ ಪ್ರತಿಪಾದಿಸುತ್ತಾರೆ. ವಿಚಾರವಾದವನ್ನು ಒಪ್ಪಿಕೊಂಡಾಗ ಶೋಧಿಸುವ ಪ್ರವೃತ್ತಿ ತಂತಾನೆ ಬರುತ್ತದೆ. ಬದುಕಿನ ಕೊನೆಯುಸಿರಿರುವರೆಗೂ ಜಗತ್ತಿನ ಬಗ್ಗೆ, ಬದುಕಿನ ಬಗ್ಗೆ ಉತ್ಸಾಹ ಹಾಗೂ ಜಿಜ್ಞಾಸೆ ಪ್ರವೃತ್ತಿಯನ್ನು ನಮಗೆ ನೀಡಿದವರು–ಮೂಡಿಸಿದವರು" ಎಂಬ ವಿದ್ವತ್ಪೂರ್ಣವಾದ ಮಾತುಗಳನ್ನು ಹೇಳಿದರು.

ಕಾರ್ಯಕ್ರಮದ ಮೊದಲಿಗೆ ಸಂಘದ ಕಲಾವಿದರು ವಿಶ್ವವಿನೂತನ, ತಾಯೆ ಬಾರ ಹಾಗೂ ಜಯ ಭಾರತ ಜನನಿಯ ತನುಜಾತೆ ಸುಗಮ ಗೀತೆಗಳನ್ನು ಹಾಡುವ ಮೂಲಕ ಕಾರ್ಯಕ್ರಮಕ್ಕೆ ಶುಭಾರಂಭವನ್ನು ಮಾಡಿದರು.



ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರ ಅವರಿಂದ ಪುಸ್ತಕ ಬಿಡುಗಡೆ

ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿ ಉದ್ಘಾಟನಾ ಕಾರ್ಯಕ್ರಮವನ್ನು ನಿರೂಪಿಸಿದರು. ಕಾರ್ಯದರ್ಶಿ ಸಿ.ಎಂ.ನಾಗರಾಜ ವಂದಿಸಿದರು.

ನಂತರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಗೌರೀಶ ಕಾಯ್ಕಿಣಿ ಅವರ ಮೊಮ್ಮಗಳು, ಜಯಂತ್ ಕಾಯ್ಕಿಣಿ ಅವರ ಮಗಳು ಸೃಜನಾ ಕಾಯ್ಕಿಣಿ ಅವರ ಮೋಹಕ ಒಡಿಸ್ಸಿ ನೃತ್ಯ ತಾತನ ಜನ್ಮಶತಮಾನೋತ್ಸವವನ್ನು ಅರ್ಥಪೂರ್ಣಗೊಳಿಸಿತು. ಬೆಂಗಳೂರಿನಲ್ಲಿ ಆರು ವರ್ಷ ಗುರು ಕ್ಷಮಾರಾವ್ ಅವರ ವಿದ್ಯಾರ್ಥಿನಿಯಾಗಿದ್ದ ಸೃಜನಾ ಕಾಯ್ಕಿಣಿ ಈಗ ದೆಹಲಿಯಲ್ಲಿ ಗುರು ಗೀತಾಂಜಲಿ ಆಚಾರ್ಯ ಅವರ ಬಳಿ ನೃತ್ಯ ಕಲಿಕೆಯನ್ನು ಮುಂದುವರಿಸಿದ್ದಾಳೆ. ವಾಸ್ತುಶಿಲ್ಪ ಪದವೀಧರೆ ಆಗಿರುವ ಆಕೆ ಈಗ ಜೆ.ಎನ್.ಯು.ನಲ್ಲಿ ಕಲೆ ಮತ್ತು ಸೌಂದರ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಗಾಗಿ ಓದುತ್ತಿದ್ದಾಳೆ. ಸೃಜನ ಮಂಗಳಾಚರಣ್, ಸಾವೇರಿ ಪಲ್ಲವಿ ಹಾಗೂ ಮೋಕ್ಷ ಮೂರು ಕಿರು ನೃತ್ಯಗಳನ್ನು ಪ್ರದರ್ಶಿಸಿದಳು.

ದೆಹಲಿ ಕರ್ನಾಟಕ ಸಂಘದ ಮಹಿಳಾ ಸದಸ್ಯರು ಅತ್ಯುತ್ಸಾಹದಿಂದ ಶ್ರೀ ಶಿವಾನಂದ ಇಂಗಳೇಶ್ವರ್ ನಿರ್ದೇಶನದಲ್ಲಿ ಪ್ರದರ್ಶಿಸಿದ ಗೌರೀಶ ಕಾಯ್ಕಿಣಿ ವಿರಚಿತ 'ಅತ್ತೆಗೆ ಲತ್ತೆ' ನಾಟಕ ಎಲ್ಲರ ಮೆಚ್ಚುಗೆಯನ್ನು ಗಳಿಸಿತು. ಸಹಕಾರ್ಯದರ್ಶಿ ಎನ್. ಆರ್.ಶ್ರೀನಾಥ್ ಕಾರ್ಯಕ್ರಮವನ್ನು ನಿರ್ವಹಿಸಿದರು.





ಕುಮಾರಿ ಸೃಜನಾ ಕಾಯ್ಕಿಣಿ ಅವರಿಂದ ಒಡಿಸ್ಸಿ ನೃತ್ಯ

***ಗೋಷ್ಠಿ 1 :*** ಜನವರಿ 22, ಬೆಳಗಿನ ಗೋಷ್ಠಿಯ ಅಧ್ಯಕ್ಷತೆಯನ್ನು ಸಾಹಿತ್ಯ ಅಕಾಡೆಮಿ ಸದಸ್ಯ, ವಿಷ್ಣು ನಾಯ್ಕ್ ವಹಿಸಿದ್ದರು. ಮೊದಲಿಗೆ 'ಗೌರೀಶ ಕಾಯ್ಕಿಣಿ ಹಾಗೂ ಭಾರತೀಯ ವೈಚಾರಿಕ ಪರಂಪರೆ' ಕುರಿತು ಪ್ರಬಂಧ ಮಂಡಿಸಿದ ದೆಹಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಪ್ರೊ. ಟಿ.ಎಸ್. ಸತ್ಯನಾಥ್ ಅವರು ನವೋದಯ ಮತ್ತು ನವ್ಯದ ಸಂದರ್ಭದಲ್ಲಿ ಗೌರೀಶ ಕಾಯ್ಕಿಣಿ ಅವರನ್ನು ನೋಡುವ, ಇವತ್ತಿನ ವಿಶ್ವಮೌಲ್ಯದ ಚೌಕಟ್ಟಿನಲ್ಲಿ ಎಷ್ಟು ಪ್ರಸ್ತುತರಾಗುತ್ತಾರೆಂಬ ವಿಚಾರವನ್ನು ಗಂಭೀರವಾಗಿ ಚರ್ಚಿಸುವ ಸೂತ್ರಗಳನ್ನು ವಿವರಿಸಿದರು. ವಸಾಹತುಶಾಹಿ ಮತ್ತು ಆಧುನಿಕತೆಯ ಸಂದರ್ಭದಲ್ಲಿ ಚಿಕಾಗೋ ವಿಶ್ವವಿದ್ಯಾಲಯದಲ್ಲಿ ಭಾರತೀಯ ಭಾಷೆ ಮತ್ತು ಸಂಸ್ಕೃತವನ್ನು ಓದಿಸುತ್ತಿದ್ದ ಶೆಲ್ಡಾನ ಪೋಲಾಕ್‌ನನ್ನು ಉಲ್ಲೇಖಿಸುತ್ತ 20ನೇ ಶತಮಾನದ ಆದಿಭಾಗದಲ್ಲಿ ಪಾಶ್ಚಾತ್ಯ ಚಿಂತನೆ ಮತ್ತು ಸಮಕಾಲೀನ ಚಿಂತನೆಯನ್ನು ಅರ್ಥೈಸುವ ಒಂದು ಬಗೆಯ ವೈಚಾರಿಕ ಚಲನೆಯುಂಟಾಗಿದ್ದನ್ನು ವಿವರಿಸಿದರು. ಅದಲ್ಲದೆ ವಿಚಾರವಾದವನ್ನು ಒಪ್ಪಿಕೊಳ್ಳುತ್ತ ತಾತ್ವಿಕ ವೈರುಧ್ಯವನ್ನು ಸ್ಥಗಿತಗೊಳಿಸುವ ಹಾಗೂ ಮರು ಅರ್ಥೈಸುವ ಪ್ರಯತ್ನವನ್ನು ಆಗಿನ ಲೇಖಕರು ಮಾಡಿದ್ದಾರೆಂಬ ವಿಚಾರವನ್ನು ಮಂಡಿಸಿದ ಟಿ.ಎಸ್. ಸತ್ಯನಾಥ್ ಗೌರೀಶ ಕಾಯ್ಕಿಣಿ ಅವರನ್ನು ತೌಲನಿಕತೆ ಮತ್ತು ಅಂತರ್ ಶಿಸ್ತಿನ ಚೌಕಟ್ಟಿನಲ್ಲಿ ಅರ್ಥಮಾಡಿಕೊಳ್ಳಲು ಸಾಧ್ಯವಿದೆ ಎಂದು ತಿಳಿಸಿದರು.


ಪ್ರೊ.ಟಿ.ಎಸ್. ಸತ್ಯನಾಥ್

“ಗೌರೀಶ ಕಾಯ್ಕಿಣಿ ಮತ್ತು ಆಧುನಿಕತೆಯ ಪ್ರಶ್ನೆ” ಕುರಿತು ಪ್ರಬಂಧ ಮಂಡಿಸಿದ ಬೆಳಗಾಂನ ಕಿತ್ತೂರು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಭಾಷಾ ವಿಭಾಗದ ಮುಖ್ಯಸ್ಥರಾದ ಎಂ.ಜಿ. ಹೆಗಡೆ ಗೌರೀಶರನ್ನು ತುಂಬಾ ಹತ್ತಿರದಿಂದ ಬಲ್ಲವರು. ತಮ್ಮ ಮನೆಯ ಅಂಗಳದಲ್ಲಿ ಪಶ್ಚಿಮದ ಕಡಲತಡಿಯಿಂದ ಬೀಸುವ ಗಾಳಿಗಡ್ಡವಾಗಿ ತೆಂಗಿನ ಮಡಲುಗಳಿಂದ ಕಟ್ಟಿದ ತಟ್ಟಿಗೆ ಎದುರಾಗಿ 'ಗಾಳಿಚಿಟ್ಟೆ' ಎಂಬ ಆಯಕಟ್ಟಿನ ಸ್ಥಳ ಗೌರೀಶ ಅವರು ಖಾಯಂ ಆಗಿ ಕೂರುವ ಜಾಗ. ಯಾವತ್ತೂ ಖಾಲಿ ಕೂತವರಲ್ಲ. ಯಾವಾಗಲೂ ಓದುತ್ತಲೋ. ಬರೆಯುತ್ತಲೋ ಇರುತ್ತಿದ್ದರೆಂದು ಗೌರೀಶರನ್ನು ನೆನೆದ ಎಂ.ಜಿ. ಹೆಗಡೆ- ಪಾಶ್ಚಾತ್ಯ ಪ್ರತಿಭೆಗಳು ಅವರ ಆಸಕ್ತಿಯ ಕೇಂದ್ರವಾಗಿತ್ತಲ್ಲದೇ ಉನ್ನತ ವ್ಯಾಸಂಗದ ಹಸಿವು ಗೌರೀಶರನ್ನು ಸದಾ ಬಹುಮುಖಿ ಪ್ರಜ್ಞೆಯಲ್ಲಿ ತೆರೆದುಕೊಳ್ಳುವಂತೆ ಪ್ರೇರಣೆ ನೀಡಿತು. ಮನೋದಾಸ್ಯ ಅಳಿಯಬೇಕಾದರೆ ಅವುಗಳನ್ನು ಆಳವಾದ ತಿಳುವಳಿಕೆಯಿಂದ ನೋಡಬೇಕು ಎನ್ನುತ್ತಿದ್ದರು. ಕನ್ನಡದಲ್ಲಿ ಅವರ ಮೊಟ್ಟ ಮೊದಲು 'ಮಿಂಚುಬಳ್ಳಿ” ಮಾರ್ಕ್ಸ್‌ವಾದದ ಕುರಿತು ಬರೆದ ಪುಸ್ತಕ 1949ರಲ್ಲಿ ಬಿಡುಗಡೆಯಾಯಿತು. 'ಚಿಂದಿಗಳಿಂದ ಮಕ್ಕಳು ಕಟ್ಟಿದ ಚೆಂಡಿನಂತೆ' ವಿವಿಧ ಮೂಲಗಳ ವಿಚಾರಗಳನ್ನೆಲ್ಲ ಬೇಕಾದಂತೆ ಮಣಿಸಿಕೊಂಡು ಬಳಸಿಕೊಂಡು ತಮ್ಮದೇ ಆದ ವೈಚಾರಿಕ ಆಕೃತಿಯನ್ನು ನಿರ್ಮಿಸಿಕೊಂಡರು. ಆದರೆ ವಿಚಾರವಾದವನ್ನು ಯಾವತ್ತೂ ಇನ್ನೊಬ್ಬರ ಮೇಲೆ ಹೇರುತ್ತಿದ್ದಿಲ್ಲ ಎಂಬ ಮಾತನ್ನು ಹೇಳಿದ ಎಂ.ಜಿ. ಹೆಗಡೆ ಅವರು ತಾವು ಅವರೊಂದಿಗೆ ಕಳೆದ ಅನೇಕ ಆಪ್ತ ಘಟನೆಗಳನ್ನು ಮೆಲುಕು ಹಾಕಿದರು.


ಎಂ.ಜಿ. ಹೆಗಡೆ

ನಂತರ ಗೋಷ್ಠಿಯ ಅಧ್ಯಕ್ಷತೆ ವಹಿಸಿದ ಸಾಹಿತ್ಯ ಅಕಾಡೆಮಿ ಸದಸ್ಯ ವಿಷ್ಣು ನಾಯ್ಕ್ ಅವರು ಮಾತನಾಡುತ್ತ ನಲವತ್ತನೇ ದಶಕದಲ್ಲಿ ಮಾರ್ಕ್ಸ್‌ವಾದದ ಕುರಿತು ಬರೆದವರೆಂದರೆ ಗೌರೀಶ ಕಾಯ್ಕಿಣಿ ಒಬ್ಬರೇ. ಜಗ್ಗದೇ, ಬಗ್ಗದೇ, ಕುಗ್ಗದೇ, ಹಿಗ್ಗದೇ, ಹಿಂಜರಿಯದೇ ತನ್ನ ಮನಸ್ಸಿನ ಸ್ವಾತಂತ್ರ್ಯವನ್ನು ಬಿಟ್ಟು ಕೊಡದ, ಹೊರಗಿನ ಶಕ್ತಿಗಳು ನಿಗ್ರಹಿಸಲಾರದವನೇ ವಿಚಾರವಾದಿ. ಸಾಮಾಜಿಕ, ರಾಜಕೀಯ, ಧಾರ್ಮಿಕ, ಜಾತಿ-ಮತ, ಅವೈಜ್ಞಾನಿಕ ಆಚರಣೆಗಳ ವಿರೋಧವಾಗಿ ಮಾತನಾಡುವಾಗ ತುಂಬಾ ಎಚ್ಚರ ವಹಿಸಬೇಕಾಗುತ್ತದೆ. ಹೈಸ್ಕೂಲ್ ಮೇಷ್ಟ್ರಾಗಿದ್ದ ಗೌರೀಶರು ಗೋಕರ್ಣದಂತ ಊರಲ್ಲಿ ಎಲ್ಲರಿಗೂ ಬೇಕಾದವರಾಗಿದ್ದರು. ಮನೆ ಮನೆಯಲ್ಲೂ ಅವರ ಶಿಷ್ಯರಿದ್ದರು. ಮಗುವಿನಂತ ಮನಸ್ಸಿನ, ಲೋಕದ ರೀತಿಯರಿಯದ ಮುಗ್ಧ ಗೌರೀಶರನ್ನು ವ್ಯವಹಾರ ಜ್ಞಾನ, ವಿವೇಕದಿಂದ ನಡೆಸಿದವರು ಅವರ ಪ್ರಿಯಪತ್ನಿ ಶಾಂತಾಬಾಯಿ. ಯಾರನ್ನೂ ನೋಯಿಸದ, ಬೇಸರಪಡಿಸದ ಗೌರೀಶರು ಅಪರಿಚಿತರೊಂದಿಗೆ ಬೇಗ ಬೆರೆಯುತ್ತಿರಲಿಲ್ಲ. ಯಾರೇ ಬಂದು ಕೇಳಿದರೂ ಇಲ್ಲವೆನ್ನದೇ ಅವರ ಕೃತಿಗೆ ಮುನ್ನುಡಿ ಬರೆದುಕೊಡುತ್ತಿದ್ದರು. ತಾವು ಒಂದು ಮುನ್ನುಡಿ ಬರೆದುಕೊಟ್ಟು ಪ್ರೋತ್ಸಾಹಿಸಿದರೆ ಬರೆಯುವವಷ್ಟು ಕೆಲಕಾಲವಾದರೂ ಆ ವ್ಯಕ್ತಿ ನಿರುಪದ್ರವಿಯಾಗಿರುತ್ತಾನೆ ಎಂಬ ನಿಲುವು ಗೌರೀಶರದಾಗಿತ್ತು ಎಂದು ವಿಷ್ಣು ನಾಯ್ಕರು ತಾವು ಅವರೊಡನೆ ಕಳೆದ ಅನೇಕ ಸವಿನೆನಪುಗಳನ್ನು ನೆನೆಯುತ್ತ, ಘಟನೆಗಳನ್ನು ಹಂಚಿಕೊಂಡರು. ಕಾರ್ಯಕಾರಿ ಸಮಿತಿಯ ಸದಸ್ಯ, ಸಾಹಿತ್ಯಿಕ ಸಮಿತಿ ಸದಸ್ಯ ಪಿ.ಸಿ. ಶ್ರೀನಿವಾಸ್ ಗೋಷ್ಠಿಯನ್ನು ನಿರ್ವಹಿಸಿದರು.


ವಿಷ್ಣು ನಾಯ್ಕ್

***ಗೋಷ್ಠಿ 2 :*** ಎರಡನೇ ಗೋಷ್ಠಿಯನ್ನು ಪುಟಾಣಿ ಪ್ರೇರಣಾ ರಾವ್ ಬೇಂದ್ರೆ ಅವರ “ಪಾತರಗಿತ್ತಿ ಪಕ್ಕ, ನೋಡಿದ್ಯೇನ ಅಕ್ಕಾ” ಹಾಡಿನಿಂದ ಚಾಲನೆ ನೀಡಿದಳು. ಗೋಷ್ಠಿಯ ಅಧ್ಯಕ್ಷತೆಯನ್ನು ಪ್ರಧಾನಮಂತ್ರಿ ಕಾರ್ಯಾಲಯದ ಸಹ ಕಾರ್ಯದರ್ಶಿ ಹಾಗೂ ಕವಿ ಎಲ್.ಕೆ. ಅತೀಕ್ ಅವರು ವಹಿಸಿದ್ದರು. “ಕಾಯ್ಕಿಣಿ ಅವರ ವೈಚಾರಿಕ ಬರಹಗಳು” ಕುರಿತು ಡಾ. ಪುರುಷೋತ್ತಮ ಬಿಳಿಮಲೆ ತಮ್ಮ ಪ್ರಬಂಧ ಮಂಡಿಸಿದರು. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಚಿಂತನಾಕ್ರಮವನ್ನು ರೂಪಿಸಿಕೊಂಡು ಬಂದವರು, ಸೃಜನಶೀಲ ಬರಹಗಾರರು. ವೈಚಾರಿಕ ಸಾಹಿತ್ಯ ಚರಿತ್ರೆಯ ಅನುಪಸ್ಥಿತಿಯಲ್ಲಿ ವಿಚಾರವಾದದ ಕುರಿತು ಅತ್ಯಂತ ನಿಷ್ಠೆಯಿಂದ ಬರೆದ ಗೌರೀಶರನ್ನು ಯಾವ ನೆಲೆಯಲ್ಲಿ ಇರಿಸಬೇಕು ಎಂಬುದರ ಕುರಿತು ಇನ್ನೂ ಖಚಿತತೆಯಿಲ್ಲ. ಅವರ ವಿಚಾರವಾದದ ಬಗ್ಗೆ ಅಧ್ಯಯನ, ವಿಮರ್ಶೆಯಾಗಬೇಕಾಗಿದೆ ಎಂದು ಅಭಿಪ್ರಾಯಪಟ್ಟರು. ಗೌರೀಶರ ವೈಚಾರಿಕತೆಯ ಆಳದಲ್ಲಿ-ವಿಚಾರ, ತರ್ಕ, ವಿಚಿಕಿತ್ಸೆ-ಈ ಮೂರು ಧಾರೆಗಳು ತೌಲನಿಕ ಪ್ರಜ್ಞೆಗಳಾಗಿವೆ ಎಂದ ಅವರು ಗೌರೀಶರ ವೈಚಾರಿಕತೆಯ ಪ್ರಸ್ತುತತೆಯ ಬಗ್ಗೆ ಮಾತನಾಡಿದರು.


ಡಾ. ಪುರುಷೋತ್ತಮ ಬಿಳಿಮಲೆ

ನಂತರ ಮಾತನಾಡಿದ ಜಯಂತ್ ಕಾಯ್ಕಿಣಿ ಅವರು ತಮ್ಮ ತಂದೆ ಗೌರೀಶ ಕಾಯ್ಕಿಣಿ ಅವರ ವ್ಯಕ್ತಿತ್ವದ ಕುರಿತು ತಮ್ಮ ನೆನಪಿನ ಬುತ್ತಿಯನ್ನು ಬಿಚ್ಚಿ ಹಂಚಿಕೊಂಡರು. ಮನೆಯವರು ಸಿಟ್ಟುಮಾಡಿದರೂ ಕೇಳದೆ ಎಲ್ಲರಿಗೂ ಮುನ್ನುಡಿ ಬರೆದು ಕೊಡ್ತಾ ಇದ್ದರು. ಹದಿನೆಂಟು ವರ್ಷಗಳ ಕಾಲ ಅಡಿಗರ 'ಚೆಂಡೆ-ಮದ್ದಳೆ', 'ಜನಸೇವಕ' ಪತ್ರಿಕೆಯಲ್ಲಿ ನಾಲ್ಕು ಅಂಕಣಗಳನ್ನು ಒಟ್ಟಿಗೆ ಬರೀತಾ ಇದ್ದರು. ಎಂದೂ ಹೊಸ ಕಾಗದದಲ್ಲಿ ಬರೆಯುವ ಪ್ರವೃತ್ತಿ ಇರದ ಅವರು ಕ್ಯಾಲೆಂಡರಿನ ಪುಟಗಳನ್ನು ಅವರಿವರಿಂದ ಸಂಗ್ರಹಿಸಿಟ್ಟುಕೊಂಡು ಅದರಲ್ಲಿ ಬರೆದ ವಿಷಯವನ್ನು ಹುಬ್ಬಳ್ಳಿ, ಧಾರವಾಡ ಊರಿಗೆ ಹೋಗುವ ಡ್ರೈವರ್ ಕೈಗೆ ಕೊಟ್ಟು ಕಳಿಸ್ತಿದ್ದರು. ಅವರ ಮೋಡಿ ಅಕ್ಷರದ ಕೈ ಬರಹವನ್ನು ಓದಲು ಕೆಲವೇ ಕೆಲವರಿಂದ ಸಾಧ್ಯವಿತ್ತು. ಆ ಮೇಲೆ ಯಾರಾದರೂ ಕೇಳಿದರೆ, ಅದನ್ನ ಓದಲು ಶ್ಯಾಮ ಹುದ್ದಾರ, ವಿಷ್ಣು ನಾಯ್ಕ ಅವರನ್ನೋ ಕೇಳಿ ಎಂದು ಅನ್ನುತ್ತಿದ್ದರಂತೆ. ಅವರು ಬರೆದುದು ಪತ್ರಿಕೆಯಲ್ಲಿ ಬಂದಾಗ ಮನೆಯವರಿಗೇ ಓದಲು ಸಿಗುತ್ತಿರಲಿಲ್ಲ. ಬೇರೆಯವರ ಮನೆಯಲ್ಲಿ 'ವಿಶೇಷಾಂಕ'ಗಳು ಬಂದಿವೆಯೇ? ನೋಡು ಎಂದು ಶಾಂತಾಬಾಯಿ ಜಯಂತನನ್ನು ಕಳಿಸುತ್ತಿದ್ದರಂತೆ. ಆಕೆಗೆ ಸಿಟ್ಟು ಬರುತ್ತಿತ್ತು. ಮನೆಯಲ್ಲಿ ಒಡವೆ-ಆಭೂಷಣಕ್ಕೆ ಆಗದ ಜಗಳ-ರಾದ್ಧಾಂತ ಗೌರೀಶರ ಪ್ರಕಟಿತ ಬರಹಗಳು ಮನೆಯವರಿಗೆ ಓದಲು ಸಿಗದುದಕ್ಕೆ ಆಗುತ್ತಿತ್ತಂತೆ. ಗೌರೀಶರಿಗೆ ವಿಷ್ಣು ನಾಯ್ಕ್ ಅವರ ಬಗ್ಗೆ ವಿಶೇಷ ಮಮತೆ ಇತ್ತು. ಅವರಿಗೆ ಸಿನೆಮಾ ಹುಚ್ಚು ಬಹಳ. ಸಂಗೀತವೂ ಅಷ್ಟೆ. ಸದಾ ಗುಣಗುಣಿಸುತ್ತಿದ್ದರು ಎಂದು ನೆನೆದ ಜಯಂತ ತಮ್ಮ ತಂದೆಯ ಹಾಸ್ಯ ಪ್ರಜ್ಞೆಯ ಘಟನೆಗಳನ್ನು ತಿಳಿಸುತ್ತಾ ಗೌರೀಶರ ಆಪ್ತ ವ್ಯಕ್ತಿತ್ವದ ಚಿತ್ರಣ ನೀಡಿದರು.


ಜಯಂತ್ ಕಾಯ್ಕಿಣಿ

ನಂತರ ಗೋಷ್ಠಿಯ ಅಧ್ಯಕ್ಷತೆ ವಹಿಸಿದ ಶ್ರೀ ಎಲ್.ಕೆ. ಅತೀಕ್ ಅವರು ತಾವು ಅಂಕೋಲೆಯ ತಹಸೀಲ್ದಾರರಾಗಿದ್ದಾಗ 'ಕೋಮು ಸೌಹಾರ್ದ ಆಚರಣೆ' ಸಂದರ್ಭದಲ್ಲಿ ಗೌರೀಶ ಕಾಯ್ಕಿಣಿ ಅವರನ್ನು ಭೆಟ್ಟಿಯಾಗುವ ಸುಯೋಗ ದೊರೆತುದ್ದನ್ನು ಮನದುಂಬಿ ನೆನೆದರು. ಆಗ ವಿಷ್ಣು ನಾಯ್ಕರೇ ಬರೆದು ಆಡಿಸಿದ ಬೀದಿ ನಾಟಕ 'ಒಂದು ಹನಿರಕ್ತ'ದ ಪ್ರದರ್ಶನ ಅಂದಿನ ತಮ್ಮ ಅಂಕೋಲೆಯ ನಂಟೇ ಇಂದು ಈ ವಿಚಾರ ಸಂಕಿರಣಕ್ಕೆ ತಮ್ಮನ್ನು ಕರೆತಂದಿತು ಎಂದು ಹೇಳಿದ ಅತೀಕ್ ಅವರು ಉರ್ದು ಕವಿ ಫೈಜ್ ಅಹಮ್ಮದ್ ಫೈಜ್ ಕೂಡಾ ಮಾರ್ಕ್ಸ್‌ವಾದಿಯಾಗಿದ್ದರು ಎಂಬ ವಿಚಾರವನ್ನು ಉಲ್ಲೇಖಿಸಿದರು.


ಎಲ್.ಕೆ. ಅತೀಕ್

## ಸಂವಾದ

ಭೋಜನ ವಿರಾಮದ ನಂತರ ಎಲ್ಲ ವಿದ್ವಾಂಸರೊಡನೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಗೌರೀಶರ ಕೃತಿ ಮತ್ತು ವ್ಯಕ್ತಿತ್ವದ ಕುರಿತು ಪ್ರಶ್ನೋತ್ತರ–ಸಂವಾದದಲ್ಲಿ ಸೃಜನ ಕಾಯ್ಕಿಣಿ ತಾನು ಬೇಸಿಗೆ ರಜೆಗೆ ಮುಂಬೈಯಿಂದ ಗೋಕರ್ಣಕ್ಕೆ ತಪ್ಪದೇ ಹೋಗುತ್ತಿದ್ದುದು, ತಾತನೊಂದಿಗೆ ಕಳೆದ ದಿನಗಳು, ಅವರು ಹೇಳುತ್ತಿದ್ದ ಕತೆ, ಸದಾ ಒಳ್ಳೆಯ ಪುಸ್ತಕಗಳನ್ನು ಓದಲು ಪ್ರೇರೇಪಿಸುತ್ತಿದ್ದ ರೀತಿ, ಕೊನೆ ದಿನಗಳಲ್ಲಿ ಅವರೊಂದಿಗೆ ಕಳೆದ ಆಪ್ತ ದಿನಗಳನ್ನು ಎಲ್ಲರೊಂದಿಗೆ ಹಂಚಿಕೊಂಡಳು. ಜಯಂತ ಕಾಯ್ಕಿಣಿ ಮತ್ತು ವಿಷ್ಣು ನಾಯ್ಕ್ ಅವರು ಗೌರೀಶರೊಂದಿಗಿನ ತಮ್ಮ ನಂಟು, ಬಾಳಿ ಬದುಕಿದ ಹಿರಿಮೆ, ಒಡನಾಟ, ನೋವು–ನಲಿವು, ಅವರ ಹಾಸ್ಯ ಪ್ರಜ್ಞೆ, ಅಂತಃಕರಣ, ಮಾನವೀಯತೆ, ಅಕ್ಕರೆ ಸೂಸುವ ತುಂಬು ಪ್ರೀತಿ, ಸರಳ ಸಜ್ಜನಿಕೆಯ ಚೇತನವನ್ನು ಅಪ್ಯಾಯತೆಯಿಂದ ನೆನೆದರು.

## ಸಮಾರೋಪ

ದೆಹಲಿಯ ಮಾಗಿಯ ಛಳಿಗೆ ಕಾಫಿಯ ಸಾಥ್ ಹಿತವಾಗಿತ್ತು. ಕಾಫಿ ವಿರಾಮದ ನಂತರ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಮಾಜಿ ಪ್ರಧಾನ ವಾರ್ತಾಧಿಕಾರಿಗಳಾದ ಐ.ರಾಮಮೋಹನ ರಾವ್ ಅವರು ವಹಿಸಿದ್ದರು. ಸಮಾರೋಪದ ಸಂದರ್ಭದಲ್ಲಿ ಜ್ಞಾನಪೀಠ ಪುರಸ್ಕೃತ, ಡಾ.ಚಂದ್ರಶೇಖರ ಕಂಬಾರ ಮಾತನಾಡುತ್ತ “ಆಗಿನ ಕಾಲದ ಬೌದ್ಧಿಕ ಕೇಂದ್ರ ಕವಲಾಗಿ ಹಂಚಿ ಹೋಗಿತ್ತು. ಹಳೆಯದನ್ನು ಬಿಡದೆ ಹೊಸದನ್ನು ತರಬೇಕು ಎನ್ನುವ ಸಮನ್ವಯವಾದಿಗಳಾಗಿದ್ದ ಮಾಸ್ತಿ, ಆಲೂರು, ಡಿ.ವಿ.ಜಿ. ಅಂಥ ಚಿಂತಕರದು ಒಂದು ವರ್ಗವಾದರೆ ಹಳೆಯದನ್ನು ಹೂತು ಹೊಸದನ್ನು ನಿಲ್ಲಿಸಬೇಕೆನ್ನುವ ಪುರೋಗಾಮಿಗಳಾಗಿದ್ದ ಕಾರಂತ, ಶ್ರೀರಂಗ ಮತ್ತು ಕಾಯ್ಕಿಣಿ ಅವರದು ಎರಡನೇ ವರ್ಗ. ಗೌರೀಶ ಕಾಯ್ಕಿಣಿಯ ಸಮಕಾಲೀನರು ಅಷ್ಟೇ ಪ್ರಬುದ್ಧ ಹಾಗೂ ತಾತ್ವಿಕವಾಗಿ ನಮ್ಮ ಕಾಲದ ಅಂದಿನ ಸಮಸ್ಯೆಗಳನ್ನು ಯೋಚನೆಮಾಡುತ್ತಿದ್ದರು. ಆಧುನಿಕತೆಯ ಪ್ರಖರವಾದ ಪ್ರಭಾವವೋ ಏನೋ ನಾವು ಧರ್ಮದ ಬಗ್ಗೆ ಆಳವಾಗಿ ಯೋಚಿಸಿಲ್ಲ. ಗೌರೀಶರನ್ನು ಓದಿದ ಮೇಲೆ ವಿಚಾರವಾದದ ಕುರಿತು ಮತ್ತಷ್ಟು ಜಿಜ್ಞಾಸೆ ಮೂಡತೊಡಗಿತು. ಆಗಿನ ಕಾಲದಲ್ಲಿ ಬ್ರಿಟಿಷರು ನಮಗೆ ಶಿಕ್ಷಣ ಕೊಟ್ಟಿದ್ದು ಒಂದು ಉದ್ದೇಶಕ್ಕಾಗಿ. ಅವರು ಕಟ್ಟಿಕೊಂಡ ಸಾಮ್ರಾಜ್ಯದ ಆಡಳಿತ ವ್ಯವಸ್ಥೆ ಸುಗಮವಾಗಿ ನಡೆಯಬೇಕಾದರೆ ಭಾರತೀಯರು ಶಿಕ್ಷಿತರಾಗಿರಬೇಕು, ಬ್ರಿಟಿಷ್ ಸರ್ಕಾರಕ್ಕೆ ಬದ್ಧರಾಗಿರಬೇಕು, ನಿಷ್ಠರಾಗಿರಬೇಕು ಎಂಬ ಉದ್ದೇಶಕ್ಕಾಗಿ ಸಾರ್ವಜನಿಕ ಶಿಕ್ಷಣ ಕೊಟ್ಟು ಉಪಕಾರ ಮಾಡಿದ್ದಾರೆ. ಗೌರೀಶರು ಶಿಕ್ಷಣದ ಮೂಲಭೂತ ರೋಗಗಳನ್ನು ಕಂಡುಹಿಡಿದಿದ್ದರು. ಸಂಪೂರ್ಣ ಆಧುನೀಕರಣ, ಔದ್ಯೋಗೀಕರಣ ಆದಾಗ ಮಾತ್ರವೇ ನಮ್ಮ ಸಮಾಜದಲ್ಲಿ ದಲಿತರು ಹಾಗೂ ಸ್ತ್ರೀಯರ ಉದ್ಧಾರ ಸಾಧ್ಯವೆಂದೂ, ಜಾತ್ಯಾತೀತ ಸಮಾಜವಾದಿ ಪ್ರಜಾಪ್ರಭುತ್ವ ರಾಜ್ಯ ವ್ಯವಸ್ಥೆ ಮಾತ್ರವೇ ಭಾರತಕ್ಕೆ ಸೂಕ್ತವೆಂದೂ ಅವರು ಪ್ರತಿಪಾದಿಸಿದರು. ಈ ಜಗತ್ತು ಸ್ವಯಂಭೂ, ಸ್ವಯಂಚಾಲಿತ ಮತ್ತು ಸ್ವತಃಸಿದ್ಧ, ಅದನ್ನು ತಿಳಿಯಲು ವಿಜ್ಞಾನ–ತರ್ಕ ಸಾಕು. ಎಂದು ಗೌರೀಶರ ವಿಚಾರಧಾರೆಗಳನ್ನು ಉಲ್ಲೇಖಿಸಿದ ಡಾ. ಚಂದ್ರಶೇಖರ್ ಕಂಬಾರರು ಭಾರತೀಯ ಸಂಸ್ಕೃತಿಯನ್ನು ಅನೇಕ ಕಂಬಗಳ ಮೇಲೆ ನಿಂತ ಒಂದು ಚಪ್ಪರ ಎಂದು ನುಡಿದರು. ಅಧ್ಯಕ್ಷತೆ ವಹಿಸಿದ್ದ ಐ. ರಾಮಮೋಹನ ರಾವ್ ಅವರು ಇಂತಹ ಮಹಾನ್ ಸಾಹಿತಿಯ ಕಾರ್ಯಕ್ರಮವನ್ನು ಆಯೋಜಿಸಿದ್ದಕ್ಕಾಗಿ ದೆಹಲಿ ಕರ್ನಾಟಕ ಸಂಘ ಹಾಗೂ ಸಾಹಿತ್ಯ ಅಕಾಡೆಮಿಯನ್ನು ಅಭಿನಂದಿಸಿದರು. ಸಾಹಿತ್ಯ ಅಕಾಡೆಮಿ ಸದಸ್ಯ ವಿಷ್ಣು ನಾಯ್ಕರು ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕ್ರಮವನ್ನು ಜಂಟಿಕಾರ್ಯದರ್ಶಿ ರೇಣುಕಾ ನಿಡಗುಂದಿ ನಿರ್ವಹಿಸಿದರು.



## ಜ್ಞಾನಪೀಠ ಪುರಸ್ಕೃತ ಕಂಬಾರರಿಗೆ ಅಭಿನಂದನೆ

ಇದೇ ಸಂದರ್ಭದಲ್ಲಿ ಕನ್ನಡಕ್ಕೆ ಎಂಟನೇ ಜ್ಞಾನಪೀಠವನ್ನು ತಂದುಕೊಟ್ಟು ಕನ್ನಡಿಗರ ಹೆಮ್ಮೆಯನ್ನು ಮೆರೆದ ಜನಪದ ಕವಿ, ನಾಟಕಕಾರ, ಡಾ. ಚಂದ್ರಶೇಖರ್ ಕಂಬಾರ ಅವರನ್ನು ದೆಹಲಿ ಕರ್ನಾಟಕ ಸಂಘ ಹಾಗೂ ಇತರ ಸಂಘ ಸಂಸ್ಥೆಗಳು ಆತ್ಮೀಯವಾಗಿ ಅಭಿನಂದಿಸಿ ಸನ್ಮಾನಿಸಿದವು. ಈ ಸನ್ಮಾನ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಕೇಂದ್ರ ಕಾರ್ಪೊರೇಟ್ ವ್ಯವಹಾರಗಳ ಸಚಿವರಾದ ಶ್ರೀ ವೀರಪ್ಪ ಮೊಯಿಲಿ ಅವರು ಕಂಬಾರರನ್ನು ಅಭಿನಂದಿಸುತ್ತಾ “ಇಂದು ಬಹಳಷ್ಟು ಜನ ಸಾಹಿತಿಗಳು ಸಮಾಜವನ್ನು ಒಡೆಯುವಂತಹ ಅನಗತ್ಯ ಬರವಣಿಗೆಗಳನ್ನು ಬರೆಯುತ್ತಿರುವಂತಹ ಕಳವಳದ ಸಂದರ್ಭದಲ್ಲಿ, ಚಂದ್ರಶೇಖರ ಕಂಬಾರ ಅವರು ಜನಪದ ಸ್ಪರ್ಶದ ಮೂಲಕ ತಮ್ಮ ಕೃತಿಗಳಲ್ಲಿ ದೇಸಿ ಸಂಸ್ಕೃತಿ ಹಾಗೂ ಮಾನವೀಯತೆಯನ್ನು ಅಪರೂಪವಾಗಿ ಚಿತ್ರಿಸುತ್ತಿರುವ ಅನನ್ಯ ಲೇಖಕರಾಗಿದ್ದಾರೆ” ಎಂದು ಶ್ಲಾಘಿಸಿದರು ಮತ್ತು ಗೌರೀಶರ ಜನ್ಮಶತ ಮಾನೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಕಂಬಾರರ ಅಭಿನಂದನೆ ಅರ್ಥಪೂರ್ಣ ಮತ್ತು ಕಾಕತಾಳೀಯ ಸುಯೋಗವೆಂದರು. ಕಂಬಾರರು ತಮ್ಮ ಕೃತಿಗಳಲ್ಲಿ ಸ್ಥಳೀಯ ಅನುಭವಗಳನ್ನು ಅತ್ಯಂತ ಹೃದಯಂಗಮಯವಾಗಿ ಅನಾವರಣ ಗೊಳಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಆಧುನಿಕತೆಯ ಭರಾಟೆಯ ನಡುವೆಯೂ ಜನಪದದ ಮೂಲಕ ಕಂಬಾರ ಅವರು ತಮ್ಮ ಕವಿತೆ, ನಾಟಕ ಹಾಗೂ ಕಾದಂಬರಿಗಳನ್ನು ವಿಶಿಷ್ಟವಾಗಿ ರಚಿಸುತ್ತಿರುವುದು ಅವರ ಲೇಖನಿಯ ಬಲಾಢ್ಯತೆಯ ಸಂಕೇತವಾಗಿದೆ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಕಂಬಾರ ಅವರು, ‘ನಾನು ನನ್ನ ಬರವಣಿಗೆಗಳ ಮೂಲಕ ಸಮಾಜಕ್ಕೆ ಒಳ್ಳೆಯ ಸಂದೇಶ ನೀಡಲು ಪ್ರಯತ್ನಿಸುತ್ತಿದ್ದೇನೆ. ಸಾಮಾನ್ಯ ಜನರನ್ನು ತಲುಪಲು ಜನಪದ ಮಾಧ್ಯಮ ಅದರಲ್ಲೂ ಸಾಹಿತ್ಯದ ದಾರಿ ಅತ್ಯುತ್ತಮವಾದದ್ದು’ ಎಂದು ಹೇಳಿದರು. ಆಧುನಿಕತೆಯ ಪ್ರವಾಹದಲ್ಲಿ ಜನಪದ ಕೊಚ್ಚಿಹೋಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ ಅವರು, ಜನಪದದ ಜೀವಂತಿಕೆಯನ್ನು ರಕ್ಷಿಸಲು ಪ್ರತಿಯೊಬ್ಬರೂ ಮುಂದಾಗಬೇಕು ಎಂದು ಆಶಿಸಿದರು. ಪ್ರೀತಿಯ ಜನನಾಯಕ ‘ಮೂರ್ತಿದೇವಿ’ ಪುರಸ್ಕೃತ ಮೊಯಿಲಿ ಅವರು ಕುವೆಂಪು ಅವರಂತೆ ರಾಮಾಯಣವನ್ನು ಮುರಿದುಕಟ್ಟಿದವರು. ಮತ್ತೀಗ ದ್ರೌಪದಿ ಶ್ರೀಮುಡಿಯೂ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಲಿದೆಯೆಂದು



ಸಮಾರೋಪ ಸಮಾರಂಭದಲ್ಲಿ ಗಣ್ಯರು



ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ವಿದ್ವಾಂಸರಿಗೆ ವೀರಪ್ಪ ಮೊಯಿಲಿ ಅವರಿಂದ ಅಭಿನಂದನೆ

ಹೇಳಿದ ಕಂಬಾರರು 'ಮಿಂಚಿನಹುಳು' ಹಾಡನ್ನು ಹಾಡಿ ಸನ್ಮಾನಿಸಿದ ಸರ್ವರಿಗೂ ಕೃತಜ್ಞತೆ ಸಲ್ಲಿಸಿದರು. ಇದೇ ವೇಳೆ ದಿವಂಗತ ಗೌರೀಶ ಕಾಯ್ಕಿಣಿ ಅವರ ಜನ್ಮಶತಮಾನೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ 2 ದಿನದ ವಿಚಾರ ಸಂಕಿರಣದಲ್ಲಿ ಗಣ್ಯ ಸಾಹಿತಿಗಳು ಚರ್ಚಿಸಿದ ಗೌರೀಶರ ವೈಚಾರಿಕ ಸಾಹಿತ್ಯದ ಕುರಿತು ಗಂಭೀರ ಅಧ್ಯಯನದ ಅಗತ್ಯವಿದೆಯೆಂಬ ಮಾತನ್ನು ಹೇಳಿದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಗೌರೀಶರ ಸಾಹಿತ್ಯ ಲೋಕದ ಒಂದು ಇಣುಕು ನೋಟವನ್ನು ಅದ್ಭುತವಾಗಿ ನೀಡಿ ಅವಿಸ್ಮರಣೀಯ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ನಾಡಿನ ಖ್ಯಾತ ವಿದ್ವಾಂಸರುಗಳಿಗೆ ಹಾಗೂ ಕಾರ್ಯಕ್ರಮವನ್ನು ಆಯೋಜಿಸುವಲ್ಲಿ ನೆರವಾದ ಸಾಹಿತ್ಯ ಅಕಾಡೆಮಿ, ಮತ್ತಿತರರಿಗೆ ಹೃದಯಪೂರ್ವಕ ಧನ್ಯವಾದಗಳನ್ನು ಸಲ್ಲಿಸಿದರು.

### ಶೌರ್ಯ ಪ್ರಶಸ್ತಿ ಪಡೆದ ಮಕ್ಕಳಿಗೆ ಅಭಿನಂದನೆ

ಅಭಿನಂದನಾ ಕಾರ್ಯಕ್ರಮದ ಸಂದರ್ಭದಲ್ಲಿ ದೇಶದ ಉನ್ನತ ಶೌರ್ಯ ಪ್ರಶಸ್ತಿ ಪಡೆದ ಹೆಮ್ಮೆಯ ಮಕ್ಕಳಾದ ಸಿಂಧುಶ್ರೀ ಮತ್ತು ಸಂದೇಶ್ ಹೆಗಡೆ ಇವರನ್ನು ಕೇಂದ್ರ ಸಚಿವ ಮೊಯಿಲಿ ಅವರು ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಪುಷ್ಪಗುಚ್ಛ, ಸ್ಮರಣಿಕೆ ಮತ್ತು ಕಾಣಿಕೆ ನೀಡಿ ಅಭಿನಂದಿಸಿದರು. ರಾಜೇಂದ್ರ ನಗರ ಕನ್ನಡ ಬಳಗದ ಉಪಾಧ್ಯಕ್ಷರಾದ ರವೀಂದ್ರನಾಥ್ ಮತ್ತು ಕಾರ್ಯದರ್ಶಿ ಗೋಪಾಲಕೃಷ್ಣ ಭಟ್ ಅವರು ಶೌರ್ಯ ಪ್ರಶಸ್ತಿ ಪುರಸ್ಕೃತ ಮಕ್ಕಳಿಗೆ ಕಾಣಿಕೆ ನೀಡಿ ಅಭಿನಂದಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ 'ಜನಪದರು'–ಸಾಂಸ್ಕೃತಿಕ ವೇದಿಕೆ, ಹೊಸಕೋಟೆ ತಂಡದವರು ಪ್ರಸ್ತುತಪಡಿಸಿದ 'ಸಾಂಬಶಿವ ಪ್ರಹಸನ' ನಾಟಕ ಪ್ರದರ್ಶನ ಪ್ರೇಕ್ಷಕರನ್ನು ನಗೆಗಡಲಿನಲ್ಲಿ ತೇಲುವಂತೆ ಮಾಡಿತು. ಹಾಸ್ಯಪ್ರಧಾನವಾದ ಈ ನಾಟಕವನ್ನು ಇಡೀ ಸಭಾಂಗಣದಲ್ಲಿ ಪುಟ್ಟ ಪುಟ್ಟ ಮಕ್ಕಳೂ ಕಿಲಕಿಲ ನಗುತ್ತ ಆನಂದಿಸಿದ್ದನ್ನು ಮರೆಯುವಂತಿಲ್ಲ. ನಾಟಕವನ್ನು ನಿರ್ದೇಶಿಸಿದವರು ರಾಮಕೃಷ್ಣ ಬೆಳತೂರ್, ರಚನೆ ಚಂದ್ರಶೇಖರ ಕಂಬಾರ. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು ಇಡೀ ತಂಡಕ್ಕೆ ಪುಷ್ಪಗುಚ್ಛ ನೀಡಿ ಪ್ರೋತ್ಸಾಹಿಸಿದರು.

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡದ ಸಾಮಾಜಿಕ ಕಳಕಳಿಯ ಚಿಂತಕರಾಗಿದ್ದ ದಿವಂಗತ ಗೌರೀಶ ಕಾಯ್ಕಿಣಿ ಜನ್ಮಶತಮಾನೋತ್ಸವ ವಿಚಾರ ಸಂಕಿರಣದಲ್ಲಿ ಗೌರೀಶರ ಬಗ್ಗೆ ಗೊತ್ತಿರದ ಅನೇಕ ಮಾನವೀಯ ಗುಣಗಳು ಗುಂಗು ಹಿಡಿಸಿದರೆ, ಕುರುಡು ನಂಬಿಕೆಯ ಲೋಕವನ್ನೇ ಅಲುಗಾಡಿಸಿದ ಕಾಯ್ಕಿಣಿತನವನ್ನು ಅರಿಯುವಂತಾಗಿದ್ದು ದೆಹಲಿ ಕನ್ನಡಿಗರೆಲ್ಲರೂ ಮರೆಯಲಾರದ ಕ್ಷಣಗಳು.

❑ ರೇಣುಕಾ ನಿಡಗುಂದಿ

# ಹೆಣ್ಣಿಗೆ ಹೆಣ್ಣೇ ಶತ್ರು–"ಅತ್ತೆಗೆ ಲತ್ತೆ"



ಕನ್ನಡ ಸಾಹಿತ್ಯದ ವೈಚಾರಿಕ ಸಾಹಿತ್ಯ ಪರಂಪರೆಯಲ್ಲಿ ಅವೈದಿಕ ದರ್ಶನ ಹಾಗೂ ವೈಚಾರಿಕ ಬರಹಗಾರರಲ್ಲಿ ಶ್ರೀ ಗೌರೀಶ ಕಾಯ್ಕಿಣಿ ಮುಖ್ಯರಾದವರು. ಅವರ ಜನ್ಮಶತಾಬ್ದಿ ಅಂಗವಾಗಿ ದೆಹಲಿ ಕರ್ನಾಟಕ ಸಂಘದ ಕಲಾವಿದ ಸದಸ್ಯರಿಂದ ಅವರ 70ರ ದಶಕದ ನಾಟಕ "ಅತ್ತೆಗೆ–ಲತ್ತೆ" ಜನವರಿ 26ರಂದು ಪ್ರದರ್ಶನಗೊಂಡಿತು. ಇದು ಅವರ ಅಪ್ರಕಟಿತ ಪ್ರಸಾರ ಮಾದರಿ ನಾಟಕ. ಸಾಂದರ್ಭಿಕವಾಗಿ ಅದನ್ನು ಹೆಕ್ಕಿ ತೆಗೆದು, ನಿರ್ದೇಶನ ಮಾಡಿದವರು ಶ್ರೀ ಶಿವಾನಂದ ಇಂಗಳೇಶ್ವರರು. ಭಾರತೀಯ ಸಮಾಜದಲ್ಲಿ ಅತ್ತೆ–ಸೊಸೆ ಸಂಬಂಧ 'ಆಜನ್ಮ ವೈರಿ ಸಂಬಂಧ" ಎಂಬಂತೆ ಬಿಂಬಿತವಾಗಿದೆ. ಕೆಲ ಅತ್ತೆಯರು ತಮ್ಮ "ಸೊಸೆ" ಎನ್ನುವ ಪ್ರಾಣಿ ತನ್ನ ಗಂಡನಿಗೆ ದಾಸಿ, ನಾದಿನಿಗೆ ಪಕ್ಷಪಾತಿ, ತಮಗೆ ನಮ್ರ ಸೇವಕಿ ಹಾಗೂ ಕುಟುಂಬದ ಆಜ್ಞಾಪಾಲಕಿ ಎಂದೆನಿಸಿ, ಅವಳು ಸ್ವತಂತ್ರವಾಗಿರಬೇಕು ಎಂಬ ಕುತಂತ್ರ ಮಾಡುವ ಕಾಟಗಿತ್ತಿ! ಎಂದೇ ಭಾವಿಸುತ್ತಾರೆ. ಸೊಸೆ ಸುಶಿಕ್ಷಿತ ಪ್ರಜ್ಞಾವಂತಳಾದರೂ ಮಾತು–ಮಾತಿಗೂ ಹೂಂಗುಟ್ಟುವ "ಹೌದಮ್ಮ"ಳಾಗಿರಬೇಕೆಂದು ಬಯಸುವ ಕಾವೇರಮ್ಮನಿಗೆ. ತನ್ನ ಮಗಳು ಕತ್ತೆಯ ವಯಸ್ಸಾದರೂ "ಬೇಬಿ"ಯೇ. ಅತ್ತೆ ಮನೆಯಲ್ಲಿ ಕಾಟಗಳು ಇಲ್ಲದಿದ್ದರೂ, ಗುಂಡು ಕಲ್ಲಿನಂತಿದ್ದರೂ "ಕಡ್ಡಿ" ತನ್ನ ಮಗಳು ಬೇರೆ ಮನೆ ಮಾಡಬೇಕು. ಆದರೆ ಸೊಸೆ ತನ್ನ ಜೊತೆ ಇರಬೇಕು. ಸೊಸೆ–ಮಗಳ ನಡುವೆ ಬೇಧ–ಭಾವ ತೋರದೆ, ಸೊಸೆಯೂ ಮಗಳಂತೆ ಎಂದು ಎಣಿಸುವ ಅತ್ತೆಯರು ಎಲ್ಲಿದ್ದಾರೆ? ಎಲ್ಲರೂ ಆಧುನಿಕ ಗಾಂಧಾರಿಯರೆ. ದೈನಂದಿನ ಬದುಕಿನ ನವಿರು ವ್ಯಂಗ್ಯ, ವಿಡಂಬನೆಯ ಹಾಸ್ಯ ಏಕಾಂಕ ಪ್ರೇಕ್ಷಕರಿಗೆ ಸಂತಸ ನೀಡಿತು. ರಂಗಭೂಮಿಯಲ್ಲಿ ನಟಿಯರ ಕೊರತೆ ತಿಳಿದ ವಿಷಯವೇ. ರಂಗಾಸಕ್ತ ಲಭ್ಯ ಗೃಹಿಣಿಯರನ್ನು ತನ್ನ ಇತಿ–ಮಿತಿಗಳಲ್ಲಿ ನಿರ್ದೇಶಕರು ನಟನೆಗೆ ಅಣಿಗೊಳಿಸಲು ಪ್ರಯತ್ನಿಸಿ ಯಶಸ್ವಿಯಾಗಿ ಪ್ರದರ್ಶನ ನೀಡಿದ ತಂಡಕ್ಕೆ ಮೆಚ್ಚುಗೆ ಹೇಳಲೇ ಬೇಕು. ಕಾವೇರಮ್ಮ (ಮಂಜುಳಾ ನಾಗರಾಜ) ಬೇಬಿ (ಜ್ಯೋತಿ ದೇವೇಂದ್ರಪ್ಪ) ಉತ್ತಮ ಅಭಿನಯದಿಂದ ಗಮನ ಸೆಳೆದರೆ. ನಿರ್ಮಲ (ಶೋಭಾನಾಗರಾಜ) ಹಾಗೂ (ಎಸ್.ಸಿ. ಹೇಮಲತಾ) ಪಾರ್ವತಮ್ಮನಾಗಿ ಪಾತ್ರಗಳಿಗೆ ಜೀವ ತುಂಬಿದರು. ಅಲ್ಲದೆ. ಇರುವ ಕೊಂಚ ಅವಕಾಶದಲ್ಲಿ, ತಿರುಕಿ (ಅನಿತಾ) ಅಂಚೆಯವ (ಗೋವಿಂದರಾಜ್) ಮಿಂಚಿದರು. ವೇಣು (ಗಿರಿಜಾ) ಪಕ್ವವಾಗಬೇಕು. ನಾಡಿನ ದೂರದ ಈ ಕಲಾವಿದರು ನಾಟಕದ ವಸ್ತುವಿನ ಕನ್ನಡ ಭಾಷಾ ಸೊಗಡಿನ ಜಾಡು ಹಿಡಿಯಬೇಕು. ಎಪ್ಪತ್ತರ ದಶಕದ ಈ ನಾಟಕ ಸೆಟ್ಸ್‌ನಲ್ಲಿ ಸೋಫಾ ಬಳಕೆ–ಬೇಬಿಯ ನೈಟಿ ಅಂದಿನ ಸಂಪ್ರದಾಯಸ್ಥರ ಮಧ್ಯಮ ವರ್ಗದವರಲ್ಲೂ ಇತ್ತೇ? ಗೌಣ ವಿಷಯ. ಸಂಗೀತ ಸಿನೆಮಾ ಟ್ಯೂನ್ ನಕಲು ಕಾಪಿಯಾಗಿ ಖುಷಿ ನೀಡಲಿಲ್ಲ. ನಾಟಕದ ಓಘಕ್ಕೆ ಪೂರಕವಾಗಬೇಕು.

ಕೇವಲ ವಾಚಕಮಯ ವಸ್ತುವನ್ನು ಭಾರತದ ನದಿ ಜೋಡಣೆಯ ಆಡಳಿತ ನಿರ್ದೇಶಕ ಶ್ರೀ ಇಂಗಳೇಶ್ವರರು, ಸಾರ್ವಕಾಲಿಕ ಸತ್ಯದ ವಸ್ತುಗಳನ್ನು ತಮ್ಮ ದೀರ್ಘ ರಂಗಾನುಭವ ಹಾಗೂ ವೃತ್ತಿ ಅನುಭವಗಳಿಂದ ಸಾತ್ವಿಕ–ಆಹಾರ್ಯಗಳ ಮಿಳಿತದೊಂದಿಗೆ ಸುಸಂಬಂಧ ವಸ್ತುವಾಗಿ ಜೋಡಿಸಿ, ಮೊದಲ ಬಾರಿಗೆ ರಂಗಕ್ಕೆ ಬಂದ ಕಲಾವಿದರಿಂದ ಒಂದು ಯಶಸ್ವಿ ನಾಟಕ ನೀಡಿ ಸಾರ್ಥಕ್ಯ ಮೆರೆದಿದ್ದಾರೆ. ಇದೊಂದು ಶ್ರೇಷ್ಠ ಪ್ರಯತ್ನವೆಂದೇ ಹೇಳಬಹುದು. ಮರುಪ್ರದರ್ಶನಗಳಲ್ಲಿ ಪಕ್ವತೆ ಬರಬಹುದು.

❑ ಜಗದೀಶ್ ಕೆಂಗನಾಳ್
ಕನ್ನಡ ಉಪನ್ಯಾಸಕರು, ಮಂಡ್ಯ


## –: ಆಮಂತ್ರಣ :–

ಕನ್ನಡ ಬಳಗ ರಾಜೇಂದ್ರನಗರದ ಸಾಮೂಹಿಕ ಸತ್ಯನಾರಾಯಣ ಪೂಜೆ ದಿನಾಂಕ 12.02.2012ರ ಭಾನುವಾರ ಹೊಸ ರಾಜೇಂದ್ರನಗರದ ಸಾರಸ್ವತ ಸಾಂಸ್ಕೃತಿಕ ಭವನದಲ್ಲಿ ಬೆಳಗ್ಗೆ 10 ಗಂಟೆಯಿಂದ ಪ್ರಾರಂಭ. ಮಧ್ಯಾಹ್ನ 12.30ಕ್ಕೆ ಮಂಗಳಾರತಿ ತದನಂತರ ಭೋಜನ.

ಭಕ್ತ ಜನರು ಬಂದು ಸಹಕರಿಸಬೇಕಾಗಿ ವಿನಂತಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9999335181 / 9810153162

# ಸಮಕಾಲೀನ ರಾಜಕಾರಣ ಮತ್ತು ಕಂಬಾರರ ಸಾಂಬಶಿವ


ಜನಪದರು ತಂಡದೊಂದಿಗೆ ಸಂಘದ ಪದಾಧಿಕಾರಿಗಳು

ಎರಡು ದಶಕಗಳ ಹಿಂದೆ ಪದವಿ ತರಗತಿಯಲ್ಲಿ ಡಾ. ಚಂದ್ರಶೇಖರ ಕಂಬಾರರ 'ಜೈಸಿದ್ದನಾಯ್ಕ' ನಾಟಕವನ್ನು ನಾನು ಪಠ್ಯವಾಗಿ ಓದಿದ್ದೆ. ಆ ನಾಟಕ ಭಾರತದ ಆಗಿನ ರಾಜಕಾರಣದ ಸ್ಥಿತಿಗತಿಯನ್ನು ವಿವರಿಸುವಂತೆ ನನಗೆ ಅನಿಸಿತ್ತು. ವ್ಯವಸ್ಥೆಯ ವಿರುದ್ಧ ಹೋರಾಡುವ ಸಿದ್ದನಾಯ್ಕ ಸ್ವತಃ ತನಗೇ ಅಧಿಕಾರ ಬಂದಾಗ ಹಿಂದಿನ ನಾಯಕನಂತೇ ವರ್ತಿಸುತ್ತಾನೆ ಎಂಬುದು ನನ್ನ ನೆನಪು. ಆ ದಿನಗಳಲ್ಲಿ ನಮ್ಮ ದೇಶದಲ್ಲಿ ಪ್ರಬಲವಾಗಿದ್ದ ಒಂದು ರಾಜಕೀಯ ಪಕ್ಷದ ವಂಶಾಡಳಿತದ ವಿರುದ್ಧ ಅಂದಿನ ಪ್ರಮುಖ ರಾಜಕಿಯ ನಾಯಕರು ದನಿ ಎತ್ತಿದ್ದರು. 'ಹೀಗೆ ದನಿ ಎತ್ತಿದ್ದ ನಾಯಕರು ಅಧಿಕಾರ ದೊರೆತ ಮೇಲೆ ಭಿನ್ನವಾಗಿ ಏನೂ ನಡೆದುಕೊಂಡಿಲ್ಲ' ಎಂಬುದಾಗಿ, ಕೆಲ ತಿಂಗಳ ಹಿಂದೆ ಇಹಲೋಕ ತ್ಯಜಿಸಿದ ನನ್ನ ಗುರುಗಳಾದ ಕೆ.ಜಿ. ನಾರಾಯಣ ನನ್ನಲ್ಲಿ ವಿಶ್ಲೇಷಿಸುತ್ತಿದ್ದರು. ದೆಹಲಿ ಕರ್ನಾಟಕ ಸಂಘದಲ್ಲಿ ಈಚೆಗೆ ನಾನು ನೋಡಿದ ಕಂಬಾರರ 'ಸಾಂಬಶಿವ ಪ್ರಹಸನ' ಮತ್ತೆ ಸಮಕಾಲೀನ ರಾಜಕಾರಣದ ಚಿತ್ರಣವೆಂಬಂತೆ ಕಂಡಿತು.

ಭಾರತದ ಅಂದಿನ ರಾಜಕೀಯ ಪರಿಸ್ಥಿತಿಗೆ ಹೋಲಿಸಿದರೆ ಇಂದು ವಂಶಾಡಳಿತ ನಿಧಾನವಾಗಿ ಮರೆಯಾಗುತ್ತಿದ್ದರೂ ಈಚೆಗೆ ಅಧಿಕಾರ ಮತ್ತು ಬಲವುಳ್ಳ ಜನರು ಕೊಂಚ ಸಜ್ಜನರೆನಿಸಕೊಂಡ ಮಂದಿಯನ್ನು ಆಯಕಟ್ಟಿನ ಜಾಗದಲ್ಲಿರಿಸಿ ಅಧಿಕಾರ ಚಲಾಯಿಸುವ ಹೊಸ ವಿದ್ಯಮಾನಗಳು ನಮ್ಮ ರಾಜಕೀಯ ವಲಯದಲ್ಲಿ ನಡೆಯುತ್ತಿದೆ. ಕಂಬಾರರ 'ಸಾಂಬಶಿವ ಪ್ರಹಸನ' ಈ ವಿದ್ಯಮಾನಗಳಿಗೆ ಕನ್ನಡಿ ಹಿಡಿದಂತಿದೆ.

ಮರು ಮದುವೆಯಾಗಲು ಹವಣಿಸುವ ಅಪ್ಪ ಸಾಂಬ ಮತ್ತು ಮೊದಲ ಬಾರಿಗೆ ಮದುವೆಯಾಗಲು ಬಯಸುವ ಆತನ ಮಗ ಶಿವನಿಗೆ ಪುರಾಣದ ಗಣಪತಿ ಬಂದು ಎರಡು ವರಗಳನ್ನು ನೀಡುತ್ತಾನೆ. ಮಗ ಕತ್ತೆಯನ್ನೂ ಮತ್ತು ಅಪ್ಪ ಮಾಂತ್ರಿಕ ಮುತ್ತನ್ನೂ ವರವಾಗಿ ಪಡೆಯುತ್ತಾರೆ. ಇತ್ತ ಆ ರಾಜ್ಯದ ವಿಲಾಸಿ ಹಾಗೂ ಭ್ರಷ್ಟ ರಾಜನ ಸ್ತ್ರೀ ಲೋಲುಪತೆ ರಾಜ್ಯವನ್ನು ಅಂಧಕಾರದಲ್ಲಿ ಮುಳುಗಿಸುತ್ತದೆ. ಇದನ್ನು ವಿರೋಧಿಸಿ ಅಧಿಕಾರ ತ್ಯಾಗ ಮಾಡುವ ಮಂತ್ರಿ ಇಂದಿನ ಬಂಡಾಯ ನಾಯಕರಂತೆ ವ್ಯವಸ್ಥೆಯಿಂದ ಹೊರಬರುತ್ತಾನೆ. ಮಗ ಶಿವನಿಗೆ ವರವಾಗಿ ಬಂದ ಕತ್ತೆಯಲ್ಲಿ ವಿಶೇಷ ಗುಣಗಳನ್ನು ಕಂಡ ರಾಜ ಆ ಕತ್ತೆಗೆ ಕಿರೀಟ ತೊಡಿಸಿ ಪ್ರಧಾನಮಂತ್ರಿಯಾಗಿ ಮಾಡಿ ಅಧಿಕಾರ ಚಲಾಯಿಸುತ್ತಾನೆ.

ಕಂಬಾರರು ಈ ನಾಟಕದ ಮುಖಾಂತರ ಮಂತ್ರಿ ಸ್ಥಾನ ಪಡೆಯುವ ಕತ್ತೆ ಹಾಗೂ ಪದೇ ಪದೇ ಹೆಣ್ಣಾಗಿ ಪರಿವರ್ತನೆಗೊಳ್ಳುವ ಸಾಂಬರ ಪಾತ್ರಗಳನ್ನು ತುಂಬಾ ಮಾರ್ಮಿಕವಾಗಿ ಹೆಣೆದಿದ್ದಾರೆ. ಈಶ್ವರನನ್ನು ತನ್ನೊಳಗೆ ಹೊಂದಿರುವ ಶಾಂಭವಿಯು ಶಕ್ತಿವಂತಳು ಎಂಬುದು ಇಲ್ಲಿ ಒಳ ಅರ್ಥ ಇರಬಹುದು. ಈ ಕಾರಣದಿಂದಲೇ ನಾಟಕದಲ್ಲಿನ ಸಾಂಬನ ಮೂಲಕ ರಾಜನ ಪತನವನ್ನು ವಿನೋದಮಯವಾಗಿ ಕಂಬಾರರು ಬಗೆಹರಿಸುತ್ತಾರೆ. ಕತ್ತೆಯೂ ಕೂಡಾ ಒಂದು ನಿರುಪದ್ರವಿ ಜೀವಿ. ಪ್ರಾಣಿವರ್ಗದಲ್ಲಿ ಯಾವಾಗಲೂ ಹೇಳಿದಂತೆ ಕೇಳುವ ಮತ್ತು ಪರಿಶ್ರಮದಿಂದ ದುಡಿಯುವ ಕತ್ತೆಯನ್ನು ರಾಜ ತನ್ನ ಅಧಿಕಾರ ಚಲಾಯಿಸಲು ಸಲಕರಣೆಯಾಗಿ ಬಳಸುತ್ತಾನೆ. ಕೊನೆಯಲ್ಲಿ ಸಾಂಬ ಶಿವರ ಮೂಲಕ ರಾಜನನ್ನೇ ಕತ್ತೆಯಾಗಿಸಿ ನಾಟಕವನ್ನು ಸುಖಾಂತ್ಯಗೊಳಿಸಲಾಗಿದೆ.

ಕಂಬಾರರ 'ಜೈ ಸಿದ್ದನಾಯ್ಕ' ನಾಟಕ ಅಂದಿನ ರಾಜಕೀಯ ಪರಿಸ್ಥಿತಿಯನ್ನು ಹೇಳುವ ಒಂದು ಬಗೆಯ ವಾಸ್ತವವಾದಿ ನಿಲುವು ಹೊಂದಿದೆ. ಆದರೆ 'ಸಾಂಬಶಿವ ಪ್ರಹಸನ'ದಲ್ಲಿ ರಾಜನ ದುರಾಡಳಿತ ಅಳಿದು ಸಮಕಾಲೀನ ರಾಜಕಾರಣದ ಬಗೆಗೆ ಆಶಾವಾದ ಮೂಡುತ್ತದೆ. ಪುರಾಣ ಮತ್ತು ಜಾನಪದವನ್ನು ಆಧುನಿಕ ಸಂದರ್ಭಕ್ಕೆ ಬಳಸಿಕೊಳ್ಳುವ ಕಂಬಾರರ ನಾಟಕದ ಭಾಷೆ ಮತ್ತು ಅದು ಸಂವಹನಗೊಳ್ಳುವ ಬಗೆ ಅಪ್ಪಟ ದೇಶಿಯತೆಯನ್ನು ಮೆರೆಯುತ್ತದೆ. ಇದರಿಂದಲೇ ದೆಹಲಿಯಂತಹ ಪ್ರದೇಶಗಳಲ್ಲಿ ಅದು ಸಂವಹನಗೊಳ್ಳುವಾಗ ಇಲ್ಲಿನ ನಗರವಾಸಿ ನೋಡುಗರಲ್ಲಿ ಕೊಂಚ ಮುಜುಗರ ತಂದರೆ ಅಚ್ಚರಿಯಿಲ್ಲ.

ಜನಪದ ಸಂಸ್ಕೃತಿಯನ್ನು ಎತ್ತಿ ಹಿಡಿಯಲು ಕ್ರಿಯಾಶೀಲರಾಗಿ ದುಡಿಯುತ್ತಿರುವ ಹೊಸಕೋಟೆಯ 'ಜನಪದರು' ತಂಡ ಜ್ಞಾನಪೀಠ ಪ್ರಶಸ್ತಿ ಪಡೆದ ಡಾ. ಚಂದ್ರಶೇಖರ ಕಂಬಾರರನ್ನು ಈ ರಂಗ ಪ್ರದರ್ಶನದ ಮೂಲಕ ಗೌರವಿಸಿದೆ. ತಂಡದ ಅಧ್ಯಕ್ಷ ಪಾಪಣ್ಣ, ನಿರ್ದೇಶಕ ರಾಮಕೃಷ್ಣ ಬೆಳ್ತೂರು, ಪ್ರತಿಭಾನ್ವಿತ ಕಲಾವಿದರಾದ ಸುರೇಶ ವರ್ತೂರು, ಸಿದ್ದೇಶ್, ಎಚ್.ಆರ್. ಮಮತ, ಶಿವಕುಮಾರ್ ಹಾಗೂ ಕೊನೆಘಳಿಗೆಯಲ್ಲಿ ಮಂತ್ರಿಯ ಪಾತ್ರವನ್ನು ನಿರ್ವಹಿಸಿ ಯಶಸ್ವಿಯಾದ ದೆಹಲಿ ಕರ್ನಾಟಕದ ಸಂಘದ ಸದಸ್ಯ ಟಿ.ಎಂ. ಮೈಲಾರಪ್ಪ ಮತ್ತು ತಂಡದ ಎಲ್ಲಾ ಸದಸ್ಯರೂ ರಂಗದ ಮೇಲೆ ಹೊಸ ಅನುಭವವನ್ನು ಸೃಷ್ಟಿಸಿಕೊಟ್ಟಿದ್ದಾರೆ.

❑ವೈ. ಅವನೀಂದ್ರನಾಥ ರಾವ್



Taekwondo Federation of Delhi (TFD) ಏರ್ಪಡಿಸಿದ್ದ 23rd Delhi State ITF Taekwondo Championship-2011 ಸ್ಪರ್ಧೆಯಲ್ಲಿ ಮಾಸ್ಟರ್ ಶ್ರೇಯಸ್ ಭಟ್ (26 ಕೆ.ಜಿ. ವಿಭಾಗ) ಮತ್ತು ಮಾಸ್ಟರ್ ತೇಜಸ್ ಭಟ್ (24 ಕೆ.ಜಿ. ವಿಭಾಗ)ದಲ್ಲಿ ಕ್ರಮವಾಗಿ ಸ್ವರ್ಣಪದಕ ಮತ್ತು ರಜತಪದಕಗಳನ್ನು ಗೆದ್ದಿರುತ್ತಾರೆ. ಪ್ರಸ್ತುತ ಇಂದಿರಾಪುರಂನ ಸೈಂಟ್‌ಥಾಮಸ್ ಸ್ಕೂಲ್‌ನಲ್ಲಿ 4ನೇ ಮತ್ತು 2ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಇವರು ಮೂಲತಃ ಪುತ್ತೂರಿನವರಾದ ಶ್ರೀ ವಿ.ಎನ್. ರಘುಪತಿ ಮತ್ತು ಶ್ರೀಮತಿ ಸುಜಾತಾ ದಂಪತಿಗಳ ಪುತ್ರರು. ಇವರು ಯುನಿವರ್ಸಲ್ ಟ್ಯಾಲೆಂಟ್ ಅಕಾಡೆಮಿಯಲ್ಲಿ (ಯು.ಟಿ.ಎ.) ತರಬೇತಿ ಪಡೆಯುತ್ತಿದ್ದಾರೆ.



ಇವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

# ಹೀಗಿದ್ದರು ನನ್ನ 'ಗೌರೀಶರು'

ನನಗೆ ಗೌರೀಶರ ಪರಿಚಯುವಾದದ್ದು 1943ರಲ್ಲಿ. ಆಗ ಮುಲ್ಕಿ ಪಾಸಾದೊಡನೆ ಒಂದೇ ವರ್ಷದಲ್ಲಿ ಇಂಗ್ಲಿಷ್ 1–2–3 ಹೀಗೆ ಒಟ್ಟಿಗೆ ಮೂರು ಕ್ಲಾಸುಗಳನ್ನು ಮುಗಿಸಲು ಬರುತ್ತಿತ್ತು. ಅಂಥ ಕ್ಲಾಸುಗಳನ್ನು ಇವರು ನಡೆಸುತ್ತಿದ್ದರು. ಮುಲ್ಕಿ ಪರೀಕ್ಷೆ ಮುಗಿಸಿದ ನಂತರ ಗೋಕರ್ಣದಲ್ಲಿ ಇವರ ಖಾಸಗೀ ವರ್ಗಕ್ಕೆ ಸೇರಿದೆ. ಅವರು ಬೆಳಿಗ್ಗೆ 7ಗಂಟೆಯಿಂದ 9 ಗಂಟೆ ತನಕ ಕ್ಲಾಸು ತೆಗೆದುಕೊಂಡು ನಂತರ ಬಂಕಿಕೊಡ್ಲಿನ ಹೈಸ್ಕೂಲಿಗೆ ಹೋಗುತ್ತಿದ್ದರು. ಶನಿವಾರ ಮಧ್ಯಾಹ್ನ ಕ್ಲಾಸು ಇರುತ್ತಿತ್ತು. ನನಗೆ ಸಂಗೀತದಲ್ಲೂ ಆಸಕ್ತಿ ಇದ್ದುದರಿಂದ ನಮ್ಮ ತಂದೆಯವರು ಇವರಿಗೆ ವೇಳೆ ಸಿಕ್ಕಾಗ ಸಂಗೀತ ಕೂಡಾ ಸ್ವಲ್ಪ ಕಲಿಸಿರಿ ಅಂತ ವಿನಂತಿಸಿದಂತೆ ಶನಿವಾರ ಸಂಜೆ ಮತ್ತು ರವಿವಾರ ನನಗೆ ಹಾರ್ಮೋನಿಯಂ ಬಾರಿಸಲು ಮತ್ತು ಭಾವಗೀತೆ ಕಲಿಸುತ್ತಿದ್ದರು. ಹಾಗೆ ಸಂಗೀತ ಕಲಿಸುತ್ತಿರುವಾಗ ಅವರ ಸಾಮೀಪ್ಯ ನನಗೆ ಹೆಚ್ಚು ಸಿಗತೊಡಗಿದಾಗ ಸ್ವಾಭಾವಿಕವಾಗಿ ನನ್ನೊಡನೆ ಅವರ ಸಲಿಗೆ ಸ್ವಲ್ಪ ಹೆಚ್ಚಾಯಿತು. ಅವರು ಬಹಳ ವಿನೋದ ಪ್ರಿಯರಾಗಿದ್ದರು. ನನ್ನನ್ನು ಬಹಳ ವಾತ್ಸಲ್ಯದಿಂದ ನೋಡುತ್ತಿದ್ದರು. ಆ ಸಲಿಗೆ ನನಗೆ ಗೊತ್ತಿಲ್ಲದೆ ಪ್ರೇಮದಲ್ಲಿ ಮಾರ್ಪಾಟಾಗಿದೆ ಅಂತ ತಿಳಿಯಲು ಹೆಚ್ಚು ಕಾಲ ಬೇಕಾಗಲಿಲ್ಲ. ಕ್ಲಾಸಿನಲ್ಲಿ ಜೋಕುಗಳ ಸುರಿಮಳೆ, ದಡ್ಡ ಹುಡುಗರಿಗಂತೂ ಸರೀ ಶಿಕ್ಷೆ. ನಾನು ಒಂದೆರಡು ಬಾರಿ ಬೈಸಿಕೊಂಡು ಅತ್ತಿದ್ದೂ ಉಂಟು. ಇಂಗ್ಲಿಷ್ ಕ್ಲಾಸಿಗಿಂತ ನನ್ನ ಸಂಗೀತ ಅಭ್ಯಾಸ ಹೆಚ್ಚು ಜೋರಿನದಾಯಿತು. ಅದೇ ಒಂದು ನನಗೆ ವರದಾನವಾಯಿತು. ನಾನು ರಜೆಯಲ್ಲೂ ಸಂಗೀತದ ನೆಪದಲ್ಲಿ ಅವರ ಹತ್ತಿರ ಹೋಗತೊಡಗಿದೆ. ಹೀಗಾಗಿ ಅವರ ಸಾಮೀಪ್ಯ ಹೆಚ್ಚಾಗತೊಡಗಿತು. ಸಲಿಗೆಯೂ ಹೆಚ್ಚಾಯಿತು. ದಿನಕ್ಕೊಮ್ಮೆ ಅವರು ಪ್ರೇಮಪತ್ರ ಬರೆದು ತಂದು ನನಗೆ ಕ್ಲಾಸು ಬಿಟ್ಟೊಡನೆ ಕೊಡುತ್ತಿದ್ದರು. ದಿನಕ್ಕೊಮ್ಮೆ ಪತ್ರವಾದರೂ ಅವು ಸ್ವಾರಸ್ಯಪೂರ್ಣವೂ ವಿನೋದಪೂರ್ಣವೂ, ಹಾಸ್ಯ ಪೂರ್ಣವೂ ಇರುತ್ತಿದ್ದವು. ಅವು ಮೂರು ನಾಲ್ಕು ಪುಟಗಳಷ್ಟು ಇರುತ್ತಿದ್ದವು.

ಈ ದೃಷ್ಟಿಯಿಂದ ಶಿಕ್ಷಣದ ಅರ್ಥ, ವ್ಯಾಪ್ತಿ ಬಹು ದೊಡ್ಡದು. ಆದರೆ ಹಾಗೆಂದು ನಾವು ಶಿಕ್ಷಕರು ತೆಪ್ಪಗೆ ಕುಳಿತಿರಲು ಸಾಧ್ಯವೇ? ಅದು ಸಾಧ್ಯವೇ? ಅಲ್ಲ ! ಖಂಡಿತವಾಗಿಯೂ ಅಲ್ಲ !! ವಿದ್ಯಾರ್ಥಿಗಳು ಕಲಿಯುವಂತೆ (ಕಲಿ–ಇಸು) ಮಾಡುವುದೇ ಶಿಕ್ಷಕನ ಅತಿ ಹೆಚ್ಚಿನ ಕೆಲಸವಾಗಿದೆ. ಅದಿಲ್ಲದಿದ್ದರೆ ನಮ್ಮ ಶಿಕ್ಷಣ ವಿಧಾನ ಸಂಘಟನೆ ಎಲ್ಲವೂ ಬರೆ ದುಂಡು, ಬರೇ ದಂಡ ಎನ್ನುತ್ತಾರೆ ಶ್ರೀಯುತ ಗೌರೀಶ ಕಾಯ್ಕಿಣಿಯವರು.

1953ರಲ್ಲಿ ವಿವಾಹ ಆಯಿತು. 1954ನೇ ಇಸ್ವಿಯಲ್ಲಿ ನಮಗೆ ಒಬ್ಬ ಮಗ ಹುಟ್ಟಿದ, ಆದರೆ ಜಗತ್ತನ್ನು ನೋಡಿ ನಲಿಯಲು ಅವನು ಬಹಳ ಕಾಲ ಉಳಿಯಲಿಲ್ಲ. 1955ರಲ್ಲಿ ಜಯಂತ ಹುಟ್ಟಿದ. ಅವನನ್ನು ಸಹ ಬಹಳ ಪ್ರಯಾಸಪಟ್ಟು ವಿಶೇಷ ಕಾಳಜಿಯಿಂದ ಬೆಳೆಸಬೇಕಾಯಿತು. ಜಯಂತ ಹುಟ್ಟಿದ ನಾಲ್ಕು ವರ್ಷದ ನಂತರ ಹುಡುಗಿ ಹುಟ್ಟಿದಳು. ಅವಳೂ ಹಿರಿಯ ಅಣ್ಣನ ದಾರಿ ಹಿಡಿದು ಹೋಗಿ ಬಿಟ್ಟಳು !

ನಮಗೆ ಆರ್ಥಿಕ ಅಡಚಣೆ ಸಾಕಷ್ಟು ಇದ್ರೂ ನನಗೆ ಶಿಕ್ಷಕ ವೃತ್ತಿಯನ್ನು ಬಿಡಲು ಹೇಳಿದರು. ಆದರೆ ನೌಕರಿಗೆ ಹೋದ ತಂದೆ ತಾಯಿಗಳ ಮಕ್ಕಳ ಬೆಳವಣಿಗೆ, ಅವರ ಮನಸ್ಸು ರೀತಿ ನೋಡಿದರೆ ನನ್ನ ಜಯಂತನ ಬಗ್ಗೆ ನಾನು ತ್ಯಾಗ ಮಾಡಿದ್ದು ಯೋಗ್ಯ ಅಂತ ಈಗಲೂ ನನಗೆ ತುಂಬಾ ಧನ್ಯತೆ ಅನಿಸುತ್ತದೆ.

ಇವರು ಕಲಿಯುವಾಗ ಕಷ್ಟದಲ್ಲಿ ಕಲಿತದ್ದರಿಂದ ಈಗಲೂ ಇದ್ದುದರಲ್ಲಿಯೇ ಬಡವರಿಗೆ ಪುಸ್ತಕ, ಫೀ ಅಂತ ಸಹಾಯ ಮಾಡುತ್ತಾ ಬಂದಿದ್ದಾರೆ. ಬಹಳ ಜನರಿಗೆ ಟ್ಯೂಶನ್ ಕೊಟ್ಟಿದ್ದಾರೆ. ಅವರು ಕಲಿತದ್ದು ಮೆಟ್ರಿಕ್ ಮಾತ್ರ. ಆದರೆ ಉನ್ನತ ಶಿಕ್ಷಣದ ವಿದ್ಯಾರ್ಥಿಗಳೂ ಅವರಿಂದ ಮಾರ್ಗದರ್ಶನ ಪಡೆಯುತ್ತಾರೆ. ಎಷ್ಟೇ ದಡ್ಡನಿರಲಿ ಪ್ರೀತಿಯಿಂದ ಕಲಿಸುತ್ತಾರೆ. ನನ್ನದು 1949ನೇ ಇಸವಿಯಲ್ಲಿ ಮೆಟ್ರಿಕ್ ಆದದ್ದು. ಆ ಸಮಯ ಇವರು ನನಗೆ ಅಭ್ಯಾಸದಲ್ಲಿ ತುಂಬಾ ನೆರವಾದರು. ಅವರಿಗೆ ಇದ್ದುದು ಎರಡೇ ಎರಡು ಚಟ. ಓದುವುದು ಮತ್ತೆ ಬರೆಯುವುದು. ಅವರ ದಿನಚರ್ಯ ಬೆಳಿಗ್ಗೆ 6ಗಂಟೆಗೆ ಪ್ರಾರಂಭವಾಗಿ ರಾತ್ರಿ 11 ಕೆಲವೊಮ್ಮೆ 12ಗಂಟೆಗೆ ಮುಗಿಯುತ್ತದೆ. ಅವರಿಗೆ ಎದ್ದಾಕ್ಷಣ ಬೆಡ್ ಟೀ ಬೇಕೇ ಬೇಕು. 7ಗಂಟೆಗೆ ಉಪಾಹಾರ. ಓದುವುದಕ್ಕೆ ಕೂತರೆ 9ಗಂಟೆಗೆ ಎದ್ದು ಸ್ನಾನ ಮುಗಿಸಿ ಮತ್ತೆ ಓದಲು ಶುರು. ಮಧ್ಯದಲ್ಲಿ ಯಾರಾದರೂ ಬಂದರೆ ಹರಟೆ. 10 ಗಂಟೆಗೆ ಮತ್ತೆ ಬರಿ ಚಹಾ. ನಂತರ ಬರೆಯಲು ಕೂಡ್ರುತ್ತಾರೆ. ಡಿಸ್ಟರ್ಬ್ ಆಗದೇ ಇದ್ದರೆ ಊಟಕ್ಕೆ ಕರೆಯುವ ತನಕ ಬರೆದೇ ಬರೆಯುತ್ತಾರೆ. ಬರೆದು ಅವರ ಕೈ ದಣಿಯುವುದಿಲ್ಲ! ಒಂದು ಕಣ್ಣಿನ ಅಪರೇಶನ್ ಆಗಿದೆ. ಮತ್ತೊಂದರದು ತಕ್ಷಣ ಆಗಬೇಕಾಗಿದೆ. ಆದರೂ ಕೈಯಲ್ಲಿ ರಾವುಗನ್ನಡಿ ಹಿಡಿದು ಒಂದು ಮಿನಿಟೂ ಸಹ ಬಿಡದೇ ಓದಿಯೇ ಓದುತ್ತಾರೆ. ಓದು ಅವರ ಕಣ್ಣು ದಣಿಸುವುದಿಲ್ಲ. ತುಂಬ ಜ್ವರ, ನೆಗಡಿ ಇದ್ದರೂ ಅವರು ಓದುತ್ತಲೇ ಇರಬೇಕು. ಮಧ್ಯಾಹ್ನ ಊಟ ಮುಗಿದ ನಂತರ 1 ತಾಸು ಮಾತ್ರ ವಿಶ್ರಾಂತಿ. ಮತ್ತೆ ಚಹಾ ತಕ್ಕೊಂಡು ಓದುವರು. ಅವರು ವಿಶ್ರಾಂತಿ ತಕ್ಕೊಳ್ಳುವಾಗ ಯಾರಾದರೂ ಬಂದರೆ ನಾನು ಎಬ್ಬಿಸದಿದ್ದರೆ ಸಿಟ್ಟಿಗೇಳ್ತಾರೆ. ಸಂಜೆ 6ಕ್ಕೆ ದೂರ ತಿರುಗಾಟ. ಆಗ ಅವರು ಹೆಚ್ಚಾಗಿ ಸಮುದ್ರ ದಂಡೆಗುಂಟ ಹೋಗಿ ಬರುತ್ತಾರೆ. ಹೆಚ್ಚಾಗಿ ರಾತ್ರಿ ಬರೆಯುವುದು ಅಪರೂಪ. ಆದರೆ ಮೂಡ್ ಬಂದರೆ ಮಧ್ಯರಾತ್ರಿ ತನಕವೂ ಬರೆಯುತ್ತಾರೆ. ಅವರಿಗೆ ಮತ್ತೊಂದು ವಿಚಿತ್ರ ಚಟ ಉಂಟು. ವೇಗದ ಬೌಲರ್‌ರಂತೆ ವೇಗವಾಗಿ ಓದುವುದು. ಒಂದೇ ಸಲ ನಾಲ್ಕು ಪುಸ್ತಕಗಳನ್ನು ಓದಲು ಪ್ರಾರಂಭಿಸುತ್ತಾರೆ.

ನಮ್ಮಲ್ಲಿ ಪುಸ್ತಕಗಳ ರಾಶಿಯೇ ಇರುತ್ತವೆ. ಒಳಗಿನ ಕೋಣೆಯಲ್ಲಿ ಕೂತಾಗ ಒಂದು, ಜಗಲಿಯಲ್ಲಿ ಕೂತಾಗ ಒಂದು, ಊಟದ ಮೇಜಿನ ಮೇಲೆ ಒಂದು ಹೀಗೆ ಅವರು ಎಲ್ಲೇ ಕುಳಿತುಕೊಳ್ಳಲಿ ಅಲ್ಲಿ ಅವರು ಆ ಪುಸ್ತಕ ಓದುತ್ತಾರೆ. ಅವರಿಗೆ ಕನ್‌ಫ್ಯೂಸ್ ಆಗುವುದಿಲ್ಲವಂತೆ. ಅಂತೂ ಒಮ್ಮೆಲೆ ನಾಲ್ಕು ಪುಸ್ತಕ ಓದಿ ಮುಗಿಸಿ ಬಿಡುತ್ತಾರೆ. ಅವರಿಗೆ ನೆನಪಿನ ಶಕ್ತಿ ಅಪಾರ. ಅವರು ಕಲಿಯುವಾಗಿನ ಇಂಗ್ಲಿಷ್ ಕವಿತೆ ಈಗಲೂ ನೆನಪಿಸುತ್ತಾರೆ. ಅವರು ಬಂಕಿಕೊಡ್ಲ ಶಾಲೆಗೆ ಹೋಗುವಾಗ ಬರುವಾಗ ಪುಸ್ತಕ ಓದುತ್ತಾ ಹೋಗಿ ಬರುತ್ತಿದ್ದರಂತೆ. ಅವರ ಮಾತಿನಲ್ಲಿ ಹೇಳುವುದಾದರೆ ಆ ರಸ್ತೆಗುಂಟ ತಾನು ನೂರಾರು ಪುಸ್ತಕ ಓದಿದ್ದೇನೆ ಅನ್ನುತ್ತಾರೆ. ಅವರಿಗೆ ಇದ್ದಷ್ಟು ಪುಸ್ತಕವೂ ಸಾಲದು. ಸುತ್ತಮುತ್ತಲಿನ ಕಾಲೇಜಿನಿಂದ, ದೂರದ ಗೆಳೆಯರಿಂದ ಪುಸ್ತಕ ತರಿಸಿ ಓದುತ್ತಾರೆ. ಓದಿದ ಪುಸ್ತಕ ಅವರವರಿಗೆ ತಲುಪಿಸುವ ಜವಾಬ್ದಾರಿ ನನ್ನದು. ಪೇಪರೂ ಅಷ್ಟೇ. ಅವರಿಗೆ ಎಲ್ಲಾ ಪೇಪರುಗಳೂ ಬೇಕು. ಹೀಗಾಗಿ ನಮ್ಮಲ್ಲಿ ಬಹುತೇಕೆಲ್ಲ ಪೇಪರುಗಳು ಬರುತ್ತವೆ. ಕೆಲವೊಂದು ಲೈಬ್ರೆರಿಯಿಂದ ಇತರ ಗೆಳೆಯರಿಂದಲೂ ತರಿಸಿ ಓದುತ್ತಾರೆ. ಊರಲ್ಲಿ ಒಂದೇ ಮನೆಗೆ ಬರುವ ಮರಾಠಿ ಪತ್ರಿಕೆ ಸಹ ಅವರಿಂದ ತರಿಸಿ ಓದುತ್ತಾರೆ. ಅವರಿಗೆ ಪೇಪರುಗಳೆಲ್ಲ ಡಿಟೇಲಾಗಿ ಓದುವ ತಾಳ್ಮೆ ಕಡಿಮೆ, ಹೆಡ್‌ಲೈನ್ಸ್ ಅಷ್ಟೇ ಓದುವರು. ಕೆಲವೊಂದು ಸ್ವಾರಸ್ಯ ವಿಷಯವನ್ನು ನಾನೇ ಎತ್ತಿ ಹೇಳಿದರೆ ಅವರಿಗೆ ಆಶ್ಚರ್ಯ ! "ಅರೇ ನಾನು ಓದಿಲ್ಲವಲ್ಲ" ಅಂದು ಬಿಡುತ್ತಾರೆ. ಅವರ ಸಾನಿಧ್ಯದಲ್ಲಿ ನನಗೂ ಓದುವ ಚಟ ಅಂಟಿಕೊಂಡು ಬಂದಿದೆ. ಅವರದು ಕಥೆ–ಕಾದಂಬರಿಗಳಲ್ಲಿ ಮಾತ್ರ ಸ್ವಲ್ಪ ಹಿಂದೇಟು ! ರಾಜಕೀಯ ವಿದ್ಯಮಾನಗಳ ಬಗ್ಗೆ ಬರೆಯುವುದರಲ್ಲಿ ಅವರದು ಎತ್ತಿದ ಕೈ. ಅವರಿಗೆ ಬೆಲ್ಲ ಎಂದೆಂದೂ ಸೇರದು. ಊಟದಲ್ಲಿ ಖಾರ ಹೆಚ್ಚು, ಬೆಲ್ಲ ಹಾಕಿದ ಅಡಿಗೆ ತಿನ್ನುವವರಲ್ಲ, ಬೇಳೆ ಸಾರು, ಒಂದು ಪಲ್ಯ–ಹಪ್ಪಳ ಇದ್ದರೆ ಅವರಿಗೆ ಅದೇ ಭರ್ಜರಿ ಊಟ, ಆದರೆ ಬಹಳ ಕುಡುಕರು ! ಚಹಾ ಅಂದರೆ ಮುಗಿಯಿತು. ಒಮ್ಮೆಲೆ ಮೂರು ಕಪ್ಪು ಕೊಟ್ಟರೂ ಹೂಂ, ಬೇಜಾರಿಲ್ಲ, ನಾನು ಇಲ್ಲದ ಸಮಯ ಯಾರಾದರೂ ಗೆಳೆಯರು ಅನ್ನುವುದುಂಟು, "ಶಾಂತಕ್ಕಾ ನಿಮಗಿಂತ ಮಾಸ್ತರರೇ ಚೆನ್ನಾಗಿ ಚಹಾ ಮಾಡುತ್ತಾರೆ" ಅಂತ.

ಇವರಿಗೆ ಅಸ್ತಿ–ಪಾಸ್ತಿ ಏನೂ ಇಲ್ಲ, ನಮ್ಮ ಸಂಪತ್ತೆಂದರೆ ಅಪಾರ ಅಭಿಮಾನಿ, ಜೀವಕ್ಕೆ ಜೀವ ಕೊಡುವ ಪ್ರೀತಿ ಪಾತ್ರ ಗೆಳೆಯರ ಸ್ತೋಮ ಮತ್ತು ಪುಸ್ತಕ ಭಂಡಾರ. ನಮ್ಮ ಮನೆಯಲ್ಲಿ ಎಲ್ಲೂ ಬೀಗವಿಲ್ಲ. ಮೊದಲು ಪರ್ಣಕುಟಿಯಂತಿದ್ದ ಮನೆ. ನಾನು ಲಗ್ನದ ನಂತರ ಸ್ವಲ್ಪ ಸ್ವಲ್ಪ ರಿಪೇರಿ ಮಾಡಿ ಈಗ ಮನೆಯ ಆಕಾರಕ್ಕೆ ತಂದಿದ್ದೇನೆ. ಮಧ್ಯದಲ್ಲಿ ನಮಗೆ ಆರ್ಥಿಕ ಮುಗ್ಗಟ್ಟು ವಿಪರೀತವಾಗಿತ್ತು. ಆದರೆ ಧೈರ್ಯಗೆಡದೆ ಹೇಗೇಗೋ ನಿಭಾಯಿಸಿಕೊಂಡು ಬಂದೆವು. ಒಂದು ದಿನವೂ ಅತಿಥಿಗಳು ಇಲ್ಲ ಅಂತ ಇಲ್ಲ. ಅದೇ ನನಗೆ ಈಗ ರೂಢಿಯಾಗಿ ಬಿಟ್ಟಿದೆ. ಯಾವುದಾದರೊಂದು ದಿನ ಯಾರೂ ಬರದಿದ್ದರೆ ತುಂಬಾ ಬೇಜಾರು ಅನ್ನಿಸಿ ಬಿಡುತ್ತದೆ.

ಇವರಿಗಂತೂ ಮನೆ ವ್ಯವಹಾರ ಏನೇನೂ ತಿಳಿಯದು. ಅವರ ಪಗಾರ ಎಷ್ಟಿತ್ತು? ಈಗ ಅವರ ಪೆನ್ಷನ್ ಎಷ್ಟು ಬರುತ್ತಿದೆ ಗೊತ್ತಿಲ್ಲ. ವ್ಯವಹಾರದಲ್ಲಿ ಅವರ ಬುದ್ಧಿ ಸೊನ್ನೆ!

ಉಡಿಗೆ ತೊಡಿಗೆಯಲ್ಲೂ ಅಷ್ಟೇ. ನಮ್ಮಿಬ್ಬರಿಗೂ ಚಿಕ್ಕಂದಿನಲ್ಲಿ ಬಡತನದಲ್ಲಿ ಬೆಳೆದ ಪರಿಣಾಮದಿಂದಲೋ ಏನೋ ಈಗ ಚೆನ್ನಾಗಿ ಉಡುವ ತೊಡುವ ಪರಿಸ್ಥಿತಿ ಬಂದಾಗ ಅದು ಬೇಡ ಅಂತಲೇ ಅನ್ನಿಸುತ್ತದೆ. ಇವರಂತೂ ಕೈಗೆ ಸಿಕ್ಕ ಬಟ್ಟೆ ಹಾಕಿ ಹೊರಟು ಬಿಡುವರು. "ಅದರ ಕೋಲರ್ ಹರಿದಿದೆ, ಪ್ಯಾಂಟ್‌ನ ಕಲರ್ ಫೇಡ್ ಆಗಿದೆ ಅದು ಬೇಡ" ಅಂದರೆ "ಅರಿವೆಯಿಂದ ನನ್ನ ಬೆಲೆ ಅಲ್ಲ, ಬಿಡು ಚಲ್ತಾ ಹೈ!" ಅಂದು ಬಿಡುತ್ತಾರೆ.

ಒಮ್ಮೆ ಓರ್ವ ನಮ್ಮಲ್ಲಿಗೆ ಹಗ್ಗ ಮಾರಲು ಬಂದಿದ್ದ. ಇವರು ಓದುತ್ತಾ ಕೂತವರು "ಹೋಗೋ ಮುಂದೆ. ಈಗಲೇ ನನಗೆ ಹಗ್ಗದ ಅವಶ್ಯಕತೆ ಇಲ್ಲ" ಅಂದರು. ಅವನಿಗೆ ಅರ್ಥ ಆಗಿರಬೇಕು. "ಹಾಗೆನ್ನಬೇಡಿ ರಾಯರೇ" ಅಂತ ನಗುತ್ತಾ ಮುಂದೆ ಹೋದ. ಒಮ್ಮೆ ಧಾರವಾಡದ ಗೆಳೆಯ ರಜತ ಸಮುದ್ರಕ್ಕೆ ಹೋದಾಗ ಅಲ್ಲಿ ಮೀನು ತುಂಬಿ ಇದ್ದ ದೋಣಿಗಳು ಇದ್ದವು. ಮೀನಿನ ಸುದ್ದಿ ಬಂದಾಗ, "ನಮ್ಮ ಶಾಂತೂ ಬಹಳ ಮೀನ ಮ್ಯಾಂಡೆಡ್" ಅಂತ ಅಂದರು. ಆ ಗೆಳೆಯ ಮೊದಲು ತಬ್ಬಿಬ್ಬಾದರೂ ನಂತರ, ನಕ್ಕಿದ್ದೇ ನಕ್ಕಿದ್ದು! ಒಮ್ಮೆ ನಮ್ಮಲ್ಲಿ ಓರ್ವ ಮುದುಕ ಕಲಾಯಿ ಬಗ್ಗೆ ಪಾತ್ರೆ ಕೇಳಲು ಬಂದಿದ್ದ. ಇವರು ಅವನನ್ನು ಭಿಕ್ಷೆ ಬೇಡುವವರಂತೆ ಎಣಿಸಿ "ಈಗ ಭಿಕ್ಷೆ ಹಾಕುವುದಿಲ್ಲ ಮುಂದೆ ನಡೆ" ಅನ್ನಬೇಕೆ? ಪಾಪ ಅವನಿಗೆ ಇವರ ಸ್ವಭಾವ ಗೊತ್ತಿದ್ದಕ್ಕೆ ಚೆನ್ನಾಯಿತು. "ಧಣಿ ನಾನು ಭಿಕ್ಷೆಯವನಲ್ಲ ಕಲಾಯಿಯವ, ಅಮ್ಮನಿಗೆ ಕರೆಯಿರಿ" ಅಂದ. ಕಡೆಗೆ ಹಳಹಳಿಸಿದವರು. ಒಮ್ಮೆ ಬೆಂಗಳೂರಿನಿಂದ ಬಂದ ಗೆಳೆಯರ ತಂಡದಲ್ಲಿ ಒಬ್ಬರು ಇನ್ನೊಬ್ಬರಿಗೆ ನನ್ನ ಪರಿಚಯ ಮಾಡಿಕೊಡುತ್ತಾ ಇವರು "ಗೌರೀಶರ ಧರ್ಮಪತ್ನಿ" ಅಂತ ಅಂದರು. ತಕ್ಷಣ ಇವರು "ನನಗೆ ಅಧರ್ಮಪತ್ನಿ ಬೇರೆ ಇಲ್ಲ, ಧರ್ಮ, ಅಧರ್ಮಕ್ಕೆ ಶಾಂತಾ ಒಬ್ಬರೇ ನನ್ನ ಪತ್ನಿ" ಅಂದು ಬಿಡಬೇಕೆ? ದಿನನಿತ್ಯ ಇಂಥ ಹಲವಾರು ವಿನೋದ ಅವರ ಮಾತಿನಲ್ಲಿ ಬಂದಿರುತ್ತದೆ.

❑ **ಶಾಂತಾ ಕಾಯ್ಕಿಣಿ**

**(ಗೌರೀಶರು ಬದುಕಿದ್ದಾಗ ಶಾಂತಾ ಕಾಯ್ಕಿಣಿ ಅವರು 1970ರಲ್ಲಿ ಬರೆದ ಸಂಗ್ರಹ ಲೇಖನ. ಬಹುಶಃ ಆಗ ಗೌರೀಶರಿಗೆ 60ರ ಸಂಭ್ರಮ. ಈಗ ಶಾಂತ ಕಾಯ್ಕಿಣಿ ಅವರಿಗೆ 84 ವರ್ಷ. ಗೋಕರ್ಣದ ಮನೆಯಲ್ಲಿದ್ದಾರೆ.)**

## ಪಪ್ಪಾನಿಗೆ



ಪ್ರೀತಿಯ ಪಪ್ಪಾ,
ಒಂದು ಪತ್ರ,
ನಾನು ಕ್ಷೇಮ
ಅಂದ ಹಾಗೆ
ಏನೆಂದು ಕರೆಯಲಿ ನಿನ್ನ?
ನನ್ನ ಪಾಲಿಗೆ ನೀನು
ರಾಜನಲ್ಲ ಮಹಾರಾಜನಲ್ಲ ಉದ್ದಾಮ ಸಾಹಿತಿ
ಯಲ್ಲ, ರಾಜಕಿಯ ಲೇಖಕನಲ್ಲ
ಅಥವಾ ನನ್ನ ಪ್ರೀತಿಯ ಮಮ್ಮಿಯ
ಮೆಚ್ಚಿಸಿ ಕೈ ಹಿಡಿದ ನೆಚ್ಚಿನ ಗಂಡನೂ ಅಲ್ಲ
ನೀನು ನನ್ನ ಪಾಲಿಗೆ
ಹಸಿರಿನ ಹಾಗೆ, ನೀಲಿಯ ಹಾಗೆ
ಈ ವರ್ಣ ಸಾಮ್ರಾಜ್ಯದ ಸಾರ್ವಭೌಮ ಕಣ್ಣಿನ
ಹಾಗೆ
ಹಾಗೆ ದೃಷ್ಟಿಯ ಹಾಗೆ
ಎಲ್ಲಕ್ಕೂ ಹೆಚ್ಚಾಗಿ ಒಬ್ಬ
ಸೀದಾ ಸಾದಾ ಸಾಚಾ ಮನುಷ್ಯನ ಹಾಗೆ

**–2–**

ನೀನು ಸ್ನಾನಕ್ಕೆ ಹೋಗಿ ಪಟ್ಟನೆ
ಒಂದೇ ತಂಬಿಗೆ ಮಿಂದು ಮೈವೊರಿಸಿ ಬಂದ
ನಿನ್ನ ಮೈಮರೆವಿನಲ್ಲಿ . . . .
ಅಲ್ಲಿ ಇಲ್ಲಿ ಹೋದಾಗೆಲ್ಲ ಉಮೇದಿ ಬಂದ ಹಾಗೆ
ಮಕ್ಕಳಿಗೆ ಬಹುಮಾನ ಇತ್ತು
ಬಸ್ಸಿನೊಳಗೆ ಖಾಲಿ ಕಿಸೆಯಲ್ಲಿ ಕೈ ಹಾಕಿ
ಮಿಕಿ ಮಿಕಿ ನೋಡುವ ನಿನ್ನ ನೋಟದಲ್ಲಿ
ಎಂಥಾ ಕಳಪೆ ಬರಹ ನಿನ್ನೆದುರು ಹಿಡಿದರೂ
"ಚೆನ್ನಾಗಿದೆ" ಎನ್ನುವ ಹಸೀ. . ."ಸುಳ್ಳಿ"ನಲ್ಲಿ
ಹಿಂದೊಂದು ಕಾಲದಲ್ಲಿ ಕ್ಲಾಸಲ್ಲಿ
ಶಿರಕ್ಕನೆ ನೆತ್ತಿಗೇರುತ್ತಿತ್ತಂತೆ ಆ ನಿನ್ನ ಸಿಟ್ಟಿನಲ್ಲಿ
ನಮ್ಮ ಮನೆಯಲ್ಲೇ
ಒಬ್ಬ ಪೇಯಿಂಗ್ ಗೆಸ್ಟ್ ಆಗಿರುವ ನಿನ್ನ
ಅಪ್ಪಟ ಅತಿಥಿ ಗುಣದಲ್ಲಿ
ಯಾವ ಕಾಳಜಿಯೂ ಇರದೆ
ಆ ಈ ಅಂಗಡಿಯಲ್ಲಿ ನೀ ಬೆಳೆಸುವ
ಉದ್ರಿ ಪಟ್ಟಿಯಲ್ಲಿ
ನಿನ್ನ ವ್ಯವಹಾರ ಜ್ಞಾನ ಶೂನ್ಯತೆಗೆ
ಮಮ್ಮಿ ಪ್ರತಿ ದಿನವೂ ಕಡು ಕೋಪ ಮಾಡಿದಾಗೆಲ್ಲ
ತೆಪ್ಪಗೆ ನಂಬಿಗಸ್ಥನ ಹಾಗೆ ಕೂರುವ
ನಿನ್ನ ಮೌನದಲ್ಲಿ

**–3–**

ನಿನ್ನೆಲ್ಲ ಹಾರ ತುರಾಯಿಗಳ
ಶಾಲೆಯ ಗೇಟಿನ ಹೊರಗೇ ಕಳಚಿ
ಸರಕ್ಕನೆ 'ಬಡಶಿಕ್ಷಕ' ಭಂಗಿಗೆ
ಬದಲಾಯಿಸುವ
ನಿನ್ನ ಅಸಹಾಯಕ
ಚಾಕಚಕ್ಯತೆಯಲ್ಲಿ
ಪಗಾರಿಲ್ಲದೆ ಪುಕ್ಕಟೆ ಪೆಂಪೆಂ ಗುಡಿಸುವ
ಹಾರ್ಮೋನಿಯಂ ಧ್ವನಿಯಲ್ಲಿ
ಎಲ್ಲಕ್ಕೂ ಮೇಲೆ
ಮಿಂಚುವ ನಿನ್ನ ಕ್ಷಮಾಗುಣದಲ್ಲಿ. . . .

**–4–**

ನಿನ್ನ ಸಾವಿರ ಬಿಂಬಗಳು ನನ್ನ
ಕಣ್ಣು ಕುಕ್ಕುತ್ತವೆ, ಬೆಳಕಾಗುತ್ತವೆ
ನಿಜವಾದ ಅರ್ಥದಲ್ಲಿ ಧ್ರುವಗಳಾಗುತ್ತವೆ
ನಾನೆಷ್ಟು ಬರೆದರೂ ಅದು ಹಗುರವಾಗುತ್ತದೆ
ಪಪ್ಪಾ
ಇಷ್ಟು ಮಾತ್ರ ಹೇಳಬಲ್ಲೆ
ನಿನ್ನನ್ನು 'ಪಪ್ಪಾ' ಎಂದು ಧನ್ಯತೆಯಿಂದ ಕರೆಯುವ
ಭಾಗ್ಯ ನನಗೆ ದೊರಕಿಸಿಕೊಟ್ಟಿದ್ದೀಯಲ್ಲ
ಇದಕ್ಕೆ ನಿನಗೆ ನಾನು ಸದಾ ಸದಾ ಋಣಿ.

❑ **ಡಾ. ಜಯಂತ ಕಾಯ್ಕಿಣಿ**

# ಗಣರಾಜ್ಯೋತ್ಸವ–ಒಂದು ಐತಿಹಾಸಿಕ ನೋಟ

ಭಾರತದ ಪ್ರಥಮ ಮಹಿಳಾ ರಾಷ್ಟ್ರಪತಿ ಪ್ರತಿಭಾ ಪಾಟೀಲರ ಘನನೇತೃತ್ವದಲ್ಲಿ ರಾಷ್ಟ್ರದ 63ನೇ ಗಣತಂತ್ರ ದಿನವನ್ನು ಜನವರಿ 26, 2012ರಂದು ಸಂತಸ ಮತ್ತು ಸಂಭ್ರಮದಿಂದ ಆಚರಿಸಲಾಯಿತು. ವಿಶ್ವದ ಬಹುದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಭಾರತದ ನೆಲ, ಜಲ, ಜನ ಮತ್ತು ಸಂಪತ್ತಿನ ರಕ್ಷಣೆಗಿರುವ ರಕ್ಷಣಾ ಪಡೆಗಳ ಬಲ ಪ್ರದರ್ಶನ ಮತ್ತು ರಾಷ್ಟ್ರದ ಬಹುಮುಖ ಸಾಂಸ್ಕೃತಿಕ ಸೌಂದರ್ಯವನ್ನು ವಿಶ್ವದೆದುರು ಪ್ರದರ್ಶಿಸಲಾಯಿತು. ಜನವರಿ 26, 1950ರಂದು ಸ್ವತಂತ್ರ ಭಾರತವನ್ನು ಗಣತಂತ್ರ ರಾಷ್ಟ್ರವೆಂದು ಘೋಷಿಸಲಾಯಿತು. ಸ್ವತಂತ್ರ ಭಾರತ ಆಚರಿಸುತ್ತಿರುವ ಗಣತಂತ್ರ ಒಂದು ಸಾಂಕೇತಿಕ ಮತ್ತು ವೈಭವೀಕರಣದ ಪ್ರದರ್ಶನವಾಗಿರುವುದು. ಈ ಮಹತ್ವದ ದಿನಕ್ಕೆ 83 ವರ್ಷಗಳ ಇತಿಹಾಸವಿರುವುದು. 1950ರಿಂದ ಜನವರಿ 26ರಂದು ಭಾರತದ ಗಣತಂತ್ರ ದಿನವಾಗಿ ಆಚರಿಸಲಾಗುತ್ತಿದೆ. ಅದಕ್ಕೂ ಮೊದಲು ಜನವರಿ 26ರಂದು ವಿಭಜನೆ ಪೂರ್ವದ ಭಾರತದ ಸ್ವಾತಂತ್ರ್ಯ ದಿನವೆಂದು ಬ್ರಿಟಿಷ್ ಭಾರತದಾದ್ಯಂತ ಆಚರಿಸಲಾಗುತ್ತಿದ್ದಿತು.

ಬ್ರಿಟಿಷ್ ವಸಾಹತುಶಾಹಿ ಭಾರತದ ಜನತೆಯಲ್ಲಿ ಪೂರ್ಣ ರಾಷ್ಟ್ರೀಯತ್ವದ ಪ್ರಜ್ಞೆ ಬೆಳೆದು ಉದ್ವೇಗಗೊಳ್ಳಲು 1930ನೇ ವರ್ಷ ಐತಿಹಾಸಿಕವಾಗಿ ಮಹತ್ವದ್ದಾಗಿರುವುದು. ಹಾಗೆಯೇ ಜನವರಿ 26 ಭಾರತದ ಇತಿಹಾಸದ ಮಹತ್ವದ ದಿನವಾಗಿರುವುದು. ಡಿಸೆಂಬರ್ 28–31, 1929ರಂದು ಬ್ರಿಟಿಷ್ ಭಾರತದ ಜನಪ್ರಿಯ ರಾಷ್ಟ್ರೀಯ ನಾಯಕ ಜವಾಹರಲಾಲ ನೆಹರು ಅವರ ಅಧ್ಯಕ್ಷತೆಯಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನ ಲಾಹೋರಿನಲ್ಲಿ ನಡೆಯಿತು. ಅಧಿವೇಶನದಲ್ಲಿ ಕಾಂಗ್ರೆಸ್ ಪ್ರತಿನಿಧಿಗಳಾಗಿ ಭಾಗವಹಿಸಿದ ಸಾವಿರಾರು ಭಾರತೀಯರ ಸಮ್ಮುಖದಲ್ಲಿ ಜವಾಹರಲಾಲ ನೆಹರು ಅವರು "ಪೂರ್ಣ ಸ್ವಾತಂತ್ರ್ಯವೇ ಭಾರತದ ಗುರಿ" ಎಂದು ಘೋಷಿಸಿದರು.

ಅಧಿವೇಶನದ ನಂತರ ಜನವರಿ 2, 1930ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯನ್ನು ಕರೆದು ಒಂದು ಮಹತ್ವದ ನಿರ್ಣಯವನ್ನು ಅಂಗೀಕರಿಸಲಾಯಿತು. ಅದೆಂದರೆ ಜನವರಿ 26, 1930 ದಿನವನ್ನು ದೇಶಾದಾದ್ಯಂತ ಭಾರತದ ಸ್ವಾತಂತ್ರ್ಯ ದಿನವೆಂದು ಆಚರಿಸಲು ಭಾರತೀಯರಿಗೆ ಕರೆ ನೀಡಲಾಯಿತು. ಅಲ್ಲದೆ ಜನವರಿ 26, 1930ರಂದು ದೇಶದಾದ್ಯಂತ ಸಭೆ ಸಮಾರಂಭಗಳನ್ನು ಜರುಗಿಸಿ ಸ್ವಾತಂತ್ರ್ಯ ಪ್ರತಿಜ್ಞೆಗೈಯುವಂತೆ ತಿಳಿಸಲಾಯಿತು. ಪ್ರತಿಜ್ಞೆಯ ಮಹತ್ವದ ಭಾಗ ಹೀಗಿದೆ : "We believe that it is the inalienable right of the Indian people, as of any other people, to have freedom and to enjoy the fruits of their toil and have the necessities of life, so that they may have full opportunities of growth. We believe also that if any Government deprives a people of these rights and oppresses them, the people have a further right to alter it or to abolish it. The British Government in India has not only deprived the Indian people of their freedom but has based itself on the exploitation of the masses, and has ruined India economically, politically, culturally and spiritually. We believe therefore that India must sever the British connection and attain Purna Swaraj or complete Independence".

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಅಪ್ಪಣೆ ಮೇರೆಗೆ ಕರ್ನಾಟಕದ ಮಹತ್ವದ ಊರುಗಳಲ್ಲಿ ಸ್ವಾತಂತ್ರ್ಯ ದಿನಾಚರಣೆಯು ನಿರಂತರವಾಗಿ ಸಾಗಿತು. ಅಂದು ಎಲ್ಲೆಲ್ಲಿಯೂ ಸಂತೋಷದ ಸುಗ್ಗಿ. ಸಾರಣೆ ಕಾರಣೆಗಳಿಂದ ಅಂಗಳಗಳು ಶೋಭಿಸುತ್ತಿದ್ದವು. ತಳಿರು–ತೋರಣಗಳಿಂದ ಗುಡಿಗುಂಡಾರಗಳು, ಮನೆ ಮಠಗಳು ಮಂಗಲಮಯವಾಗಿ ಕಂಗೊಳಿಸುತ್ತಿದ್ದವು. ಬೆಳಗ್ಗೆ ಏರಿಸಲ್ಪಟ್ಟ ಸ್ವಾತಂತ್ರ್ಯದ ಗುಡಿಯು ಗೌರವದಿಂದ ಗುಡಿಗೋಪುರಗಳ ಮೇಲೆ ಫಡಫಡನೆ ಹಾರಾಡಿ ಆಳರಸರ ಎದೆಯನ್ನಲುಕಿಸಿ ತಲ್ಲಣಗೊಳಿಸುವಂತಿದ್ದಿತು. ಪೇಟೆ ಪಟ್ಟಣಗಳಲ್ಲಿ ಹೊರಟ ಪ್ರಚಂಡ ಮೆರವಣಿಗೆಗಳು, ಸ್ವಾತಂತ್ರ್ಯ ಸೇನೆಯ ರಭಸ, ಗೌರವ ಗಾಂಭೀರ್ಯಗಳನ್ನು ಧಾರಾಳವಾಗಿ ಸೂಚಿಸುತ್ತಿದ್ದವು. ತರುಣರು ಎಲ್ಲೆಲ್ಲಿಯೂ ಉತ್ಸಾಹದಿಂದ ಮುಂದೆ ಬಂದು ಅಂದಿನ ಕಾರ್ಯದಲ್ಲಿ ಸಹಭಾಗಿಗಳಾದರು.

ಬೆಳಗಾವಿ ಜಿಲ್ಲೆಯ ಬೆಳಗಾವಿ, ಹುದ್ಲಿ ಐನಾಪುರ, ನಂದಗಡ, ಹುಕ್ಕೇರಿ, ಕಿತ್ತೂರ, ನಿಪ್ಪಾಣಿ, ಸಂಕೇಶ್ವರ, ಮುರಗೋಡ, ಪಚ್ಚಾಪುರ, ಅಥಣಿ, ಬೈಲಹೊಂಗಲ, ಶೇಡಬಾಳ, ಇಟಗಿ, ಸಂಪಗಾಂವಿ ಮತ್ತು ಹಿರೇಬಾಗೇವಾಡಿ; ವಿಜಾಪುರ ಜಿಲ್ಲೆಯ ವಿಜಾಪುರ, ಬಾಗಲಕೋಟೆ, ಗುಳೇದಗುಡ್ಡ ಹಾಗೂ ಧಾರವಾಡ ಜಿಲ್ಲೆಯ ಧಾರವಾಡ, ಕಲಘಟಗಿ, ಹಾವೇರಿ ಮತ್ತು ಕಾರಾವಾರ ಜಿಲ್ಲೆಯ ಕಾರವಾರ, ಕುಮಟಾ, ಸಿದ್ದಾಪುರ ಸೇರಿದಂತೆ ಪ್ರಮುಖ ಪಟ್ಟಣಗಳಲ್ಲಿ ಜನವರಿ 26, 1930ರಂದು ಸಂಭ್ರಮದ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು. ಅಂದು ಮಂಗಳೂರು ಮತ್ತು ಬಳ್ಳಾರಿ ಜಿಲ್ಲೆಯ ಪ್ರಮುಖ ಪಟ್ಟಣಗಳಲ್ಲಿ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು.

ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಹೈದರಾಬಾದ ನಿಜಾಮನ ನಿರಂಕುಶ ಆಡಳಿತವಿದ್ದುದರಿಂದ ಅಲ್ಲಿ ರಾಷ್ಟ್ರೀಯ ಚಟುವಟಿಕೆಗಳನ್ನು ನಡೆಸುವಂತಿರಲಿಲ್ಲ. ಮೈಸೂರು ಸಂಸ್ಥಾನದಲ್ಲಿ ಅಂತಹ ಪರಿಸ್ಥಿತಿ ಇರಲಿಲ್ಲವಾದ್ದರಿಂದ ಕೆಲಮಟ್ಟಿಗೆ ರಾಷ್ಟೀಯ ಚಟುವಟಿಕೆಗಳು ನಡೆಯುತ್ತಿದ್ದವು. ಬ್ರಿಟಿಷ್ ಭಾರತದಲ್ಲಿ ಜನವರಿ 26, 1930 ರಂದು ಪೂರ್ಣ ಸ್ವಾತಂತ್ರೋತ್ಸವ ಜರುಗುವಂತೆ ಮೈಸೂರ ಸಂಸ್ಥಾನದಲ್ಲಿ ಆಚರಿಸುವ ಪ್ರಯತ್ನಗಳು ನಡೆದವು. ದೇಶೀ ಸಂಸ್ಥಾನಗಳಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸಿನ ಚಟುವಟಿಕೆಗಳು ನಡೆಯುವಂತಿರಲಿಲ್ಲ. ಪೂರ್ಣ ಸ್ವಾತಂತ್ರ್ಯೋತ್ಸವ ಆಚರಣೆ ತಡೆಯಲು ಮೈಸೂರು ಸಂಸ್ಥಾನದ ಎಲ್ಲ ಜಿಲ್ಲಾಧಿಕಾರಿಗಳು ಅಂದು ಪೋಲಿಸ ಕಾಯಿದೆಯ 39,45,46 ಮತ್ತು 144ನೆಯ ಕಲಮುಗಳನ್ನು ಜಾರಿಗೊಳಿಸಿದರು. ಪೋಲಿಸರು ಬೆತ್ತ ಬಡಿಗೆಗಳನ್ನು ಮತ್ತು ರಿವಾಲ್ವರುಗಳನ್ನು ಹಿಡಿದು ಬೀದಿ ಬೈಲುಗಳನ್ನು ಸುತ್ತಾಡಿ ಜನಜಂಗುಳಿಯ ಮೇಲೆ ಎರಗಿ ನಾಡಗುಡಿಯನ್ನು ಕಿತ್ತೊಗೆದರು. ಚಿಕ್ಕಪುಟ್ಟ ಕಂದಮ್ಮಗಳ ಮೇಲೆ ಕೈ ಮಾಡಿ ರಾಷ್ಟ್ರಧ್ವಜಗಳನ್ನು ಹಾಗೂ ಗಾಂಧಿ ಟೋಪ್ಪಿಗಳನ್ನು ಕಸಿದುಕೊಂಡರು.

ಮುಂದೆ ಮಹಾತ್ಮ ಗಾಂಧೀಯವರ ನಾಯಕತ್ವದಲ್ಲಿ ದೇಶದಾದ್ಯಂತ ಸವಿನಯ ಕಾನೂನುಭಂಗ ಚಳವಳಿ ಪ್ರಾರಂಭವಾಯಿತು. ಜನವರಿ 26, 1931ರಂದು ಕರ ನಿರಾಕರಣೆ ಪ್ರತಿಜ್ಞೆಗೆ ಅಂಕಿತ ಹಾಕಿ, ಪ್ರತಿಜ್ಞೆ ಮಾಡಿ, ಧ್ವಜದಡಿಯಲ್ಲಿ ನಿಂತು, ಸ್ವಾತಂತ್ರ್ಯ ದಿನಾಚರಣೆ ಪಾಲಿಸಲು ಅಂಕೋಲೆ ತಾಲೂಕಿನ ಹಳ್ಳಿಗರು ನಿರ್ಧರಿಸಿದರು. ಅಂದು ಹಳ್ಳಿಗರು ಪ್ರಭಾತ್ ಪೇರಿ, ಧ್ವಜವಂದನೆಗಳಿಂದ ಸ್ವಾತಂತ್ರ್ಯ ದಿನವನ್ನು ಆಚರಿಸಿದರು. ವಾಡಿಕೆಯ ಧ್ವಜ ವಂದನೆಯ ನಂತರ ಖಾತೆದಾರರು ಧ್ವಜದಡಿಯಲ್ಲಿ ನಿಂತು ಕರನಿರಾಕರಣೆ ಪ್ರತಿಜ್ಞೆ ಮಾಡಿದ ದೃಶ್ಯವು ಬ್ರಿಟಿಷ್ ಆಳರಸರ ಕಣ್ಣಲ್ಲಿ ಅಂಜನವನ್ನು ಹಾಕುವಂತಹದ್ದಾಗಿತ್ತು. ಅಂದು ರಾತ್ರಿ ಸರಕಾರ ಮಹಾತ್ಮ ಗಾಂಧೀ, ಜವಹಾರಲಾಲ್ ನೆಹರೂ, ಸರದಾರ್ ವಲ್ಲಭಬಾಯಿ ಪಟೇಲರನ್ನು ಒಳಗೊಂಡು 27 ಪ್ರಮುಖ ನಾಯಕರನ್ನು ಬಿಡುಗಡೆ ಮಾಡಿತು.

ಜನವರಿ 26, 1932ರಂದು ಸಿದ್ದಾಪುರದಲ್ಲಿ ವಾನರಸೇನೆಯ ಪ್ರಭಾತ್ ಫೇರಿ ಹೊರಡಿಸುವ ಸಿದ್ಧತೆಗಾಗಿ 25ರ ರಾತ್ರಿ 26 ಮಕ್ಕಳನ್ನು ಬಸವನಗುಡಿಗೆ ಕೃಷ್ಣಮೂರ್ತಿರಾವ ಅವರ ನಾಯಕತ್ವದಲ್ಲಿ ಕಳುಹಿಸಲಾಯಿತು. ಫೇರಿ ಜೈಜೈಕಾರ ಮಾಡುತ್ತ ಚಂದ್ರಘಟ್ಟದ ಪಟಾಂಗಣವನ್ನು ತಲುಪಿದಾಗ, 25 ಪೊಲೀಸರು ಲಾಠಿಯೊಂದಿಗೆ ಬಂದು ಎಲ್ಲ ಮಕ್ಕಳನ್ನು ದನ ಬಡಿದಂತೆ ಬಡಿದು ಕಚೇರಿಗೆ ಕರೆದುಕೊಂಡು ಹೋಗಿ ನಂತರ ಉಳಿದವರನ್ನು ಬಿಡುಗಡೆ ಮಾಡಿದರು. ಕಲ್ಲನಗೌಡ ಎಸ್. ಪಾಟೀಲರು ಬೆಳಗಾವಿಯಲ್ಲಿ ಜನವರಿ 26, 1933ರಂದು ಸ್ವಾತಂತ್ರ್ಯೋತ್ಸವವನ್ನು ಆಚರಿಸಿ ಅಂದು ವಿದೇಶಿ ಬಟ್ಟೆಗಳನ್ನು ಸುಟ್ಟು ಹಾಕಿದರು. ಸರಕಾರ ಅವರನ್ನು ಬಂಧಿಸಿ 9 ತಿಂಗಳ ಕಾರಾಗೃಹ ಶಿಕ್ಷೆ ಮತ್ತು ಹಾಗೂ 200 ರೂಪಾಯಿ ದಂಡ ವಿಧಿಸಿತು. ಜನವರಿ 26, 1939ರಂದು ವಿಜಾಪುರದಲ್ಲಿ ಸ್ವಾತಂತ್ರ್ಯೋತ್ಸವವನ್ನು ಆಚರಿಸಿ ಸಂಪೂರ್ಣ ಹರತಾಳವನ್ನು ಆಚರಿಸಲಾಯಿತು.

ಹೀಗೆ ಜನವರಿ 26, 1930ರಂದು ಪ್ರಾರಂಭವಾದ ಸ್ವಾತಂತ್ರ್ಯೋತ್ಸವ ಆಚರಣೆಯು 1947 ಜನವರಿ 26ರರವರೆಗೆ ನಿರಂತರವಾಗಿ ಪ್ರತಿವರ್ಷ ಅಂದು ಬಹು ವಿಜೃಂಭಣೆಯಿಂದ ಆಚರಣೆಗೊಂಡಿತು. ಬ್ರಿಟಿಷ್ ಭಾರತದಲ್ಲಿ ಈ ಸ್ವಾತಂತ್ರ್ಯೋತ್ಸವ ಆಚರಣೆ ರಾಷ್ಟ್ರೀಯತೆಯ ಸಂಕೇತವಾಗಿ ಜನತೆಯನ್ನು ರಾಷ್ಟ್ರೀಯ ಚಳವಳಿಯಲ್ಲಿ ಸಾಮೂಹಿಕವಾಗಿ ಭಾಗವಹಿಸುವಂತೆ ಮಾಡಲು ಸ್ವಾತಂತ್ರ್ಯ ಚಳವಳಿಯಲ್ಲಿದ್ದ ಮುಂಚೂಣಿ ನಾಯಕರುಗಳಿಗೆ ಸಹಾಯಕವಾಯಿತು. ಪ್ರತಿ ವರ್ಷ ಜನವರಿ 26ರಂದು ಭಾರತದ ಸ್ವಾತಂತ್ರ್ಯದ ಸಂಕೇತವಾದ ತ್ರಿರಂಗ ಧ್ವಜವನ್ನು ನಗರ, ಪಟ್ಟಣ ಹಾಗೂ ಗ್ರಾಮಗಳಲ್ಲಿ ಹಾರಿಸಿ ಬೃಹತ್ ಕಾರ್ಯಕ್ರಮಗಳನ್ನು ಏರ್ಪಡಿಸಿ, ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ

ಹೋರಾಟಗಾರರು ರಾಷ್ಟ್ರ ಪ್ರೇಮದ ಭಾಷಣಗಳನ್ನು ಮಾಡುತ್ತಿದ್ದರು. ಬರಬರುತ್ತಾ ಇಂತಹ ಆಚರಣೆಗಳು ದೇಶೀ ಸಂಸ್ಥಾನಗಳಲ್ಲಿಯೂ ಆಚರಣೆಗೊಳ್ಳಲು ಪ್ರಾರಂಭವಾದವು.

ಅಗಸ್ಟ್ 15, 1947ರಂದು ದೇಶದ ವಿಭಜನೆಯೊಂದಿಗೆ ಇಂದಿನ ಭಾರತ ಸ್ವತಂತ್ರವಾಯಿತು. ಆದರೆ ಸ್ವತಂತ್ರ ಭಾರತಕ್ಕೆ ಸಂವಿಧಾನವಿರಲಿಲ್ಲ. ಬ್ರಿಟಿಷರ ವಸಾಹತುಶಾಹಿ ಭಾರತ ಸರಕಾರದ 1935ರ ಕಾಯ್ದೆಯಲ್ಲಿ ಬದಲಾವಣೆ ಮಾಡಿ ಡೋಮಿನಿಯನ್ ದೇಶದ ಮುಖ್ಯಸ್ಥನಾಗಿ 6ನೇ ಜಾರ್ಜ್ ಮತ್ತು ಅರ್ಲ್ ಮೌಂಟ್‌ಬ್ಯಾಟನ್ ಗವರ್ನರ ಜನರಲ್‌ರಾಗಿ ಮುಂದುವರೆದರು. ಅಗಸ್ಟ್ 28, 1947ರಂದು ಭಾರತಕ್ಕೆ ಖಾಯಂ ಸಂವಿಧಾನ ರಚಿಸಲು ಡ್ರಾಫ್ಟಿಂಗ್ ಕಮಿಟಿಯನ್ನು ನೇಮಕ ಮಾಡಲಾಯಿತು. ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಅದರ ಚೇರಮನ್ನರನ್ನಾಗಿ ಮಾಡಲಾಯಿತು. ಆಯಾ ರಾಜ್ಯದ ಜನಸಂಖ್ಯೆ ಮತ್ತು ವಿಸ್ತಾರದ ಆಧಾರದ ಮೇಲೆ 308 ಪ್ರತಿನಿಧಿಗಳನ್ನು ಸಂವಿಧಾನ ಸಭೆಯ ಸದಸ್ಯರಾಗಿ ಆಯ್ಕೆಯಾದರು. ಭಾರತದ ಸಂವಿಧಾನ ರಚನೆಯಲ್ಲಿ ಅದರ ಸದಸ್ಯರುಗಳೆಲ್ಲ ಸಮಾನವಾಗಿ ಕಾರ್ಯನಿರ್ವಹಿಸಿದರು. ಸಂವಿಧಾನದ ಕರಡು ಪ್ರತಿಯನ್ನು ನವೆಂಬರ್ 4, 1947 ಸಂವಿಧಾನ ಸಭೆಗೆ ಸಾದರಪಡಿಸಲಾಯಿತು. ಅದರ ಮೇಲಿನ ಚರ್ಚೆ ಎರಡು ವರ್ಷಗಳವರೆಗೆ ನಡೆಯಿತು. ಸಂವಿಧಾನ ಸಭೆಯಲ್ಲಿ ಯಾವುದೇ ಸಂಕೋಚವಿಲ್ಲದೆ ಅದರ ಸದಸ್ಯರುಗಳಿಗೆ ತಮ್ಮ ವಿಚಾರ ಮತ್ತು ಅಭಿಪ್ರಾಯಗಳನ್ನು ಮಂಡಿಸಲು ಪೂರ್ಣ ಸ್ವಾತಂತ್ರ್ಯವಿದ್ದಿತು. 166 ಸಾರ್ವಜನಿಕ ಸಭೆಗಳಾದವು. ಕರಡು ಪ್ರತಿ ರಚನೆ, ಅದರ ಮೇಲಿನ ಚರ್ಚೆ, ಅವಶ್ಯಕ ಬದಲಾವಣೆಯೊಂದಿಗೆ ಸಂವಿಧಾನ ಸಿದ್ಧವಾಗಲು ಎರಡು ವರ್ಷ, ಹನ್ನೊಂದು ತಿಂಗಳು ಮತ್ತು ಹದಿನೆಂಟು ದಿನಗಳು ಹಿಡಿದವು. ನವೆಂಬರ್ 26, 1949 ರಂದು ಭಾರತದ ಸಂವಿಧಾನವನ್ನು ಒಪ್ಪಲಾಯಿತು. ಜನವರಿ 21, 1950ರಂದು ಡಾ. ರಾಜೇಂದ್ರ ಪ್ರಸಾದರು ಭಾರತದ ರಾಷ್ಟ್ರಪತಿಗಳಾಗಿ ಆಯ್ಕೆಯಾದರು. ಜನವರಿ 24, 1950ರಂದು ಸಂವಿಧಾನ ರಚನಾ ಸಭೆಯ 308 ಸದಸ್ಯರು ಇಂಗ್ಲಿಷ್ ಮತ್ತು ಹಿಂದಿಯಲ್ಲಿ ರಚಿಸಿದ ಹಸ್ತ ಪ್ರತಿಗಳಿಗೆ ಅಂಕಿತ ಹಾಕಿದರು. ಜನವರಿ 26, 1950ರಂದು ಸಮಗ್ರ ಭಾರತದ ಕಾನೂನಾಗಿ ಜಾರಿಗೆ ಬಂದಿತು.

ಭಾರತದ ಸಂವಿಧಾನದ ತಿದ್ದುಪಡಿಗೆ ಅಳವಡಿಸಿರುವ ನಿಯಮಾವಳಿಗಳ ಕುರಿತು ಡಾ. ಬಿ.ಆರ್. ಅಂಬೇಡ್ಕರ್ ಹೇಳಿರುವಂತೆ : "We can therefore safely say that the Indian Federation will not suffer from the faults of rigidity or legalism. Its distinguished feature is that it is a flexible federation.. . The three mechanism of the system derive by the Assembly, contrary to the predictions, have made the constitution flexible at the same time protected the rights of the State. They have worked better than the amending process in any other country where Federation and the British Parliamentary System jointly formed the basis of the constitution"

ಜನವರಿ 26, 1950ರಂದು ಭಾರತದ ಪ್ರಥಮ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರ ಮಾತು ಹೀಗಿದೆ : "Today, for the first time in our long and chequered history, we find the whole of this vast land. . . brought together under the jurisdiction of one constitution and one Union which takes over responsibility for the welfare of more than 320 million men and women who inhabit it".

1930ರಿಂದ ಪ್ರಾರಂಭವಾದ ಸ್ವಾತಂತ್ರ್ಯೋತ್ಸವ ಆಚರಣೆ 1947ರವರೆಗೆ ಜನವರಿ 26ರಂದು ಆಚರಿಸಲಾಗುತ್ತಿದ್ದಿತು. 1950ರಿಂದ ಇಂದಿನವರೆಗೂ ಜನವರಿ 26ರಂದು ಭಾರತದ ಗಣರಾಜ್ಯೋತ್ಸವವನ್ನಾಗಿ ಆಚರಿಸುತ್ತ ಬರಲಾಗಿದೆ.

❑ ಡಾ. ಜೆ.ಎ. ಬಿರಾದಾರ

# ದೆಹಲಿ ಕನ್ನಡಿಗರಿಗೆ ನೂತನ ವರ್ಷದ 'ಅತಿ ಮಧುರ' ಶುಭಾರಂಭ



ನೂತನ ವರ್ಷದ ಆರಂಭದ ದಿನದಂದು (1.1.2012) ದೆಹಲಿ ಮಿತ್ರ ಆಯೋಜಿಸಿದ್ದ ಅತಿ ಮಧುರ ಕಾವ್ಯ ರಸ ಸಂಜೆ ಕಾರ್ಯಕ್ರಮವು ನಿಜವಾದ ಅರ್ಥದಲ್ಲಿಯೂ ರಮ್ಯವಾಗಿತ್ತು. ಈ ಸಲದ ಹೊಸ ವರ್ಷದ ಆಚರಣೆಯನ್ನು ತುಂಬಾ ಸಂತಸಮಯವಾಗಿ, ಎಲ್ಲ ದೆಹಲಿ ಕನ್ನಡ ಬಂಧುಗಳೊಂದಿಗೆ ಹೆಚ್ಚಿನ ಉತ್ಸಾಹದಿಂದ ಕಳೆಯುವಂತೆ ಮಾಡಿತ್ತು 'ಅತಿ ಮಧುರ' ಕಾರ್ಯಕ್ರಮ. ಆ ಸಂದರ್ಭದಲ್ಲಿ ಡಾ. ಪುರುಷೋತ್ತಮ ಬಿಳಿಮಲೆ, ಡಾ. ಬಿ.ಟಿ. ಚಿದಾನಂದಮೂರ್ತಿ ಮತ್ತು ಡಾ. ಎಂ.ಎನ್. ಗೌಡ ಅವರುಗಳನ್ನು ಸನ್ಮಾನಿಸಿದ್ದು ಸಮಯೋಚಿತ ಹಾಗೂ ಅರ್ಥಪೂರ್ಣವಾಗಿತ್ತು.

ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದ 2011ರ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಡಾ. ಬಿಳಿಮಲೆ ಅವರು ತಮ್ಮ ಬಾಲ್ಯದ ದಿನಗಳನ್ನು ನೆನಪುಮಾಡಿಕೊಡುತ್ತಾ ಸಭಿಕರನ್ನು ನಗೆಗಡಲಿನಲ್ಲಿ ತೇಲಿಸಿ ಒಂದು ಹಾಸ್ಯ ಸಂಜೆಯನ್ನೇ ಹುಟ್ಟು ಹಾಕಿದರು. ಮತ್ತೊಬ್ಬ ರಾಜ್ಯೋತ್ಸವ ಪ್ರಶಸ್ತಿ ವಿಜೇತರಾದ ಡಾ. ಚಿದಾನಂದಮೂರ್ತಿ ಅವರು ಅಷ್ಟೇ ಗಂಭೀರವಾಗಿ ಔಷಧಿ ಇಲ್ಲದೆ ಬದುಕುವುದು ಕೂಡಾ ಸಾಧ್ಯ, ನಾವು ಔಷಧಿ ಕೊಡದೇ ಇರುವ ವೈದ್ಯರುಗಳು ಎಂಬುದನ್ನು ತಿಳಿಸುತ್ತಾ ತಾವು ನಡೆದು ಬಂದ ಹಾದಿಯನ್ನು ಹಾಗೂ ನಿವೃತ್ತಿಯ ನಂತರವೂ ಈ ನಿಟ್ಟಿನ ಹಲವಾರು ಕಾರ್ಯಕ್ರಮಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ವಿಷಯವನ್ನು ತಿಳಿಸಿದರು. ಶ್ರೀ ಅವನೀಂದ್ರನಾಥರಾವ್ ಅವರು ತಮ್ಮ ಸ್ವಾಗತ ಭಾಷಣದಲ್ಲಿ ದೆಹಲಿ ಮಿತ್ರ ನಡೆದು ಬಂದ ಹಾದಿ ಮತ್ತು ದೆಹಲಿ ಮಿತ್ರ ಇದುವರೆಗೂ ಆಯೋಜಿಸಿದ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಕೊಡುತ್ತಾ ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯಕ್ರಮದ ಮೊದಲಿಗೆ ಮಕ್ಕಳು ನಡೆಸಿಕೊಟ್ಟ ನೃತ್ಯಗಳು ರಂಜಿಸಿದವು.

ತಮ್ಮ ಹಾಗೂ ಶ್ರೀ ಶಶಿಧರ ಕೋಟೆ ಅವರ ಸ್ನೇಹ, ಒಡನಾಟ, ಅವರ ಕುಟುಂಬದೊಡನೆ ಅವರಿಗಿರುವ ಅನುಬಂಧಗಳು, ದೆಹಲಿ ಮಿತ್ರ ನಡೆದು ಬಂದ ಹಾದಿ ಮುಂತಾದುವುಗಳನ್ನು ಪ್ರೇಕ್ಷಕರಿಗೆ ಮನದಟ್ಟಾಗುವಂತೆ ಅಲ್ಲಲ್ಲಿ ಜನರನ್ನು ನಗಿಸುತ್ತಾ ವಸಂತ ಶೆಟ್ಟಿ ಬೆಳ್ಳಾರೆ ಅವರು ತಮ್ಮ ಅನುಭವವನ್ನು ಹಂಚಿಕೊಂಡರು. ಕಾರ್ಯಕ್ರಮದ ಕೊನೆಯಲ್ಲಿ ಬಗೆ ಬಗೆ ತಿಂಡಿಗಳನ್ನು ಉಣಬಡಿಸಿ ತಮ್ಮತನವನ್ನು ಮೆರೆದರು. ಕಾರ್ಯಕ್ರಮದಷ್ಟೇ ಈ ತಿಂಡಿಗಳೂ ಸೊಗಸಾಗಿದ್ದವು.

'ಅತಿ ಮಧುರ' ಕಾರ್ಯಕ್ರಮ ಅತ್ಯಂತ ರಂಜನೀಯವಾಗಿದ್ದು ಇಡೀ ಸಭಾಂಗಣವೇ ಕುಣಿಯುವಂತೆ ಮಾಡಿತ್ತು. ವಿದೇಶಗಳಲ್ಲಿಯೂ ಪ್ರಖ್ಯಾತರಾಗಿರುವ ಶಶಿಧರ ಕೋಟೆ ಅವರ ಗಾಯನ ಶ್ರೋತೃಗಳನ್ನು ಯಾವುದೋ ಲೋಕಕ್ಕೆ ಕೊಂಡೊಯ್ದಿದ್ದವು.

ಮೊದಲಿಗೆ ಶಶಿಧರ ಕೋಟೆ ಅವರು ಆತ್ಮೀಯವಾಗಿ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಂಡರು. ವಿಶಿಷ್ಟ ಧ್ವನಿಯನ್ನು ಹೊಂದಿರುವ ಅವರು ಕನ್ನಡಿಗರೆಂಬುದು ಕನ್ನಡಿಗರೆಲ್ಲರೂ ಹೆಮ್ಮೆ ಪಡಬೇಕಾದ ವಿಷಯ. ಅವರೊಂದಿಗೆ ಪಕ್ಕ ವಾದ್ಯಗಳನ್ನು ನುಡಿಸಿದ ಶ್ರೀ ರಮೇಶ್ ಟಿ.ಎಸ್. , ಶ್ರೀ ಭೀಮಸೇನ ಬಜಂತ್ರಿ ಅವರೂ ಸೇರಿದಂತೆ ಎಲ್ಲ ಸಂಗೀತಗಾರರೂ ನೀಡಿದ ಸಾಥ್ ರಮ್ಯವಾಗಿತ್ತು. ಸ್ಥಳೀಯರಿಗೆ ಅವಕಾಶ ಮಾಡಿಕೊಟ್ಟ ಶ್ರೀ ಕೋಟೆ ಅವರೂ ಮತ್ತು ದೆಹಲಿ ಮಿತ್ರನೂ ಅಭಿನಂದನೀಯರು. ಕೋಟೆ ಅವರನ್ನು ದೆಹಲಿಗೆ ಕರೆಯಿಸಿ ದೆಹಲಿ ಕನ್ನಡಿಗರಿಗೆ ಮತ್ತು ಇತರ ಭಾಷೆಗಳವರಿಗೆ ಸಂಗೀತಮಯ ವಾತಾವರಣದಲ್ಲಿ ನೂತನ ವರ್ಷವನ್ನು ಆಚರಿಸಲು ಅವಕಾಶ ಕಲ್ಪಿಸಿದ ದೆಹಲಿ ಮಿತ್ರ ಈ ಕಾರ್ಯಕ್ರಮವನ್ನು 'ಕೋಟೆಗೆ ನಮನ' ಎಂದು ಕರೆದು ಶ್ರೀ ಶಶಿಧರ ಕೋಟೆ ಅವರ ತಂದೆಯವರಾದ ದಿ. ಶ್ರೀ ವಸಂತ ಕುಮಾರ ಕೋಟೆ ಅವರಿಗೆ ಅರ್ಪಿಸಿದ್ದು ಅರ್ಥಪೂರ್ಣವಾಗಿತ್ತು. ಪ್ರಕಾಶ್ ಶೆಟ್ಟಿ ಉಳೆಪಾಡಿ ಕಾರ್ಯಕ್ರಮ ನಿರ್ವಹಿಸಿದರು. ಬಾಲಕೃಷ್ಣ ಡಿ. ನಾಯ್ಕ್ ವಂದನಾರ್ಪಣೆ ಸಲ್ಲಿಸಿದರು.

ದೆಹಲಿ ಮಿತ್ರ ಆಯೋಜಿಸುವ ಎಲ್ಲ ಕಾರ್ಯಕ್ರಮಗಳಂತೆ ಈ ಕಾರ್ಯಕ್ರಮವೂ ಶಿಸ್ತಿನಿಂದ ಕೂಡಿದ್ದು ಒಂದು ಯಶಸ್ವಿ ಕಾರ್ಯಕ್ರಮವಾಗಿತ್ತು.

❑ ಕೃಷ್ಣಮೂರ್ತಿ ಕಲುಮಂಗಿ

# ಮನಸೂರೆಗೊಂಡ ವಿಶಿಷ್ಟ ನೃತ್ಯರೂಪಕ

ಜನವರಿ 29, ಭಾನುವಾರ ಸಂಜೆ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ನೆರೆದ ಕನ್ನಡಿಗರು ಅಪರ್ಣಾ ಸಿಂಧೂರ್ ಮತ್ತು ಅನಿಲ್ ನಾಟ್ಯವೇದ ಅವರ ಅದ್ಭುತ ನೃತ್ಯ ಪ್ರದರ್ಶನವನ್ನು ನೋಡಿ ಆನಂದಿಸಿದರು.



1991 ರಲ್ಲಿ ಅಪರ್ಣಾ ಸಿಂಧೂರ್ ಸ್ಥಾಪಿಸಿದ 'ನವರಸ ಡಾನ್ಸ್ ಥಿಯೇಟರ್' ಒಂದು ಸಮಕಾಲೀನ ನೃತ್ಯ, ನಾಟಕ ಸಂಸ್ಥೆಯಾಗಿ ಈಗಾಗಲೇ ದೇಶ–ವಿದೇಶದಲ್ಲಿ ಜನಪ್ರಿಯತೆ ಗಳಿಸಿದೆ. ಈ ಸೃಜನಶೀಲ ತಂಡ ಭಾರತದಲ್ಲಷ್ಟೇ ಅಲ್ಲದೇ ಅಮೇರಿಕಾ, ಯೂರೋಪ್, ಜರ್ಮನಿ ಮುಂತಾದ ವಿಶ್ವದ ಅನೇಕ ಸಾಂಸ್ಕೃತಿಕ ಹಬ್ಬಗಳಲ್ಲಿ ತಮ್ಮ ನೃತ್ಯ ಪ್ರದರ್ಶನ ನೀಡಿದ್ದಾರೆ.

ನೃತ್ಯದಲ್ಲಿ ಕಳೆದುಹೋಗುವ ಅಪರ್ಣಾ ನೃತ್ಯ ಸಂಯೋಜಕರಾಗಿ ಹೆಸರು ಮಾಡಿದವರು. ಪ್ರಶಸ್ತಿಗೆ ಭಾಜನರಾದವರು. ಹೆಸರಾಂತ ಭರತನಾಟ್ಯ ಪಟು ಪದ್ಮಭೂಷಣ ಡಾ.ಕೆ. ವೆಂಕಟಲಕ್ಷ್ಮಮ್ಮ ಅವರಲ್ಲಿ ನೃತ್ಯ ಕಲಿತಿರುವ ಅಪರ್ಣಾ ತಾಯ್ನೆಲದಲ್ಲಷ್ಟೇ ಅಲ್ಲದೆ ವಿದೇಶದಲ್ಲೂ ಹೆಸರು ಗಳಿಸಿದ್ದಾರೆ.

ಪ್ರಸ್ತುತ ಪ್ರವಾಸಿ 'ನವರಸ' ತಂಡ ಶಾಸ್ತ್ರೀಯ ಮತ್ತು ಸಮಕಾಲೀನ ನೃತ್ಯ ಮತ್ತು ರಂಗಭೂಮಿ ಪ್ರಾಕಾರಗಳಲ್ಲಿ ಭಾರತೀಯ ಮತ್ತು ಪಾಶ್ಚಿಮಾತ್ಯ ಎರಡರಲ್ಲೂ ಶಾಸ್ತ್ರೀಯ ಮತ್ತು ಜಾನಪದ ಹಾಡು, ನೃತ್ಯಗಳನ್ನು ಸೋಲೋ ಮತ್ತು ಗುಂಪು ಕೃತಿಗಳೆರಡರಲ್ಲೂ ಅಮೋಘ ಪ್ರದರ್ಶನ ನೀಡುತ್ತಿದ್ದಾರೆ. ಕನ್ನಡ ಜನಪದ ಸೊಗಡು, ಸ್ಥಳೀಯ ಅಮೇರಿಕನ್ ಕಥೆಗಳು, ಸಮಕಾಲೀನ ಮಹಿಳೆಯರು, ಪರಿಸರ ಮತ್ತು ಭೋಗಲಾಲಸೆ, ಅಲಂಕಾರಿಕ ನೃತ್ಯ ಕಥೆ ಇವು "ಕಥೆ ಮತ್ತು ಹಾಡಿನ" ಮೂಲ ವಸ್ತುಗಳು.

ಸ್ವತಃ ವರಕವಿ ದ.ರಾ.ಬೇಂದ್ರೆ ಅಭಿಮಾನಿಯಾದ ಅಪರ್ಣಾ 'ಬೇಂದ್ರೆ ನಮನ'ದಲ್ಲಿ ಬೇಂದ್ರೆ ಗೀತೆಗಳನ್ನು ನೃತ್ಯಕ್ಕೆ ಅಳವಡಿಸಿಕೊಂಡಿದ್ದಾರೆ. ಪ್ರತಿ ಕವಿತೆಯ ಸಾಹಿತ್ಯದ ರಸಾನುಭವವನ್ನು ಅನುಭವಿಸಿ, ಕೇವಲ ನಾಟ್ಯಕ್ಕೆ ಮಾತ್ರ ಮೀಸಲಾಗಿಡದೆ, ಸಣ್ಣ ಕತೆ ಹಾಗೂ ಪದ್ಯಗಳ ವರ್ಣನೆ, ಹಿನ್ನೆಲೆ ಸಾಲುಗಳ ನಡುವಿನ ಭಾವ, ಹುದುಗಿ ಹೋಗಿರುವ ಸಂದೇಶ ಎಲ್ಲವನ್ನೂ ಮೊಗೆದು, ನೃತ್ಯದ ಮೂಲಕ ಅರ್ಪಿಸಿದರು. ಖ್ಯಾತ ಬಂಗಾಳಿ ಲೇಖಕಿ ಮಹಾಶ್ವೇತಾದೇವಿ ಅವರ ಸಣ್ಣ ಕಥೆಯಾಧಾರಿತ 'ಶಿಕಾರಿ' ಪ್ರದರ್ಶನ ಅವರ ಸೃಜನಶೀಲತೆಗೆ ಕನ್ನಡಿ ಹಿಡಿದಿತ್ತು.

ಸಂಗೀತ ಸಂಯೋಜನೆಯನ್ನು ಪ್ರವೀಣ್ ಹಾಗೂ ಬೆಳಕು ಸಂಯೋಜನೆಯನ್ನು ಚೆನ್ನು ಎಸ್. ಮಠದ ಅವರು ನಿರ್ವಹಿಸಿದರು. ಸಂಘದ ಖಜಾಂಚಿ ಕೆ.ಆರ್. ರಾಮಮೂರ್ತಿ ಕಾರ್ಯಕ್ರಮ ನಿರ್ವಹಿಸಿದರು.

ಅಪರ್ಣಾ ಅವರ ನೃತ್ಯ ಜೀವನದ ಹಾದಿ ಹೂಹಾಸಿನಿಂದ ಕೂಡಿರಲಿ. ವಿಶ್ವದಾದ್ಯಂತ ಇನ್ನಷ್ಟು ಸಹೃದಯರಿಗೆ ಭರತನಾಟ್ಯ ಕಲೆಯನ್ನು ಪರಿಚಯಿಸುತ್ತ , ಆ ಮೂಲಕ ಭಾರತದ ಸಂಸ್ಕೃತಿ ಸೊಗಡು ಉಳಿದು, ಬೆಳೆಯಲೆಂದು ಅಪರ್ಣಾ ಮತ್ತು ತಂಡಕ್ಕೆ ಸಮಸ್ತ ದೆಹಲಿ ಕನ್ನಡಿಗರೆಲ್ಲರ ಪರವಾಗಿ ಹಾರೈಸುತ್ತೇವೆ.



# ಕಲುಮಂಗಿ ದಂಪತಿಗಳಿಗೆ ವಿದಾಯ



ಆರು ವರುಷಗಳ ದೆಹಲಿವಾಸದ ಸವಿ ನಂಟಿನ ಬಾಳ್ವೆಗೆ ಪ್ರೀತಿಯ ವಿದಾಯ ಹೇಳಿ ಮುಂಬೈ ಬದುಕಿಗೆ ಅಂಟಿಕೊಳ್ಳಲಿರುವ ಕಲುಮಂಗಿ ದಂಪತಿಗಳನ್ನು ಜನವರಿ 29 ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಆತ್ಮೀಯವಾಗಿ ಬೀಳ್ಕೊಡಲಾಯಿತು. ಸರಳ ಸಜ್ಜನಿಕೆಯ ಈ ಸಾಹಿತ್ಯಾಸಕ್ತ ದಂಪತಿಗಳು ಎಲ್ಲರಿಗೂ ಪ್ರಿಯರಾಗಿದ್ದರು. ಸಾಹಿತ್ಯ ಸಮಿತಿಯ ಸದಸ್ಯರಾಗಿ ಎಲ್ಲ ಕಾರ್ಯಕ್ರಮಗಳಲ್ಲೂ ಭಾಗವಹಿಸುತ್ತಿದ್ದ ಕೃಷ್ಣಮೂರ್ತಿ ಮತ್ತು ತುಳಸಾ ಕಲುಮಂಗಿ ಅವರು ಅನೇಕ ಕಥೆ–ಕವನಗಳನ್ನು ತೆಲುಗಿನಿಂದ ಕನ್ನಡಕ್ಕೆ ಮತ್ತು ಕನ್ನಡದಿಂದ ತೆಲುಗಿಗೆ ಅನುವಾದಿಸಿ ಒಂದು ರೀತಿಯ ಭಾಷಾಬಾಂಧವ್ಯವನ್ನು ಮೆರೆದಿದ್ದಾರೆ. ಅವರ ಅನುವಾದಗಳಿಗೆ ಅನೇಕ ಪ್ರಶಸ್ತಿಗಳೂ ದೊರೆಕಿವೆ. ಸಂಘದ ಮುಖವಾಣಿ 'ಅಭಿಮತ'ಕ್ಕಾಗಿ ಅನೇಕ ಲೇಖನಗಳನ್ನು, ಕತೆ, ಕವಿತೆಗಳನ್ನೂ ಬರೆದಿದ್ದಾರೆ. ಸಾಹಿತ್ಯ ಸಮಿತಿಯ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಮಾತನಾಡುತ್ತ ಕಲುಮಂಗಿಯವರು ದೆಹಲಿಗೆ ಬಂದಾಗಿನಿಂದ ಶುರುವಾದ ತಮ್ಮ ಒಡನಾಟ, ಸಾಹಿತ್ಯದ ಕುರಿತ ಚರ್ಚೆ, ಹಾಸ್ಯಪ್ರಜ್ಞೆ, ಅವರು ತೋರುತ್ತಿದ್ದ ಆಸಕ್ತಿ, ಸೃಜನಶೀಲ ಲವಲವಿಕೆಯ ವ್ಯಕ್ತಿತ್ವವನ್ನು ನೆನೆದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಕೃಷ್ಣಮೂರ್ತಿ ಕಲುಮಂಗಿ ಅವರಿಗೆ ಶಾಲು ಹೊದೆಸಿ, ಸ್ಮರಣಿಕೆ ಮತ್ತು ಪುಷ್ಪಗುಚ್ಛ ನೀಡಿ ಶುಭಕೋರಿದರು. ಉಪಾಧ್ಯಕ್ಷೆ ಉಷಾ ಭರತಾದ್ರಿ ಶ್ರೀಮತಿ ತುಳಸಾ ಕಲುಮಂಗಿ ಅವರಿಗೆ ಶಾಲು ಹೊದೆಸಿ, ರೇಣುಕಾ ನಿಡಗುಂದಿ ಪುಷ್ಪಗುಚ್ಛ ನೀಡಿ ಶುಭ ಹಾರೈಸಿದರು. ನಂತರ ಮಾತನಾಡಿದ ಕೃಷ್ಣಮೂರ್ತಿ ಕಲುಮಂಗಿ ಅವರು ಆರು ವರ್ಷಗಳ ದೆಹಲಿವಾಸದಲ್ಲಿ ಪ್ರೀತಿ–ವಿಶ್ವಾಸಗಳನ್ನು ತೋರಿದ ಸಹೃದಯ ಕನ್ನಡ ಮಿತ್ರರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಿದರು. ದೇಶದ ನಾನಾ ಭಾಗಗಳಲ್ಲಿ ಸುತ್ತಿ ಬಂದ ಅವರಿಗೆ ದೆಹಲಿ ಕನ್ನಡಿಗರಷ್ಟು ಅಕ್ಕರೆಯನ್ನು ಎಲ್ಲೂ ತೋರಿದ್ದಿಲ್ಲ ಎಂದು ನುಡಿದ ಕೃಷ್ಣಮೂರ್ತಿ ಅವರು ದೆಹಲಿಯ ಕುತುಬ್ ಮಿನಾರ್, ಆಗ್ರಾದ ತಾಜಮಹಲನ್ನು ಮರೆಯಬಹುದು, ಆದರೆ ದೆಹಲಿ ಕರ್ನಾಟಕ ಸಂಘ ಮತ್ತು ಪ್ರೀತಿ ತೋರಿದ ಕನ್ನಡಿಗರನ್ನು ಮರೆಯಲಾಗದು ಎಂದು ಭಾವಪೂರ್ಣವಾಗಿ ನುಡಿದರು. ಅಲ್ಲದೇ ಜನಕಪುರಿ ಕನ್ನಡ ಕೂಟದ ಸದಸ್ಯರೆಲ್ಲ ಒಂದೇ ಕುಟುಂಬದಂತಿದ್ದು ಅವರು ತೋರಿದ ಪ್ರೀತಿ, ಅಭಿಮಾನ ಅವಿಸ್ಮರಣೀಯ ಎಂದರು. ಕಲುಮಂಗಿ ದಂಪತಿಗಳಿಗೆ ಅವರ ಮುಂಬೈ ವಾಸ ಸುಖಕರವಾಗಲೆಂದು ಅವರ ಸಾಹಿತ್ಯ ಚಟುವಟಿಕೆಗಳು ನಿರಂತರವಾಗಿ ಸಾಗುತ್ತಿರಲೆಂದು ದೆಹಲಿ ಕರ್ನಾಟಕ ಸಂಘ ಮತ್ತು ಸಮಸ್ತ ದೆಹಲಿಗನ್ನಡಿಗರ ಪರವಾಗಿ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಶುಭ ಹಾರೈಸಿದರು. ಸಂಘದ ಖಜಾಂಚಿ ಕೆ.ಆರ್. ರಾಮಮೂರ್ತಿ ಕಾರ್ಯಕ್ರಮವನ್ನು ನಿರ್ವಹಿಸಿದರು.

## ಓದುಗರ ಅನಿಸಿಕೆ

‘ಅಭಿಮತ’ದ ಡಿಸೆಂಬರ್ ಸಂಚಿಕೆ ಓದಿ ಬಹಳೇ ಸಂತೋಷವಾಯಿತು. ಸ್ವಲ್ಪ ಬೇಸರವೂ ಆಯಿತು. ಏಕೆಂದರೆ ರಾಜ್ಯೋತ್ಸವದ ಸಂಭ್ರಮ ಸವಿಯಲು ನಾನು ಅಲ್ಲಿರಲಿಲ್ಲವಲ್ಲಾ ಎಂದು. ‘ಕನ್ನಡವೇ ಶ್ರೇಷ್ಠ’ ಸಾಂಸ್ಕೃತಿಕ ಸಂಜೆಯ ಬಗ್ಗೆ ಓದಿ, ಸುಂದರ ಚಿತ್ರಗಳನ್ನು ನೋಡಿ ಖುಷಿಯಾಯಿತು. ರೇಣುಕಾ ನಿಡಗುಂದಿಯವರು ಬರೆದ ಕವಿಋಷಿ ದ.ರಾ.ಬೇಂದ್ರೆಯವರ ಬಗೆಗಿನ ಲೇಖನ ಮನಮುಟ್ಟಿತು. ಉಷಾ ಭರತಾದ್ರಿಯವರ ‘ಭೈರಪ್ಪನವರ ಸಂದರ್ಶನ’, ಡಾ. ಹೆಗಡೆಯವರ ‘ಪಶ್ಚಿಮದತ್ತ ಕನ್ನಡದ ಜಗತ್ತು’ ಎಲ್ಲ ಲೇಖನಗಳು ಮನಸೂರೆಗೊಂಡವು. ಡಾ. ಪುರುಷೋತ್ತಮ ಬಿಳಿಮಲೆಯವರ, ‘ವಿದ್ಯೆ ಇಲ್ಲದ ಜಾತಕ ಮತ್ತು ನನ್ನ ಶಾಲೆ’ ಲೇಖನವಂತೂ ಅಭಿಮತದ ‘ಹೈಲೈಟ್’ ಎಂದರೆ ತಪ್ಪಾಗಲಾರದು! “ಕ್ರಿಯಾಸಿದ್ಧಿ ಸತ್ವೇ ಭವತಿ; ಮಹತಾನೋಪಕರಣೇ”(ಸಾಧನೆ ಸಿದ್ಧಿಸುವುದು ಅಂತಃಸತ್ವದಿಂದ; ಉಪಕರಣ–ಸಾಧನಗಳಿಂದಲ್ಲ) ಎಂಬ ಸಂಸ್ಕೃತದ ಉಕ್ತಿಗೆ ಅವರ ಬಾಲ್ಯ–ಇಂದಿನ ಸಾಧನೆ ಜೀವಂತ ಉದಾಹರಣೆ. (ಸರ್! ಇಷ್ಟೇ ಅಲ್ಲ ನಮಗೆ ನಿಮ್ಮ ಜೀವನ ಚರಿತ್ರೆಯನ್ನೆಲ್ಲ  ಓದಬೇಕೆನ್ನಿಸುತ್ತಿದೆ).

ಅಂತೂ ಡಿಸೆಂಬರ್ ‘ಅಭಿಮತ’ ಸಂಗ್ರಹಯೋಗ್ಯ. ಪತ್ರಿಕೆಯ ಬಳಗಕ್ಕೆಲ್ಲ ನನ್ನ ಪ್ರೀತಿಯ ನೆನಪು–ನಮಸ್ಕಾರಗಳು. ಮುಂದೆಯೂ ಇಂತೆಯೇ ಚೆಲುವು ಮೈದುಂಬಿ ಅಭಿಮತ ಕಂಗೊಳಿಸಲೆಂದು ನನ್ನ ಹಾರೈಕೆ.

**ನೂತನ ಆರ್. ಕುಲಕರ್ಣಿ**

ಕನ್ನಡ ರಾಜ್ಯೋತ್ಸವ ಸಂಭ್ರಮವನ್ನು ಅಭಿಮತವು ತನ್ನ ಡಿಸೆಂಬರ್ ಸಂಚಿಕೆಯ ಮುಖ ಹಾಗೂ ಒಳಪುಟಗಳಲ್ಲಿ ವಿಶಿಷ್ಟ ರೀತಿಯಲ್ಲಿ ವಿಂಗಡಿಸಿ ವಿಭಾಗಿಸಿಕೊಂಡು ವಿಜೃಂಭಿಸಿದ ವಿನೂತನಕ್ರಮ ದೆಹಲಿ ಕನ್ನಡಿಗರೆಲ್ಲರ ಸಹಮತಕ್ಕೆ ಸಾಕ್ಷಿಯಂತೆ ಕಾಣಿಸಿಕೊಂಡಿತು. ಒಂದಿಗೇ ನಮ್ಮೆಲ್ಲರನ್ನೂ ಮರುಳುಗೊಳಿಸಿ ಕಣ್ಣಾರೆ ಕಾಣಿಸಿಕೊಂಡಿರುವಂತೆಯೇ ಅನಿಸಿ ಗುಣುಗುಣಿಸಿ ಕುಣಿಯುವವರೊಂದಿಗೆ ಕೂಡಿಸಿಕೊಂಡು ಹಾಡುಗಾರರ ಸೆಡವು ಬಿನ್ನಾಣಗಳೊಂದಿಗೆ ಧ್ವನಿ ಏರಿಸಿ ಕನ್ನಡಿಗರೆಲ್ಲರ ಕಹಳೆ ಮೊಳಗುವಿಕೆಯಲ್ಲಿ ಸಹಭಾಗಿಗಳನ್ನಾಗಿಸಿ ಹೊಸ ಬೆಳಕಿಗೆ ಮಾರ್ಗದರ್ಶಕ ಎಂಬುದು ಖುಷಿ ನೀಡಿತು. ಹಾಗೆಯೇ ಒಳ ಪುಟಗಳಲ್ಲಿನ ಸ್ಫುಟವಾದ ನುಣುಪು ಕಾಗದದ ಹೊಳಪುಳ್ಳ ಚಿತ್ರ ಪುಟಗಳನ್ನು ಕಾಪಿಡಲೇಬೇಕಾಗಿ ಬಂದಿರುವ ಅನಿವಾರ್ಯತೆಗೂ ಸಂಚಿಕೆ ಕಾರಣವೆನ್ನಿಸಿತು. ಕಾರ್ಯಕಾರಿ ಸಮಿತಿಯ ಈ ಉಲ್ಲಾಸಮಯ ವಾತಾವರಣ ಸೃಷ್ಟಿಯು ಇಲ್ಲಿರುವ ಕನ್ನಡಿಗರೆಲ್ಲರ ಸೌಭಾಗ್ಯಕ್ಕೆ ದಾರಿಯಾಗಿರಲಿ ಎಂಬ ಪ್ರೀತಿಯ ಹಾರೈಕೆಗಳು.

❑ **ಕೀರಿಕ್ಕಾಡು ವನಮಾಲ ಕೇಶವ ಭಟ್ಟ, ಕಾಸರಗೋಡು**

## ಮುಗ ಉವಾಚ

ಅಮ್ಮಾ ನಮ್ಮ ಈ ದೇಶದಲ್ಲಿ
ಪ್ರತಿಭೆಗೆ ಇಲ್ಲಾ ಬೆಲೆ
ಒದ್ದಾಡಲೇಕೆ ಇಲ್ಲೇ?
ಕಡಿದು ಚೆಲ್ಲು, ನೀ ಕರುಳ ಬಳ್ಳಿ !
ನೆವ ಹೇಳುತಿರುವೆ ತಾಯೆ.
ಬಿಡು ಈ ನೆಲದ ಮಾಯೆ !

ಇಂಥ ಈ ದೇಶದಲ್ಲಿ ದುಡ್ಡಿಲ್ಲದೇ
ಬಳಲಲಿ ಎಷ್ಟು ದಿನಾ?
ಒಂದೊಮ್ಮೆ ಬಿಡು ನೀ ನನ್ನಾ.
ದುಡ್ಡು ಕಳಿಸುವೆ; ದೊಡ್ಡ
ಮನೆಯ ಕೊಡಿಸುವೆ.
ನಾ ಅಲ್ಲಿ ಹೋಗಿ ಇರುವೆ.
ಅಮೇರಿಕೆಯಲ್ಲಿ ಬಾಳುವೆ ॥

ಅಲ್ಲಿ ಹಾರಿ, ನಿನ್ನ ಪ್ರೀತಿ ಮೀರಿ,
ನಿರ್ಭಾವ ಸ್ಥಿತಿಗೆ ತಲುಪಿ,
ಉಸಿರಿಲ್ಲದೆಯೂ ಬದುಕಿ.
ರಿಸೆಷನ್ ಆಗಲು ಬಂದೇ ಬರುವೆ.
ಮತ್ತೆ ಬೆಂಗಳೂರ ಕಡೆಗೆ;
ವಿಪ್ರೋ, ಇನ್‌ಫೋಸಿಸ್‌ದೆಡೆಗೆ ! ॥

❑ **ನೂತನ ಆರ್. ಕುಲಕರ್ಣಿ**

**(ಕವಿ ಲಕ್ಷ್ಮಣರಾವ್ ಅವರ ಕ್ಷಮೆ ಕೋರುತ್ತಾ ಅವರ ‘ಅಮ್ಮಾ ನಿನ್ನ ಎದೆಯಾಳದಲ್ಲಿ’ ಹಾಡನ್ನು ತಿರುಚಿ ಬರೆದಿರುತ್ತೇನೆ)**


# Saujanya Printing Press

A HOUSE OF QUALITY PRINTING

C-95, Okhla Industrial Area, Phase-I,
New Delhi - 110 020
Phone : 26815778, 41611143
Mobile : 9811104398, 9811604398
e-mail : rvprintingpress@gmail.com / hpgp2006@gmail.com

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

ಸೌಜನ್ಯ ಪ್ರಿಂಟಿಂಗ್ ಪ್ರೆಸ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್


ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ

ಶ್ರದ್ಧಾಂಜಲಿ

# ಗ್ರಂಥ ಸಂಪಾದನಕಾರ, ಖ್ಯಾತ ಸಂಶೋಧಕ ಎಲ್. ಬಸವರಾಜು ನಿಧನ



ಕನ್ನಡ ಸಾಹಿತ್ಯಲೋಕದ ಹೆಸರಾಂತ ಸಂಶೋಧಕ, ಗ್ರಂಥ ಸಂಪಾದನಕಾರ, ಹಿರಿಯ ಸಾಹಿತಿ ಎಲ್. ಬಸವರಾಜು (93) ಅವರು ಜನವರಿ 29ರಂದು ಮೈಸೂರಿನಲ್ಲಿ ನಿಧನರಾದರು.

ಕೋಲಾರ ಜಿಲ್ಲೆಯ ಎಡಗೂರಿನಲ್ಲಿ 1919 ಅಕ್ಟೋಬರ್ 5 ರಂದು ಬಸವರಾಜು ಅವರು ಜನಿಸಿದರು. ಇವರ ತಾಯಿ ವೀರಮ್ಮ, ತಂದೆ ಲಿಂಗಪ್ಪ.ಎಡಗೂರಿನಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು, ತುಮಕೂರಿನ ಸಿದ್ಧಗಂಗೆಯಲ್ಲಿ ಪ್ರೌಢಶಿಕ್ಷಣ ಮುಗಿಸಿದರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿಎ ಮತ್ತು ಮೈಸೂರು ವಿವಿಯಲ್ಲಿ ಎಂಎ ಪದವಿ ಗಳಿಸಿದರು. ಮೂರು ದಶಕಗಳಿಗೂ ಹೆಚ್ಚು ಕಾಲ ಮೈಸೂರು ವಿವಿಯ ಕನ್ನಡ ವಿಭಾಗದಲ್ಲಿ ಅಧ್ಯಾಪಕರಾಗಿ ಕಾರ್ಯ ನಿರ್ವಹಿಸಿದರು. ಅಪಾರ ಶಿಷ್ಯವರ್ಗವನ್ನು ಸಂಪಾದಿಸಿದರು.

ಸಂಶೋಧನೆಯ ಜೊತೆಗೆ ಸೃಜನಶೀಲ ಸಾಹಿತ್ಯ ರಚನೆಯಲ್ಲೂ ತಮ್ಮನ್ನು ತಾವು ತೊಡಗಿಸಿಕೊಂಡವರು ಬಸವರಾಜು. ವಚನ ಸಾಹಿತ್ಯ, ವೀರಶೈವ ಧರ್ಮದ ಬಗ್ಗೆ ಅಧಿಕಾರಯುತವಾಗಿ, ಆಧಾರಗಳ ಸಮೇತ ವಿವರಿಸಬಲ್ಲ ದಣಿಯದ ಜೀವ ಎಲ್ ಬಿ, ಮನಸ್ಸು ಎಷ್ಟು ಮೃದುವೋ ವಿಷಯ ಪ್ರತಿಪಾದನೆಯಲ್ಲಿ ಅಷ್ಟೇ ಕಠಿಣ. ಕವಿ ಮನಸ್ಸು, ಬಂಡಾಯಗಾರರ ಛಲ ಅವರ ಗುಣ.

ಎಲ್. ಬಸವರಾಜು ಅವರು ಗ್ರಂಥ ಸಂಪಾದನೆಯ ಕ್ಷೇತ್ರದಲ್ಲಿ, ಅನೇಕ ಹೊಸ ಆವಿಷ್ಕಾರಗಳನ್ನು ಮಾಡಿದ್ದಾರೆ. ವಿಶಿಷ್ಟವಾದ ದೃಷ್ಟಿಕೋನಗಳನ್ನು ಅಳವಡಿಸಿಕೊಂಡಿದ್ದಾರೆ. ಕನ್ನಡ ಸಾಹಿತ್ಯದ ಅಭಿಜಾತ ಕೃತಿಗಳು ಮತ್ತು ಜ್ಞಾನದ ಆಕರಗಳನ್ನು, ಪಂಡಿತರೇನೂ ಅಲ್ಲದ ಜನಸಾಮಾನ್ಯರ ಅಳವಿಗೆ ನಿಲುಕುವಂತೆ ನೀಡಬೇಕೆನ್ನುವುದೇ ಅವರ ಗುರಿಯಾಗಿತ್ತು. ಆದ್ದರಿಂದಲೇ ಅವರು ಅನೇಕ ಮಹಾಕಾವ್ಯಗಳ ಸರಳವಾದ ಗದ್ಯರೂಪಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಪ್ರಾಚೀನ ಕಾವ್ಯಗಳಲ್ಲಿ ಬರುವ ಪದ್ಯಗಳನ್ನು ಬಿಡಿ ಪದಗಳಾಗಿ ಒಡೆದು, ಗದ್ಯಸಮೀಪವಾದ ವಾಕ್ಯರಚನೆಯಲ್ಲಿ ಮರುಜೋಡಣೆ ಮಾಡುವ ಪ್ರಯತ್ನವನ್ನೂ ಅವರು ಮಾಡಿದ್ದಾರೆ.

ಎಲ್ ಬಿ ಅವರಿಗೆ ಅನೇಕ ಪ್ರಶಸ್ತಿ ಗೌರವಗಳು ಸಂದಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಪ್ರೊ. ಸಂ. ಶಿ. ಭೂಸನೂರ ಮಠ ಪ್ರಶಸ್ತಿ, ಪಂಪ ಪ್ರಶಸ್ತಿ, ಚಾವುಂಡರಾಯ ಪ್ರಶಸ್ತಿ, ಬಸವ ಪುರಸ್ಕಾರ ರಾಷ್ಟ್ರೀಯ ಸಮ್ಮಾನ, ಕೇಂದ್ರ ಸಾಹಿತ್ಯ ಅಕಾಡೆಮಿ ಭಾಷಾ ಸಮ್ಮಾನ, ರಾಷ್ಟ್ರಕವಿ ಎಂ ಗೋವಿಂದ ಪೈ ಪ್ರಶಸ್ತಿ, ಮೈಸೂರು ವಿವಿಯ ಗೌರವ ಡಾಕ್ಟರೇಟ್ ಇತ್ಯಾದಿ. ಚಿತ್ರದುರ್ಗದಲ್ಲಿ ನಡೆದ 75ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ನಾಟಕಾಮೃತ ಬಿಂದುಗಳು, ಭಾರತ ರೂಪಕ, ರಾಮಾಯಣ ನಾಟಕ ತ್ರಿವೇಣಿ, ಅಲ್ಲಮನ ವಚನ ಚಂದ್ರಿಕೆ, ಅಲ್ಲಮನ ವಚನಗಳು, ಬಸವಣ್ಣನವರ ವಚನಗಳು, ಸರ್ವಜ್ಞನ ವಚನಗಳು, ಅಕ್ಕನ ವಚನಗಳು, ದೇವರದಾಸಿಮಯ್ಯ ವಚನಗಳು, ಬಸವ ವಚನಾಮೃತ, ಪರಮಾರ್ಥ, ಶಿವದಾಸ ಗೀತಾಂಜಲಿ, ತಿರುಮಲಾರ್ಯ ಮತ್ತು ಚಿಕ್ಕದೇವರಾಜ ಒಡೆಯರು, ಶೃಂಗಾರ ನಿದರ್ಶನ, ಮಹಾದೇವನ ಮಹಾಲಿಂಗೇಂದ್ರ ವಿಜಯ, ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯ ಸಂಪಾದನೆ, ವೀರಶೈವ ತತ್ವ ಮತ್ತು ಆಚರಣೆ, ಕನ್ನಡ ಛಂದಸ್ಸಂಪುಟ, ಪಂಪನ ಆದಿ ಪುರಾಣ, ವಚನ ಚಿಂತನ, ಕಲುಬುರ್ಗಿಯ ಶರಣಬಸವ, ತೊರವೆ ರಾಮಾಯಣ ಸಂಗ್ರಹ, ಹರಿಹರನು ಕಂಡ ಜ್ಯೋತಿರ್ಲಿಂಗದ ಮೂರು ಮುಖಗಳು, ಶಬ್ದಮಣಿದರ್ಪಣ, ಶರಣ ಬಸವ ಸಂಪುಟ ಹಾಗೂ ಮುಂತಾದವು.

ತಮ್ಮ ಜೀವನದ ಬಹುಪಾಲು ಅವಧಿಯನ್ನು ಕನ್ನಡ ಕವಿ, ವೀರಶೈವ ಸಾಹಿತ್ಯ–ಸಿದ್ಧಾಂತಗಳ ಶೋಧನೆ, ಅಧ್ಯಯನ, ವ್ಯಾಖ್ಯಾನ, ಸಂಪಾದನೆಗಳಲ್ಲಿ ಕಳೆದಿದ್ದ ಎಲ್. ಬಿ. ಅಪ್ಪಟ ಮಾನವತಾವಾದಿ. 'ಕಲಿಯುವವರೆ ಕಲಿಸಲು ಯೋಗ್ಯರು', ಮಾನವ ಜಾತಿ ತಾನೊಂದೇ ವಲಂ' ಎಂಬುದರಲ್ಲಿ ನಂಬಿಕೆಯಿಟ್ಟ ಜ್ಞಾನವೃದ್ಧ ಎಲ್ ಬಿ ಅವರ ಚಿಂತನೆಗಳು ಸದಾ ಅನುಕರಣೀಯ. ಅಗಲಿದ ಮಹಾನ್ ಚೇತನಕ್ಕೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿ.

## ಮುಸ್ಸಂಜೆ ಕಥಾ ಪ್ರಸಂಗದ 'ಬೂಸಿ ಬಸ್ಯಾ' ಇನ್ನಿಲ್ಲ



ಕನ್ನಡ ಚಿತ್ರರಂಗದ ಹಾಸ್ಯನಟ ಮತ್ತು ರಂಗಭೂಮಿ ಕಲಾವಿದ ಕರಿಬಸವಯ್ಯ ಅವರು ಫೆಬ್ರವರಿ 3ರಂದು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರು ಪತ್ನಿ ಮತ್ತು ಪುತ್ರಿಯನ್ನು ಅಗಲಿದ್ದಾರೆ.

ರಂಗಭೂಮಿ ಹಿನ್ನೆಲೆಯಿಂದ ಬಂದ ಕರಿಬಸವಯ್ಯ ಸುಮಾರು 300 ಚಿತ್ರಗಳಲ್ಲಿ ನಟಿಸಿದ್ದರು. ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಉಂಡೂ ಹೋದ ಕೊಂಡೂ ಹೋದ' ಅವರ ಮೊದಲ ಚಿತ್ರ 'ತಾಯಿ', 'ಉಲ್ಟಾಪಲ್ಟಾ', 'ಪರಿಚಯ', 'ಯಾರಿಗೆ ಸಾಲತ್ತೆ ಸಂಬಳ', 'ಜನುಮದ ಜೋಡಿ', 'ಹೋಳಿ', 'ನೂರೂ ಜನ್ಮಕು', 'ಮುಂಗಾರಿನ ಮಿಂಚು', 'ಕೊಟ್ರೇಶಿ ಕನಸು', 'ಭೂಮಿ ತಾಯಿಯ ಚೊಚ್ಚಲ ಮಗ', 'ಅರಮನೆ' ಮುಂತಾದ ಚಿತ್ರಗಳಲ್ಲಿ ಹಾಸ್ಯಕಲಾವಿದರಾಗಿ ಅವರು ನಟಿಸಿದ್ದರು. 'ಸಂಗೊಳ್ಳಿ ರಾಯಣ್ಣ', 'ಬ್ರೇಕಿಂಗ್ ನ್ಯೂಸ್', 'ನೆನಪಿನಂಗಳ', 'ಮಂಜುನಾಥ ಬಿಎಎಲ್‌ಎಲ್‌ಬಿ ಮುಂತಾದವು ಅವರ ಬಿಡುಗಡೆಯಾಗಬೇಕಿದ್ದ ಅವರ ಅಭಿನಯದ ಚಿತ್ರಗಳು.

ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜಿನಲ್ಲಿ ಲ್ಯಾಬ್ ಅಸಿಸ್ಟೆಂಟ್ ಆಗಿ ಕೆಲ ವರ್ಷ ಅವರು ಸೇವೆ ಸಲ್ಲಿಸಿದ್ದರು. 'ಕೊಟ್ರೇಶಿ ಕನಸು' ಚಿತ್ರಕ್ಕೆ ರಾಜ್ಯ ಪ್ರಶಸ್ತಿಯೂ ಅವರ ಮುಡಿಗೇರಿತ್ತು. ಕರಿಬಸವಯ್ಯ ಒಳ್ಳೆ ಹರಿಕಥಾ ವಿದ್ವಾಂಸರೂ ಆಗಿದ್ದರು. ಅದು ಅವರಿಗೆ ಕುಟುಂಬದಿಂದ ಬಂದ ಬಳುವಳಿ. ಗುಣಮುಖ ನಾಟಕದ 'ಅಲಾವಿಖಾನ್', ಕರ್ವಾಲೋದ 'ಬಿರಿಯಾನಿ ಕರಿಯ' ಮುಸ್ಸಂಜೆ ಕಥಾ ಪ್ರಸಂಗದ 'ಬೂಸಿ ಬಸ್ಯಾ' ಬದುಕಿನ ಮೇಕಪ್ ತೊರೆದು ಹೊರ ನಡೆದಿದ್ದಾರೆ. ಜನುಮದ ಜೋಡಿಯ 'ಕುಡುಕ ಅಂದಾನಿ' ಕೊಟ್ರೇಶಿ ಕನಸು ಚಿತ್ರದ 'ದಿಬ್ಬ' ಇನ್ನು ಕೇವಲ ನೆನಪು ಮಾತ್ರ. ಹಿಂದೊಮ್ಮೆ ಹೊಸಕೋಟೆಯ 'ಜನಪದರು' ನಾಟಕ ತಂಡ ದೆಹಲಿ ಕರ್ನಾಟಕ ಸಂಘದಲ್ಲಿ 'ಬುಡ್ಡನಾದ' ನಾಟಕ ಪ್ರದರ್ಶನ ನೀಡಿದ್ದು ಹಾಗೂ ಕರಿಬಸವಯ್ಯ ಅವರ ಅಭಿನಯವನ್ನು ದೆಹಲಿ ಕನ್ನಡಿಗರು ಮರೆತಿಲ್ಲ. ಅಗಲಿದ ಚೇತನಕ್ಕೆ ನಮ್ಮ ನೆನಪಿನ ಶ್ರದ್ಧಾಂಜಲಿ.

## ಡಿ.ವಿ. ವಿಜಯಕುಮಾರ್ ಇನ್ನಿಲ್ಲ



ಪ್ರಧಾನ ಮಂತ್ರಿಗಳ ಕಛೇರಿಯಲ್ಲಿ ವಾರ್ತಾಧಿಕಾರಿಯಾಗಿ ಒಂದೂವರೆ ದಶಕಕ್ಕೂ ಮೀರಿ ಸೇವೆ ಸಲ್ಲಿಸಿದ್ದ ಭಾರತೀಯ ವಾರ್ತಾ ಸೇವೆಯ ಹಿರಿಯ ಅಧಿಕಾರಿ ಡಿ.ವಿ. ವಿಜಯಕುಮಾರ್ ಜನವರಿ 26ರಂದು ದೆಹಲಿಯಲ್ಲಿ ಅಸ್ತಂಗತರಾದರು. ದಿವಂಗತರು ಆಕಾಶವಾಣಿ ಹಾಗೂ ಪಿ.ಐ.ಬಿ. ಇತ್ಯಾದಿ ಸಂಸ್ಥೆಗಳಲ್ಲೂ ಸೇವೆ ಸಲ್ಲಿಸಿದ್ದರು.

ತಮ್ಮ ಅತ್ಯಂತ ಜವಾಬ್ದಾರಿಯುತ ಕರ್ತವ್ಯ ನಿರ್ವಹಣೆಯ ಸಮಯದಲ್ಲಿ ವಿಜಯಕುಮಾರ್ ಅವರು ದಿವಂಗತ ರಾಜೀವ್ ಗಾಂಧಿಯವರಿಂದ ಮೊದಲಾಗಿ ಇಂದಿನ ಪ್ರಧಾನಿ ಮನಮೋಹನ್ ಸಿಂಗ್ ಅವರೂ ಸೇರಿದಂತೆ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು. ದಕ್ಷತೆ, ಕಾರ್ಯತತ್ಪರತೆ ಹಾಗೂ ಪ್ರಾಮಾಣಿಕತೆಗಳಿಗೆ ಹೆಸರಾಗಿದ್ದ ವಿಜಯಕುಮಾರ್ ಸ್ವಭಾವತಃ ಅತ್ಯಂತ ಸರಳ ಹಾಗೂ ಸಜ್ಜನಿಕೆಯ ವ್ಯಕ್ತಿ. ಕನ್ನಡ ಚಲನಚಿತ್ರಗಳನ್ನು ಕನ್ನಡೇತರರಿಗೆ ಪರಿಚಯಿಸಲು ತಾವೇ ಸ್ವತಃ ಸಂಭಾಷಣೆಗಳನ್ನು ಇಂಗ್ಲಿಷಿಗೆ ಭಾಷಾಂತರಿಸಿ ದೃಶ್ಯಗಳ ಅಡಿಯಲ್ಲಿ ಸಬ್ ಟೈಟಲ್ಸ್ ಇರುವಂತೆ ಅವರು ಶ್ರಮಿಸಿದ್ದರೂ ಕೂಡ.

ವಿಜಯಕುಮಾರ್ ಅವರ ಇಚ್ಛೆಯಂತೆ ಅವರ ದೇಹವನ್ನು ವೈದ್ಯಕೀಯ ವಿಜ್ಞಾನವನ್ನು ಕಲಿಯುವ ವಿದ್ಯಾರ್ಥಿಗಳಿಗೆ ನೆರವಾಗಲೆಂದು ಭಾರತೀಯ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ದಾನವಾಗಿ ನೀಡಿದ್ದು ನಿಜಕ್ಕೂ ಇತರರಿಗೂ ಮಾದರಿಯಾಗಿರುವಂತಹದ್ದು. ದಿವಂಗತರು ಮಡದಿ ಸರೋಜಕುಮಾರಿ ಹಾಗೂ ಮಗ ವಿಕಾಸ್ ಅವರನ್ನು ಅಗಲಿದ್ದಾರೆ. ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿದ್ದ ಅವರು ಸಂಘದ ಬಹುತೇಕ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪ್ರೇಕ್ಷಕರಾಗಿ ಹಾಜರಿದ್ದು ಸದಾ ಪ್ರೋತ್ಸಾಹ ನೀಡುತ್ತಿದ್ದರು. ಅಗಲಿದ ಚೇತನಕ್ಕೆ ನಮ್ಮ ಹೃತ್ಪೂರ್ವಕ ಶ್ರದ್ಧಾಂಜಲಿ.



ಗಣರಾಜ್ಯೋತ್ಸವದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು



ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಗಣರಾಜ್ಯೋತ್ಸವ

# 2011 ರಾಷ್ಟ್ರೀಯ ಶೌರ್ಯ ಪ್ರಶಸ್ತಿ ಪುರಸ್ಕೃತ ಕನ್ನಡ ಪುಟಾಣಿಗಳು

## ಸಮಯ ಪ್ರಜ್ಞೆ ಮೆರೆದ ಬಾಲಕಿ

ಒಂಭತ್ತನೇ ತರಗತಿಯಲ್ಲಿ ಓದುತ್ತಿರುವ ಬೆಂಗಳೂರಿನ ಕುಮಾರಿ ಸಿಂಧುಶ್ರೀ 20.08.2010ರಂದು ತನ್ನ ತಾಯಿಯ ಬ್ಯಾಗಿನಿಂದ ಯಾರೋ ಪರ್ಸನ್ನು ತೆಗೆದಿರುವುದನ್ನು ಗಮನಿಸುತ್ತಾಳೆ. ಬಸ್ಸಿನಲ್ಲಿ ಇಬ್ಬರು ಜೇಬುಗಳ್ಳರಿದ್ದು, ಒಬ್ಬಳು ತಾಯಿಯ ಪರ್ಸನ್ನು ಕದ್ದು, ಬೇರೊಂದು ಬಸ್ಸನ್ನು ಏರುತ್ತಿರುವುದನ್ನು ಗಮನಿಸುತ್ತಾಳೆ. ತಾಯಿಯು ಬಳಿ ಪರ್ಸ್ ಇಲ್ಲದಿರುವುದನ್ನು ಖಚಿತಪಡಿಸಿಕೊಂಡು ತಾಯಿಗೆ ಏನೂ ಹೇಳದೆ ಮತ್ತೊಂದು ಬಸ್ಸನ್ನು ಜೇಬುಗಳ್ಳಿ ಏರಿದ್ದನ್ನು ಕಂಡು, ಕಳ್ಳಿಯನ್ನು ಹಿಡಿಯಲು ಆ ಬಸ್ಸಿನ ಹಿಂದೆ ಓಡುತ್ತಾಳೆ. ಆದರೆ ಬಸ್ಸು ಚಲಿಸಲು ಪ್ರಾರಂಭಿಸಿದ್ದರಿಂದ ಬಸ್ಸನ್ನು ಏರಲು ಸಾಧ್ಯವಾಗದೇ ಬಸ್ಸಿನ ಮುಂದೆ ಬಂದು ನಿಂತು ಚಾಲಕನ ಗಮನ ಸೆಳೆದು ಬಸ್ಸನ್ನು ನಿಲ್ಲಿಸಿ, ಬಸ್ಸಿನ ಎಲ್ಲಾ ಬಾಗಿಲುಗಳನ್ನು ಮುಚ್ಚಲು ಕೋರುತ್ತಾಳೆ. ಅಷ್ಟರಲ್ಲಿ ಅಲ್ಲಿಗೆ ಬಂದ ಮಹಿಳಾ ಪೋಲೀಸ್ ಪೇದೆಯೊಂದಿಗೆ ಸೇರಿ ಕಳ್ಳಿಯನ್ನು ಗುರುತಿಸುತ್ತಾಳೆ. ಕಳ್ಳಿಯ ಬಳಿ ತನ್ನ ತಾಯಿಯ ಪರ್ಸ್ ಮಾತ್ರವಲ್ಲದೆ ಇನ್ನೂ 30 ಪರ್ಸ್‌ಗಳು ದೊರೆತವು. ಈ ಚಿಕ್ಕ ಬಾಲಕಿಯು ಪ್ರದರ್ಶಿಸಿದ ಧೈರ್ಯ, ಸಾಹಸ ಮತ್ತು ಸಮಯ ಪ್ರಜ್ಞೆಯಿಂದ ತನ್ನ ತಾಯಿಗೆ ಸೇರಿದ ಪರ್ಸನ್ನು ವಾಪಸ್ಸು ಪಡೆಯಲು ಹಾಗೂ ಕಳ್ಳಿಯನ್ನು ಹಿಡಿಯುವಲ್ಲಿ ಸಫಲಳಾಗಿರುತ್ತಾಳೆ.



ಶೌರ್ಯ ಪ್ರಶಸ್ತಿ ಪಡೆದ ಮಕ್ಕಳಿಗೆ ಅಭಿನಂದನೆ

## ಶೌರ್ಯ ಮೆರೆದ ಬಾಲಕ

ಒಂಭತ್ತನೇ ತರಗತಿಯಲ್ಲಿ ಓದುತ್ತಿರುವ ಸಂದೇಶನಿಗೆ ಮಾತು ಬರುವುದಿಲ್ಲ. ಕಿವಿ ಕೇಳುವುದಿಲ್ಲ. ಮಾತು ಬಾರದಿದ್ದರೆ ಏನಂತೆ? ಕಿವಿ ಕೇಳದಿದ್ದರೆ ಏನಂತೆ? ಶೌರ್ಯ ಪ್ರದರ್ಶಿಸಲು, ಕಷ್ಟದಲ್ಲಿರುವವರ ಜೀವ ಉಳಿಸಲು ನಾನು ಸಶಕ್ತ ಎಂಬ ಸಂದೇಶವನ್ನು ಸಾರಿದ್ದಾನೆ ಈ ಬಾಲಕ.

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಬಾಳೆಕೊಪ್ಪ ಗ್ರಾಮದ ಹೆಗ್ಗಾರಿನಲ್ಲಿ ಕುಟುಂಬದ ಕೆಲವು ಸದಸ್ಯರು ನದಿಯಲ್ಲಿ ಈಜಾಡುತ್ತಿದ್ದಾಗ ರಶ್ಮಿ ಎಂಬ ಬಾಲಕಿ ಕಾಲು ಜಾರಿ ನೀರಿನಲ್ಲಿ ಬಿದ್ದು ಮೇಲೆ ಬರಲಾಗದೆ ಒದ್ದಾಡುತ್ತಿದ್ದಳು.

ಇಷ್ಟೆಲ್ಲಾ ನಡೆಯುವಾಗ, ಕಿವಿಕೇಳದ, ಮಾತು ಬಾರದ ಸಂದೇಶನೂ ಅವನ ಪಾಡಿಗೆ ಅವನು ಈಜಾಡುತ್ತಿದ್ದ. ಅವನು ರಶ್ಮಿಯ ಸಮೀಪವೇ ಇದ್ದರೂ, ಅವಳು ಕೂಗಿಕೊಳ್ಳುತ್ತಿರುವುದನ್ನಾಗಲಿ, ದಂಡೆಯ ಮೇಲೆ ಇದ್ದ ಪೋಷಕರು ಕೂಗುತ್ತಿರುವುದನ್ನಾಗಲಿ ಆಲಿಸಲಿಲ್ಲ. ಆಲಿಸಲು ಸಾಧ್ಯವೂ ಇರಲಿಲ್ಲ.

ಆಗ ಕೆಲವರು ಸಂದೇಶನತ್ತ ಕಲ್ಲುಗಳನ್ನು ಬೀರಿ, ಅವನ ಗಮನ ಸೆಳೆಯಲು ಯಶಸ್ವಿಯಾದರು. ರಶ್ಮಿ ಮುಳುಗುತ್ತಿರುವುದನ್ನೂ, ಅವಳನ್ನು ರಕ್ಷಿಸಬೇಕೆಂದೂ ಅವನಿಗೆ ಸಂಜ್ಞೆಯ ಮೂಲಕವೇ ಆಂಗಿಕಾಭಿನಯದ ಮೂಲಕ ಸೂಚಿಸಲಾಯಿತು.

ಸಂದೇಶನ ಪ್ರಜ್ಞೆ ಜಾಗೃತವಾಯಿತು. ಅಪಾಯದ ಮುನ್ಸೂಚನೆಯನ್ನು ಅವನು ಗ್ರಹಿಸಿದ. ಅಷ್ಟರಲ್ಲಿ ರಶ್ಮಿ ಮುಳುಗಿ ಏಳು ನಿಮಿಷಗಳಾಗಿದ್ದವು. ಸಂದೇಶ ಸರಸರನೆ ಅವಳು ಮುಳುಗಿದ್ದ ಕಡೆಗೆ ಧಾವಿಸಿದ. ಮುಳುಗು ಹಾಕಿ ಅವಳ ತಲೆಗೂದಲನ್ನು ಎಳೆದುಕೊಂಡು ಬಂದು ಕಲ್ಲುಬಂಡೆಯ ಮೇಲೆ ಮಲಗಿಸಿದ.

ಅಲ್ಲದೇ ಅವಳ ಹೊಟ್ಟೆಯನ್ನು ಅದುಮಿ ನೀರು ಹೊರಬರುವಂತೆ ಮಾಡಿ, ಪ್ರಥಮ ಚಿಕಿತ್ಸೆ ನೀಡಿ ಅವಳ ಜೀವ ಉಳಿಸಿದ. ಸಮಯ ಪ್ರಜ್ಞೆಯನ್ನು ತೋರಿ ಮಾತು ಬಲ್ಲವರ ಮಾತು ಮೂಕವಾಗುವಂಥ ಅಚ್ಚರಿಯ ಶೌರ್ಯ ಮೆರೆದ.

ತಮ್ಮ ಧೈರ್ಯ, ಸಾಹಸ ಹಾಗೂ ಸಮಯ ಪ್ರಜ್ಞೆಗಳಿಂದ ಶೌರ್ಯ ಪ್ರದರ್ಶಿಸಿ ಕರ್ನಾಟಕದ ಹಿರಿಮೆ-ಗರಿಮೆಯನ್ನು ಹೆಚ್ಚಿಸಿದ ಇವರ ಸಾಧನೆ ಅಭಿನಂದನೀಯ ಹಾಗೂ ಅನುಕರಣೀಯ.

**ಇವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು**

Delhi Karnataka Sangha's Abhimatha Monthly,
Feb-2012, Price Rs.1/- RNI Regn. No. 53405/91, DL-SW-15/4016/10-11-12
Printout Date : Feb 8th / 9th, Postal Date :10th / 11th, Total Pages-24

# ಗಣರಾಜ್ಯೋತ್ಸವ ದಿನದಂದು ಕಂಗೊಳಿಸಿದ ರಾಷ್ಟ್ರಪತಿ ಭವನ



Editor: Smt.Usha Bharatadri, Printed & Published by C.M. Nagaraja General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at Saujanya Printing Press, C-95, Okhla Industrial Area, Phase-I, New Delhi-110020, Tel: 26815778, 40520770